ಕೌಟುಂಬಿಕ ಹಿಂಸೆ ಮತ್ತು ಮಹಿಳೆ

(ಕನ್ನಡ ವಿಶ್ವವಿದ್ಯಾಲಯಕ್ಕೆ ಮಾಸ್ಟರ ಆಫ್ ಫಿಲಾಸಫಿ (ಎಂ. ಫಿಲ್)
ಪದವಿಗಾಗಿ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕರು
ಶಿವಾನಂದಾಚಾರ್ ಬಡಿಗೇರ್

ಮಾರ್ಗದರ್ಶಕರು
ಡಾ. ಶೈಲಜ ಇ. ಹಿರೇಮಠ
ಪ್ರವಾಚಕರು
ಮಹಿಳಾ ಅಧ್ಯಯನ ವಿಭಾಗ

ಭಾಷಾನಿಕಾಯ
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೭

131

ಕೌಟುಂಬಿಕ ಹಿಂಸೆ ಮತ್ತು ಮಹಿಳೆ

(ಕನ್ನಡ ವಿಶ್ವವಿದ್ಯಾಲಯಕ್ಕೆ ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್)
ಪದವಿಗಾಗಿ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕ

ಶಿವಾನಂದಾಚಾರ್ ಬಡಿಗೇರ್

ಮಾರ್ಗದರ್ಶಕರು

ಡಾ. ಶೈಲಜ ಇಂ. ಹಿರೇಮಠ

ಪ್ರವಾಚಕರು

ಮಹಿಳಾ ಅಧ್ಯಯನ ವಿಭಾಗ

ಭಾಷಾನಿಕಾಯ

ಮಹಿಳಾ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೭

ಪ್ರಮಾಣ ಪತ್ರ

ಕೌಟುಂಬಿಕ ಹಿಂಸೆ ಮತ್ತು ಮಹಿಳೆ ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಡಾ. ಶೈಲಜ ಇಂ. ಹಿರೇಮಠ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಹಂಪಿ, ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧವನ್ನು ಈ ಮೊದಲು ನಾನು ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ : 30.7.2007

ಶಿವಾನಂದಾಚಾರ್ ಬಡಿಗೇರ್
ಸಂಶೋಧನಾ ವಿದ್ಯಾರ್ಥಿ
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ದೃಢೀಕರಣ ಪತ್ರ

ಶಿವಾನಂದಾಚಾರ್ ಬಡಿಗೇರ್ ಇವರು ಕೌಟುಂಬಿಕ ಹಿಂಸೆ ಮತ್ತು ಮಹಿಳೆ ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಂಪಿ, ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧವನ್ನು ಈ ಮೊದಲು ಇವರು ಯಾವುದೇ ಪದವಿಗಳಿಗೆ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : 30.7.2007

Shailaja Hiremath

ಡಾ. ಶೈಲಜ ಇಂ. ಹಿರೇಮಠ
ಪ್ರವಾಚಕರು ಮತ್ತು ಮಾರ್ಗದರ್ಶಕರು
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಸ್ವರೂಪ, ಉದ್ದೇಶ, ಮಹತ್ವ, ವೈಧಾನಿಕತೆ ಮತ್ತು ವ್ಯಾಪ್ತಿ

ಅಧ್ಯಾಯ ೧

ಅಧ್ಯಯನ ಸ್ವರೂಪ, ಉದ್ದೇಶ, ಮಹತ್ವ, ವೈಧಾನಿಕತೆ ಮತ್ತು ವ್ಯಾಪ್ತಿ

ಪುರುಷಪ್ರಧಾನ ಸಮಾಜದಲ್ಲಿ ಸ್ತ್ರೀಯು ಕುಟುಂಬದಿಂದ ಹಿಡಿದು ಸಮಾಜದ ಪ್ರತಿಯೊಂದು ರಂಗದಲ್ಲಿ ಅನೇಕ ರೀತಿಯ ಶೋಷಣೆ, ಹಿಂಸೆಗೆ, ಕಿರುಕುಳಕ್ಕೆ ದೌರ್ಜನ್ಯಕ್ಕೆ ಬಲಿಯಾಗಿದ್ದಾಳೆ. ಇಂದಿನ ಸಾಮಾಜಿಕ ವ್ಯವಸ್ಥೆಯು ಸರ್ವರಿಗೂ ಸಮಾನವಾದ ಬದುಕನ್ನು ಕಲ್ಪಿಸಿಕೊಟ್ಟಿದೆಯೇ ಎಂದು ಒಂದು ಕ್ಷಣ ಯೋಚಿಸಿದರೆ, ನೂರೊಂದು ಸಮಸ್ಯೆಗಳು ನಮ್ಮ ಮುಂದೆ ಬಂದು ನಿಲ್ಲುತ್ತವೆ. ಸ್ತ್ರೀಯರ ಸ್ಥಾನಮಾನವನ್ನು ವಿಚಾರ ಮಾಡುವಾಗ, ಭಾರತ ಸ್ವತಂತ್ರವಾಗಿ ಅರ್ಧ ಶತಮಾನ ಗತಿಸಿದರೂ ಕೂಡಾ ಮಹಿಳೆ ತನ್ನ ಸ್ಥಾನಮಾನದ ಹಕ್ಕಿಗಾಗಿ ಹೋರಾಡಬೇಕಾಗಿರುವುದು ದುರಂತ.

ಭಾರತೀಯ ಕುಟುಂಬಗಳು ಪ್ರಮುಖವಾಗಿ ವಿಭಕ್ತ ಮತ್ತು ಅವಿಭಕ್ತ ಕುಟುಂಬಗಳ ಸ್ವರೂಪ ಹೊಂದಿವೆ. ಅಲ್ಲಿ ನಡೆಯುವ ಪ್ರತಿಯೊಂದು ಕಾರ್ಯದಲ್ಲಿ ಮಹಿಳೆಯ ಚಲನವಲನಗಳನ್ನು ಗಮನಿಸಿದಾಗ ಅವಳ ಸ್ಥಿತಿ ಚಿಂತಾಜನಕ ಸ್ಥಿತಿಯಾಗಿರುವುದು ಕಂಡು ಬರುತ್ತದೆ. ಪ್ರಾಚೀನ ಕಾಲದಿಂದ ಹಿಡಿದು ಇಂದಿನ ಕಾಲದವರೆಗೆ ಮಹಿಳೆಯು ಕುಟುಂಬದಲ್ಲಿ ನಡೆದುಕೊಂಡು ಬಂದ ರೀತಿ-ನೀತಿಗಳನ್ನು ನಾವು ಇಲ್ಲಿ ನೋಡಿದರೆ ಅವಳ ಮೇಲೆ ನಡೆಯುವ ಹಿಂಸೆ, ಕಿರುಕುಳ, ದೌರ್ಜನ್ಯಗಳು ಕುಟುಂಬದಲ್ಲಿನ ಅವಳ ಸ್ಥಿತಿಯನ್ನು ವಿವರಿಸುತ್ತವೆ.

ವಿಧೇಯತೆ ಎನ್ನುವ ಮೌಲ್ಯವನ್ನಾಧರಿಸಿ, ಸಿದ್ಧಪಡಿಸಲಾದ ಪಿತೃಪ್ರಧಾನ ವ್ಯವಸ್ಥೆಯ ಆಲೋಚನೆಗಳು ಸಾಂಸ್ಕೃತಿಕ ಅಭಿವ್ಯಕ್ತಿ ಮಾಧ್ಯಮ ವರ್ಗಗಳ ಮೂಲಕ ಚಲಾವಣೆಗೆ ಬರುತ್ತವೆ. ಕೌಟುಂಬಿಕ ನೆಲೆಯಲ್ಲಿ ತಂದೆಗೆ ತಾಯಿ ವಿಧೇಯಳು, ಹಾಗೆಯೇ ಅಣ್ಣನಿಗೆ ತಮ್ಮಂದಿರು ವಿಧೇಯರು, ಅತ್ತೆಗೆ ಸೊಸೆಯಂದಿರು, ಗಂಡನಿಗೆ ಹೆಂಡತಿ ವಿಧೇಯರಾಗಿರಬೇಕಾಗುತ್ತದೆ. ಈ ಮಾದರಿಯಲ್ಲಿಯೇ ಪ್ರಭುವಿಗೆ ಪ್ರಜೆಗಳು, ದೇವರಿಗೆ ಭಕ್ತರು, ಒಡೆಯರಿಗೆ ಸೇವಕರು ವಿಧೇಯರು. 'ವಿಧೇಯತೆ' ಎಂಬ ಮೌಲ್ಯವನ್ನು ಸೃಷ್ಟಿಸಿ ಹೆಣ್ಣನ್ನು ಗಂಡಿನ ಅಧೀನ ನೆಲೆಯಲ್ಲಿ ಉಳಿಸುತ್ತಾ ಬಂದಿದೆ. ಗಂಡನಾದ, ಗಂಡಸು ಮಹಿಳೆಯೊಬ್ಬಳಿಗೆ ಬರೀ ಗಂಡನಲ್ಲ, ಆತ ದೇವರು, ಪ್ರಭು ಹಾಗೂ ಒಡೆಯ ಕೂಡಾ. ಈ ಬಗೆಯ ಸ್ತ್ರೀಪುರುಷರ ಸಂಬಂಧಗಳು

ಅಸಮಾನ ಅಧಿಕಾರ ಹಂಚಿಕೆಯುಳ್ಳದ್ದಾಗಿದೆ. ಮಹಿಳೆ ಇದನ್ನು ಪ್ರಶ್ನಿಸದೇ ಒಪ್ಪಿಕೊಂಡು ಬರುವ ಹಾಗೆ ಮಾಡಲು ವ್ಯವಸ್ಥೆ ನಾನಾ ಉಪಾಯಗಳನ್ನು, ಸಾಧನಗಳನ್ನು ಸೃಷ್ಟಿಸಿಕೊಂಡಿದೆ. ಇದರ ಮುಖಾಂತರ ಕುಟುಂಬದೊಳಗೆ ಹೆಣ್ಣುಮಗುವಿಗೆ ಬಾಲ್ಯದಿಂದಲೇ ವಿಧೇಯತೆಯ, ಪತ್ನಿಯ ಪಾತ್ರದ ಮಾದರಿಯನ್ನು ಮುಂದಿಡಲಾಗುತ್ತದೆ. ಮದುವೆಯಾಗುವ ಮೊದಲೇ ಗಂಡನನ್ನು ಕುರಿತ ಆದರ್ಶೀಕೃತ, ದೈವೀ ಸ್ವರೂಪದ ಪಾತ್ರ ಮಾದರಿಯು ಹೆಣ್ಣಿನ ಮನದಲ್ಲಿ ಸೃಷ್ಟಿ ಮಾಡುತ್ತಾ ಮಹಿಳೆಯನ್ನು ಕುಟುಂಬದ ಚೌಕಟ್ಟಿನೊಳಗೆ ಬಂಧಿಸಿಡಲಾಗಿದೆ. ಅದರ ಮುಖಾಂತರ ಆಕೆಯನ್ನು ಹಿಂಸಿಸುವ ಪ್ರವೃತ್ತಿಗೆ ಇಳಿದಿದೆ ಸಮಾಜ. ಇದು ಇಂದಿಗೂ ಮಹಿಳೆಯರಿಗೆ ಮುಂದುವರಿಯುತ್ತಾ ಬಂದಿದೆ. ಕುಟುಂಬ ಎನ್ನುವ ಸಂಸ್ಥೆಯೊಳಗೆ ಎಲ್ಲವೂ ಸುಗಮವಾಗಿಲ್ಲ ಎನ್ನಬಹುದು. ಈ ಪರಿಸ್ಥಿತಿ ವಿಶೇಷವಾಗಿ ಅನ್ವಯಿಸುವುದು, ಮಹಿಳೆಯರಿಗೆ ಮತ್ತು ಹೆಣ್ಣುಮಕ್ಕಳಿಗೆ. ನಾಗರಿಕ ಜಗತ್ತನ್ನು ಅಚ್ಚರಿಗೊಳಿಸುವಂತೆ ಕುಟುಂಬ ಎನ್ನುವ ಸಂಸ್ಥೆಯೊಳಗೆ ಮಹಿಳೆಯ ವಿರುದ್ಧ ದೌರ್ಜನ್ಯಗಳು ನಡೆಯುತ್ತಲೇ ಇವೆ. ದೈಹಿಕ, ಮಾನಸಿಕ, ಆರ್ಥಿಕ, ಸಾಮಾಜಿಕ - ಹೀಗೆ ಹಲವು ವಿಧಗಳಲ್ಲಿ ಹಿಂಸೆಗೆ ಒಳಪಟ್ಟು ನೊಂದಿರುವ ಮಹಿಳೆ ಇತರರಲ್ಲಿ ತನ್ನ ನೋವು ಸಂಕಟಗಳನ್ನು ಹಂಚಿಕೊಳ್ಳಲಾಗದೇ ನೈತಿಕ ಮತ್ತು ಕಾನೂನಿನ ರಕ್ಷಣೆ ಸಿಗದೆ ಅಸಹಾಯಕಳಾಗಿದ್ದಾಳೆ.

ಮೇಲಿನ ಎಲ್ಲಾ ಅಂಶಗಳನ್ನು ಮನಗಂಡು ಮಹಿಳೆಯರ ಮೇಲೆ ಉಂಟಾಗುತ್ತಿರುವ ದೌರ್ಜನ್ಯ, ಹಿಂಸಾಚಾರ, ಶೋಷಣೆಗಳನ್ನು ತಡೆಗಟ್ಟಲು ಕೌಟುಂಬಿಕ ಹಿಂಸಾಚಾರದ ಬಗ್ಗೆ ಅಧ್ಯಯನವನ್ನು ಕೈಗೊಳ್ಳುವುದು ಅತೀ ಮುಖ್ಯವಾಗಿದ್ದು. ಮಹಿಳೆಯರು ಹಿಂಸಾಚಾರಕ್ಕೆ ಒಳಗಾದಾಗ ಆ ಹಿಂಸೆ, ದೌರ್ಜನ್ಯವನ್ನು ಪ್ರತಿಭಟಿಸುವಂತೆ ಪ್ರೇರಣೆ ನೀಡುವುದು ಅವಶ್ಯಕವಾಗಿದೆ. ಮಹಿಳೆಯರು ತಾವು ಯಾವ ರೀತಿಯಲ್ಲಿ ರಕ್ಷಿಸಿಕೊಳ್ಳಬೇಕು ಎಂಬುದರ ಬಗ್ಗೆ ಮಹಿಳೆಯರಿಗೆ ತಿಳುವಳಿಕೆ ನೀಡುವುದು ಅತೀ ಅವಶ್ಯಕವಾಗಿದೆ. ಆದ್ದರಿಂದ ಕೌಟುಂಬಿಕ ಹಿಂಸೆಯೆಂದು ನಾವು ಯಾವುದನ್ನು ಕರೆಯುತ್ತೇವೆ? ಕಾನೂನಿನ ಪ್ರಕಾರ ಕೌಟುಂಬಿಕ ಹಿಂಸೆ ಎಂದರೇನು? ಹಿಂಸೆಗೊಳಗಾದ ಮಹಿಳೆಯು ಯಾರನ್ನು ಸಂಪರ್ಕಿಸಬೇಕು? ಮುಂತಾದ ವಿಷಯಗಳ ಬಗ್ಗೆ ಮಹಿಳೆಯರಿಗೆ ಮತ್ತು ಪುರುಷರಿಗೆ ಇಬ್ಬರಿಗೂ ತಿಳುವಳಿಕೆ ಮೂಡಿಸುವುದು ಅವಶ್ಯವಾಗಿದೆ. ಮಹಿಳೆಯರ ಮೇಲೆ ಉಂಟಾಗುತ್ತಿರುವ ಈ ಕೌಟುಂಬಿಕ ಹಿಂಸೆಗೆ ಪರಿಹಾರವೇನು? ಎಂಬುದನ್ನು ನಾವು ತಿಳಿದುಕೊಂಡು ಸಮಾಜಕ್ಕೆ ತಿಳಿಯಪಡಿಸುವುದಕ್ಕಾಗಿ ಕೌಟುಂಬಿಕ ಹಿಂಸಾಚಾರದ ಬಗ್ಗೆ ಅಧ್ಯಯನ ಮಾಡುವುದು ಅಗತ್ಯವಾಗಿದೆ.

ಅಧ್ಯಯನದ ಸ್ವರೂಪ

ಇಂದಿನ ಪುರುಷಪ್ರಧಾನ ಸಮಾಜದಲ್ಲಿ ಮಹಿಳೆಯರ ಸ್ಥಿತಿ ಅತ್ಯಂತ ಹೀನಾಯವಾಗಿದೆ. ತಾನು ವಾಸಿಸುವ ಕುಟುಂಬದಲ್ಲಿ ಅವಳಿಗೆ ಸ್ವತಂತ್ರವಿಲ್ಲ. ಕುಟುಂಬದಲ್ಲಿಯೇ ಅವಳು ಹಿಂಸೆಗೆ, ದೌರ್ಜನ್ಯಕ್ಕೆ

ಗುರಿಯಾಗುತ್ತಿದ್ದಾಳೆ. ಪುರುಷಪ್ರಧಾನ ಸಮಾಜವು ಅವಳನ್ನು ಎರಡನೇ ದರ್ಜೆಯ ಪ್ರಜೆಯಂತೆ ಕಾಣುತ್ತದೆ. ಲಿಂಗತಾರತಮ್ಯವು ಮಹಿಳೆಯರ ದೌರ್ಜನ್ಯಕ್ಕೆ ಮೂಲಕಾರಣವಾಗಿದೆ. ಇಂತಹ ಪರಿಸ್ಥಿತಿಯಲ್ಲಿನ ಮಹಿಳೆಯರಿಗೆ ಕೌಟುಂಬಿಕ ಹಿಂಸೆ ತಡೆಕಾಯ್ದೆಯು ಒಂದು ಆಶಾಕಿರಣವಾಗಿದೆ. ಕುಟುಂಬದಲ್ಲಿ ಮಹಿಳೆಯರ ಮೇಲೆ ಉಂಟಾಗುತ್ತಿರುವ ಹಿಂಸಾಚಾರ, ದೌರ್ಜನ್ಯ, ಶೋಷಣೆಗಳನ್ನು ತಡೆಗಟ್ಟುವಲ್ಲಿ ಈ ಕಾಯ್ದೆ ಯಾವ ರೀತಿಯಲ್ಲಿ ತನ್ನ ಕಾರ್ಯವನ್ನು ಕೈಗೊಂಡಿದೆ? ಅದು ಮಹಿಳೆಯರ ಕೌಟುಂಬಿಕ ಹಿಂಸೆ ತಡೆಗೆ ಯಾವ ರೀತಿಯಲ್ಲಿ ಸಹಕಾರಿಯಾಗುತ್ತದೆ? ಎಂಬುದನ್ನು ತಿಳಿಯುವುದು ನನ್ನ ಅಧ್ಯಯನದ ಸ್ವರೂಪವಾಗಿದೆ.

ಅಧ್ಯಯನದ ಉದ್ದೇಶ

"ಕೌಟುಂಬಿಕ ಹಿಂಸೆ ಮತ್ತು ಮಹಿಳೆ" ಎಂಬ ವಿಷಯದ ಅಧ್ಯಯನವು ಕೆಲವೊಂದು ಉದ್ದೇಶಗಳನ್ನು ಇಟ್ಟುಕೊಂಡು ಸಂಶೋಧನೆ ಕೈಗೊಳ್ಳಲಾಗಿದೆ. ಅವುಗಳೆಂದರೆ,

ಕುಟುಂಬದಲ್ಲಿ ಸ್ತ್ರೀಯರ ಮೇಲೆ ದೌರ್ಜನ್ಯ ಶೋಷಣೆಗಳು ನಡೆಯುತ್ತಿರುವುದನ್ನು ತಿಳಿದುಕೊಂಡರೂ ಸಹ ಮಹಿಳೆಯರ ಅದನ್ನು ಸಹಿಸಿಕೊಳ್ಳಲು ಕಾರಣಗಳೇನು? ಎಂಬುದರ ಬಗ್ಗೆ ತಿಳಿದುಕೊಳ್ಳುವುದು. ಸ್ತ್ರೀಯು ಕುಟುಂಬದಲ್ಲಿ ತನ್ನ ಗಂಡನಿಂದ, ಅತ್ತೆ, ಮಾವ ಹಾಗೂ ಕುಟುಂಬದ ಇತರ ಸದಸ್ಯರು ನೀಡಿದ ಶೋಷಣೆಯಿಂದ ನರಳುತ್ತಿದ್ದಾಳೆಯೇ ಎಂಬುದರ ಬಗ್ಗೆ ತಿಳಿದುಕೊಳ್ಳುವುದರ ಜೊತೆಗೆ ಕುಟುಂಬದಲ್ಲಿ ಮಹಿಳೆಗೆ ಆರ್ಥಿಕವಾಗಿ ಎಷ್ಟು? ಹಾಗೂ ಯಾವ ರೀತಿಯ ಶೋಷಣೆಯನ್ನು ನೀಡುತ್ತಿದ್ದಾರೆ ಮತ್ತು ಅವಳಿಂದ ಯಾವ ಯಾವ ಹಕ್ಕುಗಳನ್ನು ಕಿತ್ತುಕೊಂಡಿದ್ದಾರೆಂಬುದನ್ನು ತಿಳಿಯುವುದು. ಸ್ತ್ರೀಯರ ಮೇಲೆ ನಡೆಯುತ್ತಿರುವ ಶೋಷಣೆಯ ಸ್ವರೂಪದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುವುದು. ಮದುವೆಯ ಸಮಯದಲ್ಲಿ ಮತ್ತು ಮದುವೆ ನಂತರವೂ ವರದಕ್ಷಿಣೆಗಾಗಿ ಇನ್ನೂ ಹೆಚ್ಚಿನ ವಸ್ತುಗಳನ್ನು ತರಬೇಕೆಂದು ಹಿಂಸಿಸಲು ಕಾರಣಗಳನ್ನು ತಿಳಿದುಕೊಳ್ಳುವುದು ಹಾಗೂ ಕುಟುಂಬದಲ್ಲಿ ಮಹಿಳೆ ತನ್ನ ಮೇಲೆ ಸತತವಾಗಿ ನಡೆಯುತ್ತಿರುವ ಶೋಷಣೆ ವಿರುದ್ಧ ಯಾವ ರೀತಿಯ ನಿರ್ಧಾರವನ್ನು ತೆಗೆದುಕೊಂಡಿದ್ದಾಳೆ ಮತ್ತು ಇಂತಹ ನಿರ್ಧಾರದಿಂದ ಯಾವುದೇ ರೀತಿಯ ಕಾನೂನಿನ ಸಹಾಯ ಹಾಗೂ ರಕ್ಷಣೆಯನ್ನು ಪಡೆದಿದ್ದಾಳೆಯೇ ಎಂಬುದನ್ನು ತಿಳಿಯುವುದು. ಒಂದು ಕುಟುಂಬದಲ್ಲಿ ವಾಸಿಸುವ ಸ್ತ್ರೀಯರಿಗೆ ಯಾವ ರೀತಿಯ ಸ್ಥಾನಮಾನವನ್ನು ನೀಡಿದ್ದಾರೆ ಎನ್ನುವ ವಿಷಯವನ್ನು ತಿಳಿದುಕೊಳ್ಳುವುದು ಹಾಗೂ ಮಹಿಳೆಯ ಕೌಟುಂಬಿಕ ಹಿಂಸೆಗೆ ಒಳಗಾಗುವ ಸಂದರ್ಭದಲ್ಲಿ ಅವಳು ತನ್ನ ರಕ್ಷಣೆಗೆ ಯಾವ ಮಾರ್ಗವನ್ನು ಅನುಸರಿಸಬೇಕು ಎಂಬುದನ್ನು ತಿಳಿಯುವುದು ಮತ್ತು ದೌರ್ಜನ್ಯಕ್ಕೊಳಗಾದ ಮಹಿಳೆಯು ಯಾರನ್ನು ಸಂಪರ್ಕಿಸಬೇಕು ಎಂಬುದರ ಬಗ್ಗೆ ಅವಳಿಗೆ ಮಾಹಿತಿ ನೀಡುವುದು. ಕೌಟುಂಬಿಕ ಹಿಂಸೆಗೊಳಗಾದ ಮಹಿಳೆಗೆ ಮುಂದಿನ ಜೀವನವನ್ನು ಎದುರಿಸಲು ಅವಳಲ್ಲಿ ಧೈರ್ಯ, ಛಲ, ಆತ್ಮವಿಶ್ವಾಸವನ್ನು ತುಂಬುವುದು.

ಮಹಿಳೆಯರಿಗೆ ಕೌಟುಂಬಿಕ ಹಿಂಸೆಗೆ ಗುರಿಪಡಿಸಿದವರಿಗೆ ಇರುವ ಶಿಕ್ಷೆಗಳನ್ನು ತಿಳಿಸುವುದು. ಒಂದು ಕುಟುಂಬದಲ್ಲಿ ಮಹಿಳೆಯರ ಅಸ್ತಿತ್ವದ ಮಹತ್ವದ ಬಗ್ಗೆ ತಿಳಿಯಪಡಿಸುವುದು ಹಾಗೂ ಮಹಿಳಾ ಸಲಹಾ ಕೇಂದ್ರಗಳ ಬಗ್ಗೆ ಜನರಿಗೆ ವಿಶೇಷವಾಗಿ ಮಹಿಳೆಯರಿಗೆ ಮಾಹಿತಿ ನೀಡುವುದು. ನೊಂದ ಮಹಿಳೆಯರಿಗೆ ಭಾವನಾತ್ಮಕ ಮತ್ತು ಮಾನಸಿಕ ಬೆಂಬಲ ಕೊಟ್ಟು, ಸಲಹೆ ಸೂಚನೆಗಳ ಮುಖಾಂತರ ಸಂತೈಸುವುದು. ನೊಂದ ಮಹಿಳೆಯರು ಕಾನೂನು ನೆರವು ಪಡೆಯಲು ಇಂತಹ ಸೌಲಭ್ಯಗಳ ಬಗ್ಗೆ ಅವರಿಗೆ ಮಾಹಿತಿ ನೀಡುವುದು. ಅತ್ಯಾಚಾರ, ಲೈಂಗಿಕ ಕಿರುಕುಳ, ಹಿಂಸಾಚಾರಕ್ಕೊಳಗಾದ ಮಹಿಳೆಯರು ಮಹಿಳಾ ಸಲಹಾ ಕೇಂದ್ರದ ಮೂಲಕ ತುರ್ತುಪರಿಸ್ಥಿತಿಯಲ್ಲಿ ವೈದ್ಯಕೀಯ ನೆರವನ್ನು ಪಡೆಯಬಹುದು ಹಾಗೂ ಮಹಿಳೆಯು ಕೂಡಾ ಪುರುಷನಂತೆ ಮನುಷ್ಯಳು. ಅವಳ ಅಸ್ತಿತ್ವವಿಲ್ಲದೆ ಪುರುಷರನ ಅಸ್ತಿತ್ವ ಸಾಧ್ಯವಿಲ್ಲ. ಈ ಅಂಶವನ್ನು ಪ್ರತಿಯೊಬ್ಬರಿಗೂ ಮನವರಿಕೆ ಮಾಡಿಕೊಡುವುದು ನನ್ನ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ಅಧ್ಯಯನದ ಮಹತ್ವ

ಕುಟುಂಬದ ನಾಲ್ಕು ಗೋಡೆಗಳ ಮಧ್ಯೆ ನಡೆಯುವ ಹೆಣ್ಣಿನ ಆಕ್ರಂದನದ ಪಾಡು ನಿಜಕ್ಕೂ ಕರುಣಾಜನಕ. ಸುರಕ್ಷಿತ ತಾಣವಾಗಿರಬೇಕಾದ ಮನೆ ಹೆಣ್ಣಿನ ಪಾಲಿಗೆ ಅಂದಿಗೂ ಮತ್ತು ಇಂದಿಗೂ ನರಕವಾಗಿದೆ. ಜಗತ್ತಿನ ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರ ಸ್ಥಿತಿಗತಿಯನ್ನು ಸುಧಾರಿಸುವುದು ಅಗತ್ಯವಾಗಿದೆ. ಆದ್ದರಿಂದ ಈ ಅಧ್ಯಯನವು ಮಹತ್ವವನ್ನು ಪಡೆದುಕೊಂಡಿದೆ. ನಾಲ್ಕು ಗೋಡೆಯ ಮಧ್ಯೆ ಹೆಂಡತಿ, ತಾಯಿ, ಮಕ್ಕಳ ಮೇಲೆ ಪುರುಷರು ವಿನಾಕಾರಣ ನಡೆಸುವ ನಾನಾ ಬಗೆಯ ದೌರ್ಜನ್ಯಗಳು ನಿಜಕ್ಕೂ ಭಯಾನಕ. ಇದನ್ನು ತಡೆಗಟ್ಟಲು ಕೇಂದ್ರ ಸರಕಾರವು ಹೊಸ ಕಾನೂನನ್ನು ಜಾರಿಗೆ ತಂದಿದೆ.

ಕೌಟುಂಬಿಕ ಹಿಂಸಾಚಾರದ ಬಗ್ಗೆ ಅಧ್ಯಯನ ಮಾಡುವುದರಿಂದ ಅದರ ಬಗೆಗಿನ ನಿಚಾಂಶಗಳನ್ನು ತಿಳಿದುಕೊಳ್ಳಬಹುದು. ಅಲ್ಲದೆ ಮಹಿಳೆಯರು ಈ ರೀತಿಯ ಹಿಂಸೆಗಳಿಂದ ಯಾವ ರೀತಿಯಲ್ಲಿ ಹೊರಗೆ ಬರಬೇಕು ಎಂಬುದನ್ನು ತಿಳಿದುಕೊಳ್ಳಲು ಸಹಾಯಕವಾಗುತ್ತದೆ. ಆದ್ದರಿಂದ ಈ ಕೌಟುಂಬಿಕ ಹಿಂಸಾಚಾರದ ಅಧ್ಯಯನವು ಮಹತ್ವವನ್ನು ಪಡೆದುಕೊಂಡಿದೆ.

ವೈಧಾನಿಕತೆ

ಅವಲೋಕನ

"ಕೌಟುಂಬಿಕ ಹಿಂಸೆ ಮತ್ತು ಮಹಿಳೆ" ಎನ್ನುವ ವಿಷಯವನ್ನು ಕುರಿತು ಅಧ್ಯಯನವನ್ನು ಕೈಗೊಳ್ಳಲು ಮಹಿಳಾ ಸಲಹಾ ಕೇಂದ್ರಕ್ಕೆ ಮತ್ತು ಕೌಟುಂಬಿಕ ನ್ಯಾಯಾಲಯಕ್ಕೆ ಭೇಟಿ ನೀಡುವ ಮಹಿಳೆಯರನ್ನು ಸಂದರ್ಶಿಸಿದಾಗ, ಅಲ್ಲಿ ಅವರ ಮೂಲಕ ನಮ್ಮ ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು

ಪಡೆಯಬೇಕಾಗುತ್ತದೆ. ಆಗ ಅವರು ನಿಜವಾದ ಮಾಹಿತಿಯನ್ನು ನೀಡಲು ನಿರಾಕರಿಸಿದರೆ, ಸಂಶೋಧನಾ ವಿಷಯದ ನೈಜ ಚಿತ್ರಣವನ್ನು ಪಡೆಯಲು ಈ ಅವಲೋಕನ ವಿಧಾನವನ್ನು ಅನುಸರಿಸಲಾಗುತ್ತದೆ. ಈ ವಿಧಾನದ ಬಳಕೆ ನನ್ನ ಅಧ್ಯಯನದಲ್ಲಿ ಕೆಲವು ಸನ್ನಿವೇಶ ಸಂಗತಿಗಳಿಗೆ ಅನ್ವಯವಾಗುತ್ತದೆ. ಆದ್ದರಿಂದ ಈ ವಿಧಾನವನ್ನು ನನ್ನ ಅಧ್ಯಯನದಲ್ಲಿ ಬಳಸಿಕೊಂಡಿದ್ದೇನೆ.

ಸಂದರ್ಶನ

ಈ ವಿಧಾನದಲ್ಲಿ ಸಂಶೋಧನಾ ವಿಷಯದ ಬಗ್ಗೆ ಮಾಹಿತಿಯನ್ನು ಪಡೆಯಲು ಮಾಹಿತಿದಾರರನ್ನು ಮುಖಾಮುಖಿಯಾಗಿ ಭೇಟಿ ಮಾಡಲಾಗುತ್ತದೆ. ಮಹಿಳಾ ಸಲಹಾಕೇಂದ್ರ ಮತ್ತು ನ್ಯಾಯಾಲಯಕ್ಕೆ ಭೇಟಿ ನೀಡುವ ಮಹಿಳೆಯರಿಗೆ ಉಂಟಾದ ಹಿಂಸಾಚಾರದ ಬಗ್ಗೆ ಮತ್ತು ಮಹಿಳಾ ಸಲಹಾಕೇಂದ್ರವು ಅವರಿಗೆ ಸೂಚಿಸುವ ಪರಿಹಾರಗಳ ಬಗ್ಗೆ ಅಧ್ಯಯನ ಮಾಡಲಾಗುತ್ತದೆ. ನ್ಯಾಯಾಲಯಕ್ಕೆ ಭೇಟಿ ನೀಡಿದ ಮಹಿಳೆಯರಿಗೆ ಕಾನೂನಿನ ರೀತಿಯಲ್ಲಿ ನ್ಯಾಯಸಮ್ಮತವಾಗಿ ಅವರಿಗೆ ಸೂಚಿಸುವ ಪರಿಹಾರದ ಬಗ್ಗೆ ಅಧ್ಯಯನ ಮಾಡಲಾಗುತ್ತದೆ.

ಈ ರೀತಿಯಾಗಿ ಆಯ್ಕೆ ಮಾಡಿಕೊಂಡ ಮಹಿಳೆಯರು ಯಾರಿಂದ ಹಿಂಸಾಚಾರಕ್ಕೆ ಒಳಗಾಗಿದ್ದಾರೆ. ಅವರಿಂದ ಆ ಮಹಿಳೆಯರಿಗೆ ಮಹಿಳಾ ಸಲಹಾಕೇಂದ್ರ ಮತ್ತು ಕಾನೂನು ಯಾವ ರೀತಿ ರಕ್ಷಣೆ ನೀಡುತ್ತದೆ ಎಂಬ ವಿಷಯವನ್ನು ಸಂದರ್ಶನದ ಮೂಲಕ ಅಧ್ಯಯನ ಮಾಡಲಾಗುತ್ತದೆ. ಅಧ್ಯಯನಕ್ಕೆ ಅಗತ್ಯವಾದ ಮಾಹಿತಿಯನ್ನು ಅನೇಕ ತಂತ್ರ ವಿಧಾನಗಳನ್ನು ಅನುಸರಿಸಿ ಪಡೆಯಲಾಗುತ್ತದೆ.

ಪ್ರಶ್ನಾವಳಿ ವಿಧಾನ

ಸಂಶೋಧನೆಗೆ ಬೇಕಾಗುವ ಮಾಹಿತಿ ಸಂಗ್ರಹಣೆಯು ಪ್ರಮುಖ ಪಾತ್ರವಹಿಸುತ್ತದೆ. ಪ್ರಶ್ನಾವಳಿಯಲ್ಲಿ 'ಕೌಟುಂಬಿಕ ಹಿಂಸೆ ಮತ್ತು ಮಹಿಳೆ' ಎನ್ನುವ ವಿಷಯಕ್ಕೆ ಸಂಬಂಧಿಸಿದ ಮೂವತ್ತು ಪ್ರಶ್ನೆಗಳನ್ನು ಸಿದ್ಧಪಡಿಸಿ ಅಧ್ಯಯನಕ್ಕೊಳಪಡುವ ಮಹಿಳೆಯರಿಗೆ ವೈಯಕ್ತಿಕವಾಗಿ ಮತ್ತು ತಾವಾಗಿಯೇ ಈ ಪ್ರಶ್ನೆಗಳಿಗೆ ಉತ್ತರ ನೀಡುವಂತೆ ಮನವೊಲಿಸಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಹೀಗೆ ಇಲ್ಲಿ ನನ್ನ ಅಧ್ಯಯನಕ್ಕೆ ಪೂರಕವಾದ ಪ್ರಶ್ನಾವಳಿಯನ್ನು ಬಳಸಿಕೊಳ್ಳಲಾಗಿದೆ.

ದತ್ತಾಂಶಗಳು ಮೂಲಾಂಶಗಳು

ಪ್ರಥಮ ಮಾಹಿತಿ

ಈ ಅಧ್ಯಯನಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಸಂಗ್ರಹಿಸಲು, ತಯಾರಿಸಲಾದ ಪ್ರಶ್ನಾವಳಿಯನ್ನು ತೆಗೆದುಕೊಂಡು ಮಾಹಿತಿದಾರರನ್ನು ನೇರವಾಗಿ ಸಂದರ್ಶಿಸುವುದರ ಮೂಲಕ ಮಾಹಿತಿಯನ್ನು ಪಡೆದುಕೊಳ್ಳಲಾಗುತ್ತದೆ. ಇದು ಪ್ರಥಮ ಮಾಹಿತಿಯಾಗಿದೆ.

ದ್ವಿತೀಯ ಮಾಹಿತಿ

ಅಧ್ಯಯನಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಸರಕಾರ, ಸರಕಾರೇತರ ಸಂಸ್ಥೆಗಳು, ಮಹಿಳಾ ಸಲಹಾ ಕೇಂದ್ರಗಳು, ಪ್ರಕಟಣೆಗಳು, ಭಿತ್ತಿಪತ್ರಗಳು, ಸಾಹಿತಿಗಳ ಲೇಖನಗಳು, ದಿನಪತ್ರಿಕೆಗಳು, ವಾರಪತ್ರಿಕೆಗಳು, ಮಾಸಪತ್ರಿಕೆಗಳು, ಅನೇಕ ಸರಕಾರ ಸಂಸ್ಥೆಗಳು ಪ್ರಕಟಿಸಿದ ಪುಸ್ತಕಗಳು ಅಧ್ಯಯನಗಳು, ಟಿ.ವಿ. ಹಾಗೂ ರೇಡಿಯೋ, ವೆಬ್‌ಸೈಟ್(ಇ-ಮೇಲ್)ಗಳ ಮೂಲಕ ಮಾಹಿತಿಯನ್ನು ಪಡೆದುಕೊಂಡು ಅಧ್ಯಯನ ಮಾಡಲಾಗಿದೆ.

ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನಕ್ಕೆ ಹೂವಿನ ಹಡಗಲಿ (ಪೋಲೀಸ್ ಠಾಣೆಯಲ್ಲಿ ಕೌಟುಂಬಿಕ ವಿಷಯಕ್ಕೆ ಸಂಬಂಧಿಸಿದಂತೆ ಬರುವ ಪ್ರಕರಣಗಳ ಹಿನ್ನೆಲೆ) ನಗರವನ್ನು ಮತ್ತು ಮಹಿಳಾ ಸಲಹಾ ಕೇಂದ್ರ, ಕೂಡ್ಲಿಗಿಯನ್ನು ಕಾರ್ಯಕ್ಷೇತ್ರವನ್ನಾಗಿ ಆಯ್ದುಕೊಂಡಿರುತ್ತೇನೆ. ದ್ವಿತೀಯ ಮೂಲಾಂಶಗಳಿಗೆ ಪತ್ರಿಕೆಯಲ್ಲಿ ಬಂದ ವರದಿಯ ಹಿನ್ನೆಲೆಯಾಗಿ ನಾನು ಅದರ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ಅಧ್ಯಯನ ಮಾಡಿದ್ದೇನೆ. ಕೌಟುಂಬಿಕ ಹಿಂಸೆಯು ವಿಶಾಲವಾದ ವ್ಯಾಪ್ತಿಯನ್ನು ಹೊಂದಿದ್ದು ನನ್ನ ಅಧ್ಯಯನ ದೃಷ್ಟಿಯಿಂದ ಸಂಕುಚಿತಗೊಳಿಸಿಕೊಂಡು ಇದರ ಬಗ್ಗೆ ಹಲವಾರು ಕಡೆಗಳಲ್ಲಿ ಸಿಕ್ಕಂತಹ ಮಾಹಿತಿಯನ್ನು ಸಂಗ್ರಹಿಸಿ ಹಾಗೂ ವಿದ್ವಾಂಸರೊಂದಿಗೆ ಚರ್ಚಿಸುತ್ತಾ ಅಧ್ಯಯನ ಮಾಡಿರುತ್ತೇನೆ.

• • •

ಅಧ್ಯಾಯ ೨

ಕೌಟುಂಬಿಕ ಹಿಂಸೆ : ನಿರ್ವಚನಗಳು ಮತ್ತು ಸ್ವರೂಪ

ಅಧ್ಯಾಯ ೨

ಕೌಟುಂಬಿಕ ಹಿಂಸೆ : ನಿರ್ವಚನಗಳು ಮತ್ತು ಸ್ವರೂಪ

ಸಮಾಜದಲ್ಲಿ ನಡೆಯುತ್ತಿರುವ ಪ್ರತಿಯೊಂದು ಹಿಂಸೆ, ಕಿರುಕುಳ, ದೌರ್ಜನ್ಯಗಳಲ್ಲಿ ಕೌಟುಂಬಿಕ ಹಿಂಸೆ ಅತ್ಯಂತ ಭೀಕರವಾದ ಪರಿಣಾಮ ಬೀರುತ್ತಿದೆ. ಮುಂದುವರಿದ ಅಥವಾ ಜಾಗತೀಕರಣದ ಸಂದರ್ಭದಲ್ಲಿ ಮಹಿಳೆಯನ್ನು ಶೋಷಣೆಗೆ ಒಳಪಡಿಸುವ ಸಂಸ್ಥೆಗಳಲ್ಲಿ ಕುಟುಂಬವೂ ಒಂದು ಎಂದರೆ ತಪ್ಪಾಗಲಾರದು. ಕುಟುಂಬದಲ್ಲಿ ನಡೆಯುವ ಪ್ರತಿಯೊಂದು ಹಿಂಸೆ, ಕಿರುಕುಳ, ದೌರ್ಜನ್ಯಗಳು ಹೆಣ್ಣಿಗೆ ಸಹಜವಾದುದು ಎನ್ನುವ ಸಂಗತಿಯನ್ನಾಗಿ ಗುರುತಿಸಿ, ಕುಟುಂಬವನ್ನು ಹೆಣ್ಣಿಗೆ ಅನಿವಾರ್ಯವಾದ ಸಂಗತಿಯನ್ನಾಗಿ ಮಾಡಿ, ಪುರುಷಪ್ರಧಾನ ವ್ಯವಸ್ಥೆಯು ಕುಟುಂಬದಲ್ಲಿ ಮಹಿಳೆಯನ್ನು ಬಂಧಿಸಲ್ಪಟ್ಟಿದೆ.

ಕುಟುಂಬದಲ್ಲಿನ ಮಹಿಳೆಗೆ ಪುರುಷಪ್ರಧಾನ ವ್ಯವಸ್ಥೆಯು ನಿರ್ದಿಷ್ಟವಾದ ಸ್ಥಾನಮಾನ, ಅಧಿಕಾರ ಜವಾಬ್ದಾರಿಗಳನ್ನು ವಹಿಸಿದೆ. ಇದರ ಮೂಲಕ ಮಹಿಳೆಯು ಪುರುಷನಿಗೆ ಅಡಿಯಾಳಾಗಿರಬೇಕಾದ ಪರಿಸ್ಥಿತಿ ಒದಗಿದೆ. ಇಂತಹ ವ್ಯವಸ್ಥೆಯಲ್ಲಿ ಮಹಿಳೆಯರು ಅನೇಕ ಬಗೆಯ ತುಳಿತವನ್ನು, ಶೋಷಣೆಯನ್ನು, ತಾರತಮ್ಯವನ್ನು ಮತ್ತು ಹಿಂಸೆಯನ್ನು ಅನುಭವಿಸಬೇಕಾಗುತ್ತದೆ.

ಮಹಿಳೆಯ ಹಿಂಸೆ, ಶೋಷಣೆ ಹಲವಾರು ಬಗೆಯ ದೌರ್ಜನ್ಯಗಳಿಗೆ ಕಾನೂನಾತ್ಮಕ ರಕ್ಷಣೆ ಒದಗಿಸಿದರೂ ಅದು ನಿರಂತರವಾಗಿ ಉಳಿದಿದೆ. ಇಂದು ಮಹಿಳೆಯು ಸಮಾಜದಲ್ಲಿ ಸುರಕ್ಷಿತವಾಗಿ ಬದುಕುವುದು ಕಷ್ಟವಾಗಿದೆ. ಮನೆಯ ಹೊರಗಡೆಯಲ್ಲದೆ ಮನೆಯ ಒಳಗಡೆ ಬದುಕುವುದು ಕಷ್ಟವಾಗಿ, ಕುಟುಂಬದ ಸದಸ್ಯರಿಂದಲೇ ಮಹಿಳೆಯು ಮಾನಸಿಕವಾಗಿ ಹಾಗೂ ದೈಹಿಕವಾಗಿ ಹಿಂಸೆಗೆ ಒಳಗಾಗುತ್ತಿದ್ದಾಳೆ. ಅಲ್ಲದೇ ಸಾವಿಗೀಡಾಗುವಂತಹ ಪರಿಸ್ಥಿತಿ ಸಹ ಒದಗಿಬಂದಿದೆ. ನಾಗರಿಕ ಸಮಾಜದಲ್ಲಿ ಈ ಹೇಯ ಕೃತ್ಯಗಳು ನಡೆಯುತ್ತಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ.

ಕೆಲವು ವಿದ್ಯಾವಂತ ಸ್ತ್ರೀಯರು ಪೋಲೀಸ್ ಠಾಣೆಗೆ ದೂರು ನೀಡಲು ಮುಂದೆ ಬಂದು ಇದರಿಂದ ಮುಕ್ತಿ ಹೊಂದುತ್ತಾರೆ. ಆದರೆ ಬಹಳಷ್ಟು ಮಹಿಳೆಯರು ದೌರ್ಜನ್ಯವನ್ನು ಸಹಿಸಿಕೊಂಡು ನರಕ

ಯಾತನೆಯಲ್ಲಿಯೇ ಜೀವನ ಮಾಡುತ್ತಾರೆ. ಜನರು ಎಷ್ಟೇ ಶಿಕ್ಷಣವಂತರಾದರೂ ಮಹಿಳೆಯರ ಮೇಲಿನ ಕೌಟುಂಬಿಕ ಶೋಷಣೆ ಇನ್ನೂ ನಿಂತಿಲ್ಲ. ಸಾಂಪ್ರದಾಯಿಕ ಕೌಟುಂಬಿಕ ವ್ಯವಸ್ಥೆ ಮತ್ತು ಅಲ್ಲಿನ ಆಚರಣೆ, ನಂಬಿಕೆ, ವಿಧಿ-ನಿಷೇಧಗಳೇ ಪ್ರಬಲವಾಗಿರುವಲ್ಲಿ ಹೆಣ್ಣುಮಕ್ಕಳು ತಮಗೆ ಇಷ್ಟವಾದ ರೀತಿಯಲ್ಲಿ ಜೀವನ ನಡೆಸುವುದು ಬಹಳ ಕಷ್ಟವಾಗಿದೆ. ಮಹಿಳೆಯರ ಮೇಲೆ ಉಂಟಾಗುತ್ತಿರುವ ಕೌಟುಂಬಿಕ ಹಿಂಸಾಚಾರವು ನಿನ್ನೆ ಮೊನ್ನೆಯದಲ್ಲ, ಬಹುಕಾಲದಿಂದಲೂ ಇದರ ಸ್ವರೂಪವು ಒಂದಲ್ಲ ಒಂದು ರೀತಿಯಲ್ಲಿ ಸಮಾಜದಲ್ಲಿ ಬೆಳೆಯುತ್ತಾ ಬಂದಿರುವುದನ್ನು ಕಾಣುತ್ತೇವೆ. ನಮ್ಮದು ಪಿತೃಪ್ರಧಾನ ವ್ಯವಸ್ಥೆಯಾಗಿರುವುದರಿಂದ ಪಿತೃಪ್ರಧಾನ ವಿಚಾರಧಾರೆಗಳೊಳಗೆ ಸ್ತ್ರೀಯನ್ನು ಬಂಧಿಯಾಗಿಸಿಕೊಂಡು ಬರಲಾಗಿದೆ. ಯಾವುದೇ ರೀತಿಯ ವಿಚಾರಗಳನ್ನು, ಸ್ತ್ರೀಯರ ಸಲಹೆಗಳನ್ನು ಪರಿಗಣಿಸದೆ ಕಡೆಗಣಿಸುತ್ತಾ ಬರಲಾಗಿದೆ.

ಕೌಟುಂಬಿಕ ಹಿಂಸೆಯ ಸ್ವರೂಪದ ಬಗ್ಗೆ ಆಲೋಚಿಸುವಾಗ ಕುಟುಂಬದೊಳಗಿನ ಕೆಲವೊಂದು ಸೂಕ್ಷ್ಮಾಂಶಗಳನ್ನು ಗಮನಿಸಬೇಕಾಗುತ್ತದೆ. ಕೌಟುಂಬಿಕ ಹಿಂಸೆ ಯಾವ ಕಾರಣಕ್ಕಾಗಿ ನಡೆಯುತ್ತದೆ? ಹಿಂಸೆಯನ್ನು ಹೆಣ್ಣಿನ ಮೇಲೆನೇ ಯಾಕೆ ಮಾಡಲಾಗುತ್ತದೆ? ಎನ್ನುವುದು ಸುಲಭವಾದ ಸಂಗತಿ. ಪುರುಷ ಅಹಂನ ಮನುಷ್ಯ. ಅವನ ತಲೆಯಲ್ಲಿ ಜಾಣ, ದೊಡ್ಡಸ್ತಿಕೆ, ಒಡೆಯ, ಯಜಮಾನ ಎಂಬ ಬಿರುದಾಂಕಿತ ಪದಗಳು ಅವನನ್ನು ಮೇಲಕ್ಕೇರಿಸಿ ಆ ಮೂಲಕ ಅವನು ನಾನು ಒಡೆಯ, ನನ್ನ ಮಾತನ್ನು ಯಾರು ತೆಗೆದು ಹಾಕಬಾರದು ಎನ್ನುವ ಗರ್ವ ಅವನಲ್ಲಿ ಅಗಾಧವಾಗಿರುತ್ತದೆ. ಈ ಕಾರಣವಾಗಿ ತನ್ನ ಮಾತನ್ನು ಯಾರು ಕೇಳದ ಸಂದರ್ಭದಲ್ಲಿ ತನ್ನ ಹೆಂಡತಿ, ತಾಯಿ, ಅಕ್ಕ-ತಂಗಿಯರ ಮೇಲೆ ಅವಾಚ್ಯ ಶಬ್ದ ಬೈಗುಳ ಬೈಯುವುದರ ಮೂಲಕ ತನ್ನ ತಾಪವನ್ನು ಕಡಿಮೆ ಮಾಡಿಕೊಳ್ಳುತ್ತಾನೆ. ಇದರಿಂದ ಹೆದರಿದ ಮಹಿಳೆಯರು ಎದುರಾಡದೇ ಸುಮ್ಮನೆ ಇರುತ್ತಾರೆ. ಈ ಸುಮ್ಮನೆ ಇರುವ ಪರಿಯೇ ಪುರುಷನಿಗೆ ವರದಾನವಾಯಿತು ಎಂದು ಹೇಳಬಹುದು. ಇದರಿಂದ ಅವನು ಹಿಂಸಿಸುವ ಪ್ರವೃತ್ತಿ ದಿನೇ ದಿನೇ ಹೆಚ್ಚುತ್ತಾ ಅದು ವಿಕೋಪಕ್ಕೆ ಹೋಗಿರುವುದನ್ನು ನಾವು ಕಾಣುತ್ತೇವೆ.

ಈ ಕುರಿತಾದ ಹಿಂಸೆಗಳನ್ನು ತಡೆಯಲು ಸರಕಾರವು 'ಕೌಟುಂಬಿಕ ಹಿಂಸೆ ತಡೆ ಕಾಯ್ದೆ'-೨೦೦೫ನ್ನು ಹೊಸದಾಗಿ ಜಾರಿಗೆ ತಂದಿದೆ. ವ್ಹಿಯನ್ನಾ ಅಕಾರ್ಡ್ ೧೯೯೪, ಬೀಜಿಂಗ್ ಡಿಕ್ಲರೇಷನ್ ಆ್ಯಂಡ್ ಪ್ಲಾಟ್‌ಫಾರ್ಮ ಪಾರ್ ಆಕ್ಷನ್ (೧೯೯೫) ಇವುಗಳನ್ನು ಮನ್ನಿಸಿ, ಮಾನವ ಹಕ್ಕುಗಳ ಬಗೆಗೆ ಸಂಯುಕ್ತ ರಾಷ್ಟ್ರ ಸಂಘವು ಮಹಿಳೆಯರು ಮತ್ತು ಗಂಡು ಮಕ್ಕಳಲ್ಲಿ ಯಾವುದೇ ತರಹದ ಭಿನ್ನಭೇದ, ತಾರತಮ್ಯ ಮಾಡಬಾರದೆಂದು UNO ಕಮಿಟಿ ಸಾಮಾನ್ಯವಾಗಿ ಹೆಣ್ಣುಮಕ್ಕಳಿಗೆ ಯಾವುದೇ ಗೃಹ ಹಿಂಸೆ ಕೊಡಬಾರದೆಂದು ತನ್ನ ಸಾಮಾನ್ಯ ಶಿಫಾರಸ್ಸು ನಂ. XII(೧೯೮೯)ರಲ್ಲಿ ಎಲ್ಲಾ ರಾಷ್ಟ್ರಗಳಿಗೆ ತನ್ನ ಸದುದ್ದೇಶವನ್ನು ತಿಳಿಸಿ, ಆಯಾ ರಾಷ್ಟ್ರಗಳಲ್ಲಿ ತಮ್ಮ ಅಧಿನಿಯಮವನ್ನು ಪಾಸು ಮಾಡಲು ತಿಳಿಸಿತು. ಅದರಂತೆ ಭಾರತಕ್ಕೂ ತಿಳಿಸಿತು. ಭಾರತ ಸಂವಿಧಾನ ಪರಿಚ್ಛೇದ ೧೪, ೧೫ ಮತ್ತು ೨೧ರ ಅನ್ವಯ ಭಾರತ ಸರ್ಕಾರವು

ಹೆಣ್ಣುಮಕ್ಕಳನ್ನು ಕೌಟುಂಬಿಕ ಹಿಂಸೆಯಿಂದ ರಕ್ಷಿಸುವ ಅಧಿನಿಯಮ-೨೦೦೫ ಇದನ್ನು ಪಾಸು ಮಾಡಿತು. ಇದು ಅತ್ಯಂತ ಮಹತ್ವದ ಕಾನೂನು ಆಗಿದೆ.

ಆದ್ದರಿಂದ ನನ್ನ ಅಧ್ಯಯನಕ್ಕಾಗಿ ಈ ಕಾನೂನಿನ ಬಗ್ಗೆ ಮಾಹಿತಿಯನ್ನು ತಿಳಿಯುವುದು ಮುಖ್ಯವಾಗಿದೆ. ಕೌಟುಂಬಿಕ ಹಿಂಸೆಯ ವ್ಯಾಪ್ತಿಯು ತುಂಬಾ ವಿಶಾಲವಾಗಿರುವುದರಿಂದ ನನ್ನ ಅಧ್ಯಯನದ ದೃಷ್ಟಿಯಿಂದ ಕೌಟುಂಬಿಕ ಹಿಂಸೆಯ ಸ್ವರೂಪ, ನಿರ್ವಚನಗಳು, ಕಾರಣಗಳು, ಪರಿಣಾಮಗಳು ಮತ್ತು ಸರಕಾರದ ಕಾನೂನಿನ ಕ್ರಮ ಹಾಗೂ ಪರಿಹಾರ ಮುಂತಾದ ವಿಷಯಗಳ ಬಗ್ಗೆ ಸ್ಪಷ್ಟವಾದ ಮಾಹಿತಿಯನ್ನು ಈ ಅಧ್ಯಯನ ಒಳಗೊಂಡಿದೆ.

ಕೌಟುಂಬಿಕ ಹಿಂಸೆ : ನಿರ್ವಚನಗಳು

ಕೌಟುಂಬಿಕ ಹಿಂಸೆ ಪದದ ವ್ಯಾಖ್ಯಾನವು ಸಂಯುಕ್ತ ರಾಷ್ಟ್ರ UNO ರಚಿಸಿರುವ ಕೌಟುಂಬಿಕ ಹಿಂಸೆಯ ಮಾದರಿಯ ಶಾಸನ CEDAW ವ್ಯಾಖ್ಯಾನವನ್ನು ಆಧರಿಸಿದೆ. ೧೯೭೯ ಇದರ ಪ್ರಕಾರ ಕೌಟುಂಬಿಕ ಹಿಂಸೆ ಎಂದರೆ "ಕೌಟುಂಬಿಕ ದೌರ್ಜನ್ಯದಲ್ಲಿ ಲಿಂಗತ್ವದ ಆಧಾರದ ಮೇಲೆ ದೈಹಿಕವಾಗಿ, ಮಾನಸಿಕವಾಗಿ ಮತ್ತು ಕುಟುಂಬದ ಮಹಿಳೆಯ ಮೇಲೆ ಮನೆಯ ಸದಸ್ಯರೇ ನಡೆಸುವ ಹಿಂಸೆ. ಇದು ಸಣ್ಣ ಏಟಿನಿಂದ ಹಿಡಿದು ಕ್ರೂರವಾದ ದೈಹಿಕ ಹೊಡೆತ, ಅಪಹರಣ, ಹೆದರಿಸುವುದು, ಬೈಗುಳ, ಆಸ್ತಿ ನಾಶ, ಲೈಂಗಿಕ ಹಿಂಸೆ, ಕೌಟುಂಬಿಕ ಬಲತ್ಕಾರ. ವರದಕ್ಷಿಣೆ ಮತ್ತು ಅದಕ್ಕೆ ಸಂಬಂಧಪಟ್ಟಂತಹ ಹಿಂಸೆ, ಮನೆಯ ಕೆಲಸಗಾರರ ಮೇಲೆ ಅಥವಾ ಅಂತಹ ಪ್ರಯತ್ನಗಳನ್ನು ಕೂಡಾ ಕೌಟುಂಬಿಕ ದೌರ್ಜನ್ಯ"[7] ಎಂದು ಅರ್ಥೈಸಲಾಗಿದೆ.

೪೩ನೇ ಅಧಿನಿಯಮ ಕಲಂ-೩ರ ಪ್ರಕಾರ ಕೌಟುಂಬಿಕ ಹಿಂಸೆಯ ಪರಿಭಾಷೆ ವ್ಯಾಖ್ಯೆ

ಈ ಅಧಿನಿಯಮದ ಉದ್ದೇಶಕ್ಕಾಗಿ ಯಾವುದೇ ಪ್ರತಿವಾದಿಯೂ ಯಾವುದೇ ಲೋಪ, ವರ್ತನೆ ಅಥವಾ ದುರುದ್ದೇಶದಿಂದ, ದುರುದ್ದೇಶದ ಸ್ವಭಾವವನ್ನು ಕೌಟುಂಬಿಕ ಹಿಂಸೆಯೆಂದು ಈ ಮಸೂದೆಯಲ್ಲಿ ಅರ್ಥೈಸಲಾಗಿದೆ. ಅದು ಈ ಕೆಳಗಿನಂತಿವೆ.

ಅ. "ಯಾವುದೇ ಬಾಧಿತ ವ್ಯಕ್ತಿಗೆ ನಷ್ಟ, ಹಿಂಸೆ ಇಲ್ಲವೆ ಗಾಯ ಇಲ್ಲವೇ ಆರೋಗ್ಯಕ್ಕೆ ಅಪಾಯ ಒಡ್ಡುವ ಸುರಕ್ಷಿತ ಇಲ್ಲವೇ ದೇಹದ ಅಂಗಾಂಗಕ್ಕೆ ಇಲ್ಲವೇ ಸುರಕ್ಷತೆಗೆ ದೈಹಿಕವಾಗಿ ಆಗಲಿ, ಮಾನಸಿಕವಾಗಿ ಆಗಲಿ ಇಲ್ಲವೆ ದೈಹಿಕವಾಗಿ ದೋಷಿಸುವುದು, ಹೆಣ್ಣನ್ನು ಲೈಂಗಿಕ ಶಬ್ದಗಳಿಂದ ಬೈಯುವುದು, ಆರ್ಥಿಕತೆಯಿಂದ ಕೀಳಾಗಿ ಬೈಯುವುದು.

ಬ. ಬಾಧಿತ ವ್ಯಕ್ತಿಗೆ ಕಿರುಕುಳ ಕೊಡುವುದು ಇಲ್ಲವೆ ಅವುಗಳನ್ನು ಹಿಂಸಿಸುವುದು, ಗಾಯಗೊಳಿಸುವುದು ಇಲ್ಲವೆ ಬಾಧಿತ ವ್ಯಕ್ತಿಯ ಜೀವನಕ್ಕೆ ಅಪಾಯ ಒಡ್ಡಿ ಅವಳು ಪ್ರತಿವಾದಿಯೊಂದಿಗೆ ಅನೈತಿಕ ಸಂಬಂಧ ಹೊಂದುವಂತೆ ಅವಳಿಗೆ ಒತ್ತಾಯಿಸುವುದು. ಬಾಧಿತ ವ್ಯಕ್ತಿಯು ತವರು ಮನೆಯಿಂದ ಆಸ್ತಿ, ಆಭರಣ, ಹಣ ತರುವಂತೆ ಒತ್ತಾಯಿಸುವುದು.

ಕ. ಬಾಧಿತ ವ್ಯಕ್ತಿಯನ್ನು ಅಂಜಿಸುವುದರ ಮೂಲಕ ಅಥವಾ ಆಕೆಯ ಯಾವುದೇ ಸಂಬಂಧಿಕರಿಗೆ ಉಪಕಲಂ (ಅ) ಮತ್ತು (ಬ)ದಲ್ಲಿ ಕಾಣಿಸಿದಂತೆ ಮಾಡುವುದು.

ಡ. ಬಾಧಿತ ವ್ಯಕ್ತಿಗೆ ಹಿಂಸೆ ಹಾಗೂ ದೈಹಿಕ ಇಲ್ಲವೆ ಮಾನಸಿಕವಾಗಿ ಯಾವುದೇ ಗಾಯ ಮಾಡುವುದು. ಸೇಡು, ನಷ್ಟ, ಅಪಾಯ ಒದಗುವಂತೆ ಮಾಡುವುದನ್ನು ಸಹ ಕೌಟುಂಬಿಕ ಹಿಂಸೆ''[೨] ಎಂದು ಹೊಸದಾಗಿ ಜಾರಿಗೆ ಬಂದಿರುವ ಕಾಯ್ದೆಯಲ್ಲಿ ವ್ಯಾಖ್ಯಾನಿಸಲಾಗಿದೆ.

ಭಾರತ ಸರ್ಕಾರದ ಮಸೂದೆ ಸೆಕ್ಷನ್ ೪(೧)ರಲ್ಲಿ ಕೌಟುಂಬಿಕ ಹಿಂಸಾಚಾರದ ವಿವರಣೆ ಹೀಗಿದೆ:

೧. ''ಪ್ರತಿವಾದಿಯ ಕೃತ್ಯ ಮತ್ತು ನಡವಳಿಕೆಯನ್ನು ಕೌಟುಂಬಿಕ ಹಿಂಸಾಚಾರ ಎಂದು ಕರೆಯಲು ಆತ ಪ್ರತಿದಿನವು ಹಲ್ಲೆ ನಡೆಸುತ್ತಿದ್ದರೆ ಅಥವಾ ತನ್ನ ಹಿಂಸಾತ್ಮಕ ನಡವಳಿಕೆಯಿಂದ ಹಿಂಸೆಗೆ ಒಳಗಾದ ವ್ಯಕ್ತಿಯ ಜೀವನವನ್ನು ದುಃಖಕ್ಕೆ ಈಡು ಮಾಡುತ್ತಿದ್ದರೆ.

೨. ಹಿಂಸೆಗೊಳಗಾದ ವ್ಯಕ್ತಿಯು ಅನೈತಿಕ ಜೀವನ ನಡೆಸುವಂತೆ ಬಲತ್ಕರಿಸುವುದು.

೩. ಹಿಂಸೆಗೊಳಗಾದ ವ್ಯಕ್ತಿಗೆ ಘಾಸಿ ಅಥವಾ ಅಪಾಯ ಉಂಟು ಮಾಡುತ್ತಿದ್ದರೆ, ಅದನ್ನು ಕೌಟುಂಬಿಕ ಹಿಂಸಾಚಾರ''[೩] ಎಂದು ನಿರ್ವಚಿಸಲಾಗಿದೆ.

''ಪಿತೃಪ್ರಧಾನ ಸಮಾಜವು ಕುಟುಂಬವನ್ನು ಮಹಿಳೆಯ ಅನಿವಾರ್ಯವೂ, ಸುರಕ್ಷಿತವೂ ಆದ ಸಾಮಾಜಿಕ ಸಂಸ್ಥೆಯೆಂದು ವ್ಯಾಖ್ಯಾನಿಸುತ್ತದೆ. ಕುಟುಂಬ ಹಾಗೂ ಕುಟುಂಬೇತರ ಸಾಮಾಜಿಕ ಸಂಸ್ಥೆಗಳನ್ನು ಒಳ-ಹೊರ ಎಂದು ವಿಭಜಿಸುವುದಾದರೆ ಒಳಭಾಗದ ಒಡತಿಯು ಸ್ತ್ರೀಯಾಗಿರುತ್ತಾಳೆ ಎಂದು ವಿವರಿಸುತ್ತದೆ.''[೪] ವಾಸ್ತವದಲ್ಲಿಯಾದರೆ ಜಗತ್ತಿನ ಬಹುತೇಕ ಎಲ್ಲಾ ಸಮಾಜಗಳ ಕುಟುಂಬ ವ್ಯವಸ್ಥೆಯು ಪಿತೃಪ್ರಧಾನ ನಿರ್ದೇಶನಗಳ ಆಧಾರದ ಮೇಲೆ ರಚನೆಗೊಂಡದ್ದಾಗಿದ್ದು, ಅಲ್ಲಿ ಸ್ತ್ರೀಯ ಸ್ಥಾನಮಾನ, ಅವಕಾಶಗಳು ಪಕ್ಕಕ್ಕೆ ತಳ್ಳಲ್ಪಟ್ಟಿರುತ್ತವೆ. ಲಿಂಗತಾರತಮ್ಯ ಸ್ತ್ರೀಯರ ಮೇಲಿನ ದೌರ್ಜನ್ಯವನ್ನು ಪರಿಹರಿಸುವುದಿರಲಿ. ಕೌಟುಂಬಿಕ ವ್ಯಾಪ್ತಿಯಲ್ಲಿ ಸ್ತ್ರೀಯರು ಅಪಾರವಾದ ಹಿಂಸೆಗೆ ಒಳಗಾಗುತ್ತಾರೆ ಎಂಬ ಅಭಿಪ್ರಾಯವನ್ನೇ ಸ್ವೀಕರಿಸುವ ಸ್ಥಿತಿಯಲ್ಲಿದ್ದಿಲ್ಲ. ಹಾಗಾಗಿ ಅದು ಕೌಟುಂಬಿಕ ಹಿಂಸೆಯ ಸಂದರ್ಭದಲ್ಲಿ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವುದನ್ನು, ಕಾನೂನು ರಚನೆಯ ಅಗತ್ಯವನ್ನು, ಯಾವುದೇ ಅನ್ಯ ಸಂಸ್ಥೆಯ

ಮಧ್ಯಸ್ಥಿಕೆಯನ್ನು ನಿರಾಕರಿಸುತ್ತದೆ. ಕುಟುಂಬದೊಳಗಿನ ಕಲಹವು ಭೀಕರ ಸ್ವರೂಪ ತಲುಪಿದಾಗಲೂ ಇನ್ನೊಬ್ಬರ ಮಧ್ಯಸ್ಥಿಕೆಯು ಅನಗತ್ಯವೆನ್ನುತ್ತದೆ. ಅದ್ದರಿಂದಲೇ ಭಾರತದ ಮಹಿಳಾ ಚಳುವಳಿಯು ಆರಂಭಿಕ ಕಾಲದಲ್ಲಿಯೇ ಹೆಣ್ಣು ಶಿಶುಹತ್ಯೆಯಂತಹ ವಿಚಾರವನ್ನು ಕೈಗೆತ್ತಿಕೊಂಡರೂ ಅದನ್ನು ಕೌಟುಂಬಿಕ ಹಿಂಸೆಯ ಅರ್ಥದಲ್ಲಿ ಪರಿಭಾವಿಸಲಿಲ್ಲ. ಸ್ತ್ರೀಯರ ಬಿಡುಗಡೆಯ ಸ್ಥಿತಿಯನ್ನು ವಿವಾಹ ಹಾಗೂ ಕುಟುಂಬ ಸಂಸ್ಥೆಗಳ ವಿಘಟನೆಯ ನೆಲೆಯಲ್ಲಿ ಸ್ವೀಕರಿಸಲು ಸಾಧ್ಯವಾಗಿಲ್ಲ. ಯಾವುದೇ ಸಾಮಾಜಿಕ ಬದಲಾವಣೆಯಾದರೂ ಅದು ಕುಟುಂಬನಿಷ್ಠೆ ಉಳಿಸಿಕೊಳ್ಳುತ್ತಲೇ ಬರಬೇಕೆಂಬುದು ಇಲ್ಲಿನ ನಂಬಿಕೆ.

"ಪಿತೃಪ್ರಧಾನ ಕುಟುಂಬದಲ್ಲಿ ಹೆಣ್ಣಿನ ಮೇಲಿನ ಹಿಂಸೆಯು ಭ್ರೂಣಾವಸ್ಥೆಯಲ್ಲಿಯೇ ಆರಂಭಗೊಳ್ಳುವುದಾಗಿರುತ್ತದೆ." ಹೆಣ್ಣು ಭ್ರೂಣಗಳು ಹಾಗೂ ಹೆಣ್ಣು ಶಿಶುಗಳ ಹತ್ಯೆಯು ತವರಿನಲ್ಲಿಯೇ ನಡೆಯುವ ಎರಡು ಪ್ರಮುಖ ಹಿಂಸೆಗಳಾಗಿವೆ. ಈ ಎರಡು ಅಂಶಗಳನ್ನು ಹಾಗೂ ಎರಡು ಪ್ರಮುಖ ಮಹಿಳಾ ವಿಷಯಗಳಾಗಿ ಕೈಗೆತ್ತಿಗೊಂಡು ಭಾರತ ಮಹಿಳಾ ಚಳುವಳಿಗಳು ಹೋರಾಡಿವೆ. ಅದರ ವಿರುದ್ಧ ಕಾನೂನು ರಚನೆಯನ್ನು ತರಲಾಗಿದ್ದು, ಈ ಕುರಿತು ಪ್ರತ್ಯೇಕ ಪ್ರಸ್ತಾಪವೇ ಇರುವುದರಿಂದ ಅದನ್ನಿಲ್ಲಿ ಪುನಾರಾವರ್ತನೆಗೊಳಿಸುವುದಿಲ್ಲ. ತವರಿನಲ್ಲಿ ಸ್ತ್ರೀ ಎದುರಿಸುವ ಇನ್ನೊಂದು ಪ್ರಮುಖ ಹಿಂಸೆ ಲಿಂಗ ತಾರತಮ್ಯವಾಗಿದೆ. ಭ್ರೂಣಹತ್ಯೆ, ಶಿಶುಹತ್ಯೆಯ ಹಂತಗಳನ್ನು ದಾಟಿ ಹೆಣ್ಣು ಮಗುವೊಂದು ಕುಟುಂಬದಲ್ಲಿ ಉಳಿದರೂ ಆ ಕುಟುಂಬದಲ್ಲಿ ಹೆಣ್ಣು ಮಗುವು ಅದರ ನಂತರದ ಜೀವನವನ್ನು ನಡೆಸುತ್ತದೆ ಎಂದೇನು ಭಾವಿಸಬೇಕಿಲ್ಲ. ಬದಲಿಗೆ ಆ ಮಗು ಆಹಾರ, ಆರೋಗ್ಯ, ಶಿಕ್ಷಣ, ಕೌಟುಂಬಿಕ ದುಡಿಮೆ ಇತ್ಯಾದಿ ಎಲ್ಲಾ ಹಂತಗಳಲ್ಲಿ ನಿರ್ಲಕ್ಷ್ಯಕ್ಕೆ ಒಳಪಟ್ಟು ಬೆಳೆಯುತ್ತದೆ. ಹೆಣ್ಣುಮಕ್ಕಳ ಶಾಲೆ ಬಿಡುವಿಕೆ, ಆರೋಗ್ಯ ಕೇಂದ್ರಗಳಲ್ಲಿನ ದಾಖಲೆಗಳು ಇತ್ಯಾದಿಗಳು ಈ ಅಂಶವನ್ನು ಸಾಬೀತುಪಡಿಸುತ್ತವೆ. ತವರನ್ನು ಮಹಿಳೆಯ ಸುಖದ ದಿನಗಳ ಬದುಕಾಗಿ ಗ್ರಹಿಸುವ ಸಮಾಜದಲ್ಲಿಯೇ ಹೆಣ್ಣು ಅಪಮಾನ, ಅಸಹಾಯಕತೆಯ ಬದುಕನ್ನು ನಡೆಸುತ್ತಾಳೆ.

ಮದುವೆ ಎನ್ನುವ ಸಂಸ್ಥೆಯಿಂದ ತವರಿಗೆ ವಿದಾಯ ಹೇಳಿ ಗಂಡನ ಮನೆಯನ್ನು ಸೇರಿದ ನಂತರ ಸ್ತ್ರೀ ಕೌಟುಂಬಿಕ ಹಿಂಸೆಯ ಇನ್ನೊಂದು ಮುಖವನ್ನು ಕಾಣುತ್ತಾಳೆ. ವಿವಾಹ ಸಂಸ್ಥೆಯ ವಿವಿಧ ಮುಖಗಳಿಂದ ಬಾಲ್ಯ ವಿವಾಹ, ಬಹುಪತ್ನಿತ್ವ ಅಥವಾ ಪತಿತ್ವ, ವೈಧವ್ಯ, ಪರಿತ್ಯಕ್ತ ಸ್ಥಿತಿಗಳೆಲ್ಲವೂ ಮಹಿಳೆಯ ಮೇಲಿನ ದೌರ್ಜನ್ಯವನ್ನು ತೀವ್ರಗೊಳಿಸುವ ಅಂಶಗಳೇ ಆಗುತ್ತವೆ. ದೈಹಿಕವಾಗಿ, ಮಾನಸಿಕವಾಗಿ ಅಪ್ರಾಪ್ತರಾಗಿರುವ ಹೆಣ್ಣುಮಕ್ಕಳು ಈ ಎರಡು ಬಗೆಯಲ್ಲಿಯೂ ಹೆಚ್ಚಿನ ಹಿಂಸೆಗೆ ಒಳಗಾಗುತ್ತಾರೆ. ಮಹಿಳೆಯರು ಕೌಟುಂಬಿಕ ಜವಾಬ್ದಾರಿಯನ್ನು ಗ್ರಹಿಸಲಾರದೆ, ಗ್ರಹಿಸಿದರೂ ಹೊರಲಾರದ ಬಾಲ್ಯವು ಗಂಡನ ಮನೆಯಲ್ಲಿ ಅನುಭವಿಸ ಬೇಕಾದ ಹಿಂಸೆಗೆ ಕಾರಣವಾಗುತ್ತದೆ. ವಿವಾಹದ ವಯಸ್ಸಿನ ಬಗ್ಗೆ ೧೮ ವರ್ಷಗಳ ನಿಶ್ಚಿತ ಕಾಯ್ದೆ ಇದ್ದರೂ ನಮ್ಮಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ೧೮ರ ಪೂರ್ವದಲ್ಲಿಯೇ ನಡೆದವುಗಳಾಗಿರುತ್ತವೆ. ಇಂತಹ

ಎಷ್ಟೋ ಸಂದರ್ಭಗಳಲ್ಲಿ ಹೆಣ್ಣುಮಕ್ಕಳು ತಮ್ಮ ಮೇಲಾಗುವ ಹಿಂಸೆಯನ್ನು ಸರಿಯಾದ ರೀತಿಯಲ್ಲಿ ಗ್ರಹಿಸಲು ಆಗಿರುವುದಿಲ್ಲ.

ಇನ್ನೂ 'ಹಿಂಸೆ' ಎಂಬ ಪದದ ಪರಿಗಣನೆ 'ಹೆಣ್ಣು' ಎಂಬ ಪದಕ್ಕೆ ಪಿತೃಪ್ರಧಾನ ಸಮಾಜವು ಕೇವಲ ದೈಹಿಕ ನಿರ್ವಚನವನ್ನು ಮಾತ್ರ ಕೊಟ್ಟುಕೊಂಡಿರುವುದರಿಂದ ಹೆಣ್ಣಿನ ಮಾನಸಿಕ ಸ್ಥಿತಿಯ ಬಗ್ಗೆ ಅದಕ್ಕೆ ತನ್ನ ಆದರ್ಶದ ನೆಲೆಯಲ್ಲಿ ಕೂಡಾ ಅರಿವಿರುವುದಿಲ್ಲ. ಹಾಗಾಗಿ ಈ ಸಮಾಜವು ಸ್ತ್ರೀಯ ಸುಖವೆಂಬುದನ್ನು ಊಟ, ಬಟ್ಟೆ, ವಸತಿ, ಒಡವೆ, ಇತ್ಯಾದಿ ಭೌತಿಕ ಸಂಗತಿಗಳ ಹಿನ್ನೆಲೆಯಲ್ಲಿಯೇ ಅಳೆಯುತ್ತದೆ. ಪರಿಣಾಮವಾಗಿ ಶ್ರೀಮಂತ ಕುಟುಂಬಗಳ ಮಹಿಳೆಯರಿಗೆ ಕೌಟುಂಬಿಕ ಹಿಂಸೆಗೂ ನಡುವಿನ ಸಂಬಂಧಗಳು ಅರಿವಾಗುವುದಿಲ್ಲ. ಯಾವ ಕುಟುಂಬಗಳು ಹೆಣ್ಣಿನ ಭೌತಿಕ ಅಗತ್ಯವನ್ನು ಪೂರೈಸುತ್ತವೆಯೋ ಅಲ್ಲಿನ ಮಹಿಳೆ ಸುಖೀ ಎಂದು ಭಾವಿಸಲಾಗುತ್ತದೆ. ಆದರೆ ಎಷ್ಟೋ ಸಂದರ್ಭದಲ್ಲಿ ಭೌತಿಕ ಸರಕುಗಳು ಮಹಿಳೆಯನ್ನು ಅಪಾರ ಹಿಂಸೆಗೆ ಗುರಿಪಡಿಸುತ್ತವೆ. ಆದರೆ ಕುಟುಂಬದ ಯಾವ ನೆಲೆಯಲ್ಲಿಯೂ ಸ್ತ್ರೀಗೆ ತನ್ನ ಇಚ್ಛೆಗಳನ್ನು, ನಿರ್ಧಾರಗಳನ್ನು (ಕನಿಷ್ಠ ತನಗೆ ಸಂಬಂಧಿಸಿದ ವಿಚಾರಗಳಲ್ಲಿ) ವ್ಯಕ್ತಪಡಿಸುವ, ಅಳವಡಿಸಿಕೊಳ್ಳುವ ಅವಕಾಶವಿರುವುದಿಲ್ಲ. ಗಂಡನೊಂದಿಗೆ ಲೈಂಗಿಕ ಜೀವನದ ನಿರಾಕರಣೆಯಾಗಲಿ, ಮಕ್ಕಳನ್ನು ಹೇರುವುದರ ಬಗೆಗಿನ ಅಭಿಪ್ರಾಯವನ್ನಾಗಲೀ ಆಕೆ ವ್ಯಕ್ತಪಡಿಸುವಂತಿಲ್ಲ. ಈ ಎಲ್ಲಾ ಅಂಶಗಳನ್ನು ಗಮನಿಸುವುದಾದರೆ ಕೌಟುಂಬಿಕ ಹಿಂಸೆಯ ವ್ಯಾಖ್ಯಾನ ಭಿನ್ನ ನೆಲೆಯಲ್ಲಿಯೇ ಆಗಬೇಕಾಗುತ್ತವೆ. ಹಲವು ಅಧ್ಯಯನಗಳು ಕಂಡುಕೊಂಡಿರುವಂತೆ ಹೆಣ್ಣಿನ ಮೇಲಿನ ಹೊಡೆತ ಬಡಿತಗಳ ಹಕ್ಕನ್ನು ಸಮಾಜದ ಎಲ್ಲಾ ಸ್ತರಗಳು ಪುರುಷನ ಹಕ್ಕೆಂದೇ ಭಾವಿಸಿವೆ. ಇದರಿಂದ ಹೆಣ್ಣು ಮಕ್ಕಳ ಮಾನಸಿಕ ನಿರೀಕ್ಷೆಗಳು, ಸಂವೇದನೆಗಳ ಮಾತು ಅತ್ಯಂತ ದುಬಾರಿಯಾಗಿ ಕಾಣಬರುತ್ತದೆ.

ಕಳೆದ ೨೦-೩೦ ವರ್ಷಗಳಿಂದೀಚೆಗೆ ಮಹಿಳೆಯ ಸಮಸ್ಯೆಯನ್ನು ವಿಷಯಾಧಾರಿತ ಅಥವಾ ವ್ಯಕ್ತಿಗತ ಸಮಸ್ಯೆಯಾಗಿ ಪರಿಗಣಿಸಿ ಪರಿಹಾರ ಹುಡುಕುವುದರೊಂದಿಗೆ ಪಿತೃಪ್ರಧಾನ ವ್ಯವಸ್ಥೆಯ ಬಹುಮುಖ್ಯ ಸಂಸ್ಥೆಯಾದ ಕುಟುಂಬವೂ ಮೂಲಭೂತವಾಗಿ ಹೇಗೆ ಸ್ತ್ರೀಯನ್ನು ಪರಿಭಾವಿಸುತ್ತದೆ, ಸ್ವೀಕರಿಸುತ್ತದೆ ಎಂಬುದರ ಹಿನ್ನೆಲೆಯಲ್ಲಿ 'ಕೌಟುಂಬಿಕ ಹಿಂಸೆ' ಎಂಬ ವಿಚಾರವನ್ನು ಗ್ರಹಿಸಿ ಆ ಕುರಿತು ಸಮಗ್ರ ಕಾನೂನು ರಚನೆಗೆ ಬೇಡಿಕೆ ಇಟ್ಟಿದ್ದ ಪರಿಣಾಮವಾಗಿ ಸರ್ಕಾರ ವರದಕ್ಷಿಣೆ ವಿರೋಧಿ ಘಟಕ, ಕುಟುಂಬ ನ್ಯಾಯಾಲಯನ್ನು ೯೮ಎ ಇತ್ಯಾದಿಗಳನ್ನು ರೂಪಿಸಿದೆ. ಸತಿ ಸಹಗಮನ ನಿಷೇಧದ ಕಾಯ್ದೆಯಿಂದ ಹಿಡಿದು ಬಂದಿರುವ ಎಲ್ಲಾ ಕಾಯ್ದೆಗಳು ಮಹಿಳೆಯ ಮೇಲಿನ ಹಿಂಸೆಯನ್ನು ನಿಯಂತ್ರಿಸುವ ಕಾಯ್ದೆಗಳೇ ಆಗಿದ್ದರೂ ಅವುಗಳನ್ನೆಲ್ಲವನ್ನು ಹೊರತುಪಡಿಸಿಯೂ ಕೌಟುಂಬಿಕ ಹಿಂಸೆಯನ್ನು ಕುರಿತಂತೆಯೇ ಇಂಡಿಯನ್ ಪಿನಲ್‌ಕೋಡ್‌ನ ೪೯೮ಎನಲ್ಲಿ ಪ್ರಸ್ತಾಪಿಸಿದ್ದರೂ ಅಲ್ಲಿ 'ಹಿಂಸೆ' ಎಂಬುದನ್ನು ಕುಟುಂಬದೊಳಗಿನ (ವಿವಾಹ ಚೌಕಟ್ಟನ್ನು) ಮಹಿಳೆಯ ಮೇಲೆ ಉಂಟಾಗುವ ಕಿರುಕುಳ ಎಂದು ವ್ಯಾಖ್ಯಾನಿಸಲಾಗಿದೆ. ಆದರೆ ಈಗಾಗಲೇ

ಪ್ರಸ್ತಾಪಿಸಿರುವಂತೆ ಕೇವಲ ವಿವಾಹಿತ ಮಹಿಳೆ ಮಾತ್ರ ಹಿಂಸೆಗೆ ಒಳಪಡುವುದಿಲ್ಲ. ವಿವಾಹ ಪೂರ್ವ ಅಂದರೆ ಅವಿವಾಹಿತ ಸ್ತ್ರೀಗೂ ಕೂಡ ಕೌಟುಂಬಿಕ ಹಿಂಸೆ ಜರುಗುತ್ತದೆ. ಹಾಗೆಯೇ ಈ ಹಿಂಸೆ ದೈಹಿಕ ಹಿಂಸೆ ಮಾತ್ರವೇ ಆಗಿರುವುದಿಲ್ಲ. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಲಾಯರ್ಸ್ ಕಲೆಕ್ಟಿವ್ ಎಂಬ NGO ಮಹಿಳಾ ಹಕ್ಕುಗಳ ವಿಭಾಗವು ಕೌಟುಂಬಿಕ ಹಿಂಸೆ ತಡೆ ಮಸೂದೆಯನ್ನು ಮಂಡಿಸಿದೆ. ಇದು ಕೌಟುಂಬಿಕ ಹಿಂಸೆಯ ಪರಿಕಲ್ಪನೆಯನ್ನು ವಿವಾಹದ ಚೌಕಟ್ಟು, ದೈಹಿಕ ಹಿಂಸೆಯ ನೆಲೆಯಿಂದ ವಿಸ್ತರಿಸಿ ವ್ಯಾಖ್ಯಾನಿಸಿದೆ. ಮನೆಯ ಹೆಣ್ಣುಮಕ್ಕಳು, ಸೊಸೆ, ವಯಸ್ಸಾದ ಅತ್ತೆ ಇತ್ಯಾದಿ ಎಲ್ಲಾ ಸಂಬಂಧಗಳ ಸಂದರ್ಭದಲ್ಲಿ ಕೂಡಾ ಹಿಂಸೆಯನ್ನು ಗುರುತಿಸಿ ಅದರ ವಿರುದ್ಧ ಕ್ರಮಕೈಗೊಳ್ಳುವುದನ್ನು ತೋರಿಸಿದೆ. ಅದರ ಆಧಾರದ ಮೇಲೆ ಸರ್ಕಾರವು ತನ್ನದೇ ಆದ ಕೌಟುಂಬಿಕ ಹಿಂಸೆ ತಡೆ ಕಾಯ್ದೆಯನ್ನು ಸಿದ್ಧಪಡಿಸಿ ಲೋಕಸಭೆಯ ಮುಂದಿಟ್ಟದ್ದು ಅದರಲ್ಲಿ ಕೆಲವು ಲೋಪದೋಷಗಳಿರುವುದನ್ನು ಮಹಿಳಾ ಸಂಘಟನೆಗಳು ಗುರುತಿಸಿವೆ. ಉದಾ:- ಕೌಟುಂಬಿಕ ಹಿಂಸೆಯನ್ನು ವಿವಾಹ ಸಂದರ್ಭದೊಂದಿಗೆ ತಳುಕು ಹಾಕುತ್ತದೆ. ಹಿಂಸೆಯು ಪುನಾರಾವರ್ತನೆಗೊಂಡಿದ್ದರೆ ಮಾತ್ರ ಅದನ್ನು ಪರಿಗಣಿಸುತ್ತದೆ. ಮಹಿಳೆಗೆ ನ್ಯಾಯ ಒದಗಿಸುವುದಕ್ಕಿಂತ ಸಂಧಾನ ಮಾಡಿಸುವುದರ ಬಗ್ಗೆ ಹೆಚ್ಚು ಗಮನಹರಿಸುತ್ತದೆ ಇತ್ಯಾದಿ.

ಹೀಗೆ ಒಂದೆಡೆ ಮಹಿಳಾ ಹೋರಾಟಗಾರರು ಕೌಟುಂಬಿಕ ಹಿಂಸೆಯ ಪರಿಪೂರ್ಣವಾದ ವ್ಯಾಖ್ಯಾನಕ್ಕೆ ತೊಡಗುತ್ತಲೇ, ಅದರ ನಿವಾರಣೆಗಾಗಿ ಪ್ರಯತ್ನಿಸುತ್ತಿದ್ದರೂ ಕೌಟುಂಬಿಕ ಹಿಂಸೆಯ ಪ್ರಮಾಣ ಹೆಚ್ಚುತ್ತಾ ಹಿಂಸೆಯ ಕ್ರೌರ್ಯ ಭೀಕರಗೊಳ್ಳುತ್ತಿದೆ. ಶಿಕ್ಷಿತ, ಉದ್ಯೋಗಸ್ಥ ಇತ್ಯಾದಿಯಾಗಿ ಮುಂದುವರಿದ ಜಾಗತಿಕ ಸಂದರ್ಭದಲ್ಲಿಯೂ ಅದು ವ್ಯಾಪಕಗೊಳ್ಳುತ್ತಿದೆ. ಕುಟುಂಬಗಳಲ್ಲಿ ಸ್ತ್ರೀ ಎದುರು ಮಾತನಾಡುವುದು, ಮನೆಯಿಂದ ಹೊರಗೆ ಹೋಗುವುದು ಇತ್ಯಾದಿ ಸಣ್ಣಪುಟ್ಟ ವರ್ತನೆಗಳು ಕೂಡ ಮಹಾಪರಾಧಗಳಾಗಿ ಪರಿಗಣಿತವಾಗಿ ಭೀಕರ ಹಿಂಸೆಗೆ ಒಳಗಾಗುತ್ತಿದ್ದಾಳೆ. ಹೆಂಡತಿಯ ಮೇಲೆ ಕೈ ಮಾಡುವುದು, ಮನೆಯಿಂದ ಹೊರಗೆ ಹಾಕುವುದು ಇತ್ಯಾದಿಗಳು ಪುರುಷ ಪ್ರತಿಷ್ಠೆಯ ಲಕ್ಷಣಗಳೆಂಬಂತೆ ಗುರುತಿಸಲ್ಪಟ್ಟಿವೆ. ಇದಕ್ಕೆ ಪ್ರತಿಯಾಗಿ ಮಹಿಳೆಯ ಅಂತಿಮ ಗುರಿ ಮದುವೆ ಮತ್ತು ಕುಟುಂಬ ಎಂಬುದು ಮತ್ತಷ್ಟು ಬಲಗೊಳ್ಳುತ್ತಿದೆ. ಸಮಾಜ ಕೂಡ ಕೌಟುಂಬಿಕ ಹಿಂಸೆ ಎಂಬುದು 'ಮನೆಯೊಳಗಿನ ವೈಯಕ್ತಿಕ ವಿಚಾರ' ಎಂಬ ನಂಬಿಕೆಯಿಂದ ಅದರ ವಿರುದ್ಧ ಪ್ರತಿಕ್ರಿಯಿಸುತ್ತಿಲ್ಲ. ಸಮಾಜದ ನಿರ್ಲಿಪ್ತ ಧೋರಣೆ ಈ ಹಿಂಸೆಯನ್ನು ಬೆಳೆಸಲು ಅನುವು ಮಾಡಿಕೊಟ್ಟಿದೆ ಎನ್ನಬಹುದು.

ಬ್ರೆನರ್ (Brenner), ಕೋನ್ (Kohn), ಆಂಡ್ರಿ (Andry) ಮುಂತಾದ ಮನಃಶಾಸ್ತ್ರಜ್ಞರು ಮಹಿಳೆಯ ಮೇಲಿನ ಹಿಂಸೆಯನ್ನು ಮನಃಶಾಸ್ತ್ರೀಯವಾಗಿ ನೋಡಲು ಪ್ರಯತ್ನಿಸಿದ್ದಾರೆ. "ನಿರಾಶೆ ಆಕ್ರಮಣ ಶೀಲತೆ ಕೊರತೆ ಮುಂತಾದುವು ಹಿಂಸೆಯ ಸಾಮಾಜಿಕತೆಯನ್ನು ನಿರ್ಧರಿಸುತ್ತದೆ."[೬] ಆದರೆ ಮನಃಶಾಸ್ತ್ರೀಯ ವಿವರಣೆಯನ್ನು ಮೀರಿ ಸಾಮಾಜಿಕ ರಚನೆ ಹಾಗೂ ಸಾಂಸ್ಕೃತಿಕ ಮೌಲ್ಯಗಳು ಮೂಲಭೂತ ಅಂಶಗಳು

ಕೂಡಾ ನಿರ್ಣಾಯಕವಾಗುತ್ತವೆ. ಸಾಂಸ್ಕೃತಿಕವಾಗಿ ಪೂರ್ವ ನಿರ್ಧರಿತವಾದ ಲಿಂಗಪಾತ್ರ ಹಾಗೂ ಸಾಮಾಜೀಕರಣ ಪ್ರಕ್ರಿಯೆಯು ಜೀವನದ ಎಲ್ಲಾ ರಂಗದಲ್ಲೂ ಮಹಿಳೆಯನ್ನು ಎರಡನೇ ದರ್ಜೆಗಿಳಿಸುತ್ತದೆ. ಆದರೆ ನಾಲ್ಕು ಗೋಡೆಯೊಳಗಿನ ಆ ಕುಟುಂಬದ ಕ್ರೌರ್ಯಕ್ಕೆ ಆಕೆ ಗುರಿಯಾಗಬೇಕಾಗಿರುವುದು ವಿಪರ್ಯಾಸ. ಜೈಲಿನ ಹಾಗಿರುವ ಆ ಮನೆಯಲ್ಲಿ ಆಕೆ ದೈಹಿಕ ಹಿಂಸೆಗೆ ಗುರಿಯಾಗುತ್ತಾ ದಹನಕ್ಕೂ ಒಳಗಾಗುತ್ತಾಳೆ.

ಗಂಡನ ಹೊಡೆತ ತಿನ್ನುವ ಮಹಿಳೆಯ ಸ್ಥಿತಿ ಸಾಮಾನ್ಯವಾಗಿ ಆತನ ಒಂದು ಅಪರಾಧವಾಗಿ ದಾಖಲಾಗುವುದೇ ಇಲ್ಲ. "ಅಮೇರಿಕಾದಂತಹ ದೇಶದಲ್ಲೇ ಪ್ರತಿ ೧೦೦೦ ಮಹಿಳೆಯರಲ್ಲಿ ೧೬೮ ಮಹಿಳೆಯರು ಪತಿಯಿಂದ ಹೊಡೆತ ತಿನ್ನುವರು. ಭಾರತದಂತಹ ದೇಶದಲ್ಲಿ ಈ ಪ್ರಮಾಣ ಇನ್ನೂ ಮೂರು ಅಥವಾ ನಾಲ್ಕು ಪಟ್ಟು ಹೆಚ್ಚು. ೧೯೭೦ರವರೆಗೂ ಅಪರಾಧ ತಜ್ಞರು ಮತ್ತು ಸಾರ್ವಜನಿಕರು ಪತ್ನಿಯನ್ನು ಹೊಡೆಯುವುದನ್ನು ಒಂದು ಸಮಸ್ಯೆಯೇ ಅಲ್ಲ ಎನ್ನುವಷ್ಟರಮಟ್ಟಿಗೆ ನಿರ್ಲಕ್ಷಿಸಿದ್ದರು. ೧೯೭೦ರ ಮಧ್ಯಭಾಗದಲ್ಲಿ ಪುನರ್ ಉದಯವಾದ ಮಹಿಳಾ ಚಳುವಳಿಯು ಈ ಹೊಡೆತವನ್ನು ಪ್ರಧಾನ ವಿಷಯವಾಗಿಸಿ ವ್ಯಾಪಕ ಪ್ರಚಾರವನ್ನು ಕೊಟ್ಟಿತು. ಈ ಸಮಯದಲ್ಲಿ ಕೆಲವು ಪ್ರಾಯೋಗಿಕ ಅಧ್ಯಯನಗಳನ್ನು ಪತ್ನಿಯನ್ನು ಹೊಡೆಯುವಿಕೆಗೆ ಸಂಬಂಧಿಸಿದಂತೆ ಮಾಡಲಾಯಿತು."[೬]

ಇಲ್ಲಿ ಕೇವಲ ಪತ್ನಿಯನ್ನು ಹೊಡೆಯುವುದಷ್ಟೇ ಕೌಟುಂಬಿಕ ಹಿಂಸೆಯಾಗಿರದೇ ಅದರಾಚೆಗೂ ಇದರ ವಿಸ್ತಾರವನ್ನು ನಾವು ಕಾಣಬಹುದು. ಚುಚ್ಚಿ ಮಾತನಾಡುವುದು, ಅವಾಚ್ಯವಾಗಿ ಬೈಯುವುದು, ನಿಂದಿಸುವುದು, ಮುಂತಾದವುಗಳನ್ನು ಹಿಂಸೆಯ ಒಳಗೆ ಪರಿಗಣಿಸಬೇಕಾಗುತ್ತದೆ. ಈ ತೆರನಾದ ಹಿಂಸೆಯನ್ನು ಮಹಿಳೆಯರ ಮೇಲೆನೇ ನಡೆಸಲಾಗುತ್ತದೆ. ಜೊತೆಗೆ ದೈಹಿಕ ಬಲವನ್ನು ಪತ್ನಿಯ ಮೇಲೆ ಬಳಸುವುದನ್ನು ಕಾಣಬಹುದು. ಆ ಮೂಲಕ ಪುರುಷರು ಕುಟುಂಬದ ಮೇಲೆ ನಿಯಂತ್ರಣವನ್ನು ಸಾಧಿಸುತ್ತಾರೆ. 'ಈ ಬಲವನ್ನು ಬಳಸದಿದ್ದರೆ ಕುಟುಂಬದ ರಚನೆಯೇ ನಾಶವಾಗಬಹುದೆಂದು' ಅವರು ವಾದಿಸುತ್ತಾರೆ. ಒಬ್ಬರಿಗೊಬ್ಬರು ಇಷ್ಟವಿಲ್ಲದ ಸಂಬಂಧಗಳೇರ್ಪಟ್ಟಾಗ ಈ ಹಿಂಸೆಯ ಸ್ವರೂಪ ಇನ್ನೂ ಭೀಕರವಾಗಿ ಪರಿಗಣಿಸುವುದನ್ನು ನಾವು ಕಾಣಬಹುದು.

ವಿವಾಹಿತ ಮಹಿಳೆಯ ಸಂದರ್ಭದಲ್ಲಿನ ಕೌಟುಂಬಿಕ ಹಿಂಸೆಗೆ ಕಾರಣವಾಗುವ ಅಂಶಗಳಾದ ವರದಕ್ಷಿಣೆ, ಬಹುಪತ್ನಿತ್ವ, ವಿಚ್ಛೇದನಾ, ವೈಧವ್ಯ, ಇತ್ಯಾದಿಗಳ ಕುರಿತಂತೆ ಕೂಡಾ ಪ್ರತ್ಯೇಕ ವಿಸ್ತೃತ ಚರ್ಚೆ ಇರುವುದರಿಂದ ಅದನ್ನಿಲ್ಲಿ ಹೆಚ್ಚು ಪ್ರಸ್ತಾಪಿಸಿಲ್ಲ, ಬದಲಿಗೆ ಅವುಗಳಿಂದ ಉಂಟಾಗುವ ಹಿಂಸೆಯ ಸ್ವರೂಪವನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

ಕೌಟುಂಬಿಕ ಹಿಂಸೆ ಎನ್ನುವಾಗ ಸಾಮರ್ಥ್ಯ ಹಾಗೂ ಕಾನೂನಿನ ಪರಿಭಾಷೆ ಕೂಡಾ (ಇಲ್ಲಿಯ ತನಕ) ವಿವಾಹಿತ ಮಹಿಳೆಯ ಮೇಲಾಗುವ ದೈಹಿಕ ದೌರ್ಜನ್ಯವನ್ನು ಮುಖ್ಯವಾಗಿ ಪರಿಗಣಿಸುತ್ತಿತ್ತು.

ವಾಸ್ತವದಲ್ಲಿ ಅವಿವಾಹಿತ ಮಹಿಳೆಯ ಸ್ಥಿತಿಯಲ್ಲಿ, ವಿವಾಹಪೂರ್ವದ ಕೌಟುಂಬಿಕ ಸಂದರ್ಭದಲ್ಲಿ ಕೂಡಾ ಇದು ತೀವ್ರ ಸ್ವರೂಪದ್ದೇ ಆಗಿರುತ್ತದೆ. ವರದಕ್ಷಿಣೆ, ಸತಿಪದ್ಧತಿಯಂತಹ, ಸಾವಿನ ಇನ್ನೊಂದು ತುದಿ ಭ್ರೂಣಹತ್ಯೆ, ಹೆಣ್ಣು ಶಿಶುಹತ್ಯೆ, ಅವಿಧೇಯಳಾಗಿ ನಡೆಯುತ್ತಾಳೆ ಇತ್ಯಾದಿ ಕಾರಣಗಳ ಮೇಲೆ ಹೊಡೆತ, ಬಂಧನ, ಉಪವಾಸ ಇತ್ಯಾದಿ ಕಿರುಕುಳಗಳಿಗೆ ಒಳಗಾಗುವಂತೆಯೇ ತವರಿನಲ್ಲಿ ಕೂಡಾ ಲಿಂಗತಾರತಮ್ಯ, ಹೊಡೆತ ಬೈಗುಳಗಳಿಗೆ ಒಳಗಾಗುತ್ತಾಳೆಂದು ಹಲವಾರು ಅಧ್ಯಯನಗಳಿಂದ ದೃಢಪಟ್ಟಿದೆ.

ವಿವಾಹಿತ ಮಹಿಳೆಯ ಮೇಲಾಗುವ ಅತ್ಯಾಚಾರಗಳಿಗೆ ಸವಾಲೆಸೆಯುವಂತೆ ಬಾಲ್ಯದಲ್ಲಿಯೂ ಕೂಡಾ ಹೆಣ್ಣುಮಕ್ಕಳು ಮನೆಯಲ್ಲಿ ನಾನಾ ಬಗೆಯ ಲೈಂಗಿಕ ಕಿರುಕುಳಗಳನ್ನು ಅನುಭವಿಸುತ್ತಾರೆಂಬುದು ಕೂಡಾ ದೃಢಪಟ್ಟಿದೆ. ಬಹುಪತ್ನಿತ್ವ ಹಾಗೂ ವಿಧವಾ ಸಂದರ್ಭದಲ್ಲಿ ಸ್ತ್ರೀ ಗಂಡನ ಮನೆಯಲ್ಲಿ ಅನುಭವಿಸುವ ಅನಾದಾರವನ್ನು ಅವಿವಾಹಿತ ಹಾಗೂ ಪರಿತ್ಯಕ್ತ ಸ್ತ್ರೀಯರು ತವರಿನಲ್ಲಿ ಕೂಡಾ ಅನುಭವಿಸುವುದನ್ನು ನಾವು ಕಾಣುತ್ತೇವೆ.

ಈ ಮೇಲಿನ ಅಂಶಗಳನ್ನು ಗಮನಿಸಿದಾಗ ಹಿಂಸೆಯ ಸ್ವರೂಪವನ್ನು ನಿರ್ವಚಿಸಿದ ರೀತಿಗಳು ಪರಿಣಾಮಕಾರಿಯಾದರೂ ಅದರ ಬಗ್ಗೆ ಅದನ್ನು ತಡೆಗಟ್ಟುವ, ಕಡಿಮೆ ಮಾಡುವ ಜನವರ್ಗದಲ್ಲಿ ಅದರ ಬಗ್ಗೆ ಪ್ರಜ್ಞೆ ಮೂಡಿಸುವ ಕಡೆಗೆ ಗಮನ ಹರಿಸಬೇಕಾಗುತ್ತದೆ. ಇವುಗಳ ಬಗ್ಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಅಧ್ಯಯನ ಮಾಡುವುದರಿಂದ ಅದರ ಕುರಿತು ನಿಖರವಾದ ಮಾಹಿತಿ ಲಭ್ಯವಾಗುತ್ತದೆ. ಅದನ್ನು ಪರಿಗಣಿಸಿ ಮುಂದಿನ ಕ್ರಮಕ್ಕೆ ದಾರಿ ಮಾಡಿಕೊಳ್ಳಬಹುದು.

ಅಮರ್ತ್ಯಸೇನ್ ಅವರ `ಸಹಕಾರವಾದಿ ಸಂಘರ್ಷ` (100 Perative Complict) ಎಂಬ ಕುಟುಂಬ ಮಾದರಿಯು ಇಲ್ಲಿ ನಮಗೆ ಹೆಚ್ಚು ಉಪಯುಕ್ತವಾದೀತು. ಈ ಮಾದರಿಯು ಕುಟುಂಬವು ಹೇಗೆ ಸರ್ವ ಸದಸ್ಯರ ಹಿತ ಕಾಪಾಡುವ ಸಂಸ್ಥೆ ಎಂದು ಹೇಳಲಾಗಿದೆ ಅಷ್ಟೇ. ಆದರೆ ನಮ್ಮ ಸಮಾಜವು ಮಹಿಳೆಯರಿಗೆ ಕೆಲವು ಗುಣಗಳನ್ನು ಆರೋಪಿಸಿದೆ. ಅವು ಜೈವಿಕ ನಿಯತಿಗುಣಗಳಾಗಿವೆ. ಆಕೆಯನ್ನು ಪರಹಿತವಾದಿ ಎಂದು ಗುರುತಿಸಲಾಗಿದೆ. ಗಂಡ ಮತ್ತು ಮಕ್ಕಳ ಹಿತವನ್ನು ಕಾಪಾಡುವುದು ಮಹಿಳೆಯರ ಜೈವಿಕ ಜವಾಬ್ದಾರಿಯೆಂದು ವಾದಿಸಲಾಗುತ್ತದೆ. ಮಹಿಳೆಗೆ ತನ್ನದು ಎಂಬ ಆಶೆ-ಆಕಾಂಕ್ಷೆಗಳಿರುವುದಿಲ್ಲವೆಂದು ಹೇಳಲಾಗಿದೆ. ಈ ಗುಣಗಳನ್ನು ಮಹಿಳೆಯ ಶೈಶವಾವಸ್ಥೆಯಿಂದ ಮೈಗೂಡಿಸಿಕೊಳ್ಳುವಂತಹ ವ್ಯವಸ್ಥೆಯನ್ನು ಪುರುಷಶಾಹಿ ರೂಪಿಸಿಬಿಟ್ಟಿದೆ. ಇದರಿಂದಾಗಿ ಮಹಿಳೆಯರು ತಮ್ಮ ಜಗತ್ತು ಎಂದರೆ ಅಡುಗೆ ಮನೆ, ಕಸಮುಸುರೆ ಕೆಲಸಗಳಿಗೆ ಎಂದು ಭಾವಿಸಿಕೊಂಡಿದ್ದಾರೆ. ಇದರಿಂದಾಗಿ ಅವಳ ಶೋಷಣೆ ಸುಲಭವಾಗಿದೆ ಎಂದು ನಿರ್ವಚಿಸಲಾಗಿದೆ.

ಅಮರ್ತ್ಯಸೇನ್ ಅವರು ಮಹಿಳಾ ಶೋಷಣೆ ಬಗ್ಗೆ ವಿಭಿನ್ನವಾದ ಪ್ರಮೇಯವನ್ನು ರೂಪಿಸಿದ್ದಾರೆ. "ಕುಟುಂಬ ಎಂಬ ಸಂಸ್ಥೆಯಲ್ಲಿನ ಸದಸ್ಯರಲ್ಲಿ ಸಹಕಾರದ ಗುಣವೂ ಇರುತ್ತದೆ ಮತ್ತು ಸಂಘರ್ಷದ ಗುಣವೂ ಇರುತ್ತದೆ ಎಂಬುದು ಅವರ ವಾದವಾಗಿದೆ. ಮಹಿಳೆಯರು ತಮ್ಮ ಶೋಷಣೆ ಬಗ್ಗೆ ಹಿಂಸೆಯ ಬಗ್ಗೆ ತಾರತಮ್ಯದ ಬಗ್ಗೆ ಪ್ರತಿಭಟನೆ ಮಾಡುವ ಸ್ಥಿತಿಯಲ್ಲಿರುವುದಿಲ್ಲ. ಪ್ರತಿಭಟಿಸಿದರೆ ಸದ್ಯ ದೊರೆಯುತ್ತಿರುವ ಭದ್ರತೆ ರಕ್ಷಣೆಯೂ ಇಲ್ಲವಾಗಿ ಬಿಡುತ್ತದೆ. ಸಂಘರ್ಷಕ್ಕಿಳಿಯಲಾಗದೆ ಅಸಹಾಯಕತೆ ಯಿಂದ ಸಹಕಾರವಾದಿಗಳಾಗಿರುತ್ತಾರೆ"[೨] ಎಂಬುದು ಅಮರ್ತ್ಯಸೇನ್ ಅವರ ಪ್ರಮೇಯವಾಗಿದೆ.

ಇಲ್ಲಿ ಮಹಿಳೆಯರಿಗೆ ತಾವು ಅನುಭವಿಸುತ್ತಿರುವ ಹಿಂಸೆ, ತಾರತಮ್ಯ, ಶೋಷಣೆ, ದಮನ ಮುಂತಾದವುಗಳ ಅರಿವಿಲ್ಲವೆಂದು ಹೇಳಲು ಸಾಧ್ಯವಿಲ್ಲ. ಆದರೆ ಅದನ್ನು ಪ್ರತಿಭಟಿಸಿ ಕುಟುಂಬದಿಂದ ಹೊರಗೆ ಬಂದರೆ ನೆಲೆ ಎಲ್ಲಿ? ಬದುಕು ಎಲ್ಲಿ, ಹೇಗೆ? ಎಂಬ ಸಮಸ್ಯೆಗಳು ಕಾಡುತ್ತವೆ. ಕುಟುಂಬ ಸಂಬಂಧಗಳನ್ನು ಮುರಿದು ಬಂದ ಮಹಿಳೆಯರನ್ನು ನಮ್ಮ ಸಮಾಜ ಗೌರವಿಸುವುದಿಲ್ಲ ಎಂಬ ಭಾವನೆ ಬರುವುದು ಸಹಜ. ಈ ಪರಿಸ್ಥಿತಿಯಲ್ಲಿ ಮಹಿಳಾ ಸಂಘಟನೆಗಳ ಪಾತ್ರ ಮುಖ್ಯವಾಗಿರುತ್ತದೆ. ಇಂತಹ ಸಮಸ್ಯೆಗಳನ್ನು ಮಹಿಳೆಯರು ಏಕಾಂಗಿಯಾಗಿ ಎದುರಿಸಲು ಸಾಧ್ಯವಿಲ್ಲ. ಸಂಘರ್ಷಣಾತ್ಮಕ ದಾರಿಯನ್ನು ಮಹಿಳೆಯರು ತುಳಿಯಬೇಕಾದರೆ ಅವರಿಗೆ ಸಂಘಟನೆಯ ಬೆಂಬಲ ಬೇಕು.

ಕೌಟುಂಬಿಕ ಹಿಂಸೆಯ ಸ್ವರೂಪ

ಕುಟುಂಬದಲ್ಲಿ ಮಹಿಳೆಯರ ಮೇಲಿನ ಹಿಂಸಾಚಾರಗಳು ವಿವಿಧ ರೀತಿಯ ಸ್ವರೂಪವನ್ನು ಪಡೆದಿರುತ್ತವೆ.

೧. ದೈಹಿಕ ಹಿಂಸೆ

ಕೈಗೆ ಸಿಕ್ಕಿದ ಯಾವುದೇ ವಸ್ತುವಿನಿಂದ ಹೊಡೆಯುವುದು ಸಾಮಾನ್ಯವಾಗಿದೆ. ಸುಡುವುದು, ಕಾವಲು ಕಾಯುವುದು, ಒದೆಯುವುದು, ಗೃಹಬಂಧನದಲ್ಲಿಡುವುದು, ನೀರು, ಆಹಾರ ಕೊಡದಿರುವುದು, ಶೌಚಾಲಯ ಅಥವಾ ಮಲಗುವ ಕೋಣೆಗೆ ಬೀಗ ಹಾಕುವುದು, ಮಕ್ಕಳನ್ನು ಅವಳಿಂದ ದೂರ ಮಾಡುವುದು. ನೂಕುವುದು, ಎಳೆಯುವುದು ಅಥವಾ ಒದೆಯುವುದರ ಮೂಲಕ ಗರ್ಭಪಾತಕ್ಕೆ ಕಾರಣವಾಗುವುದು. ಹೆದರಿಸುವುದು, ಬಲಾತ್ಕಾರವಾಗಿ ಗರ್ಭಪಾತ ಮಾಡಿಸುವುದು, ಗರ್ಭಿಣಿ, ಬಾಣಂತಿಯಿದ್ದಾಗಲೂ ಕೂಡ ಕೆಲಸ ಮಾಡಿಸುವುದು, ದೈಹಿಕ ಹಿಂಸೆಯ ಸ್ವರೂಪದಲ್ಲಿ ಕಾಣಬಹುದು.

೨. ಮಾನಸಿಕ ಹಿಂಸೆ

ಮಾತಿನ ಮೂಲಕ ಹೀಯಾಳಿಸುವುದು, ಅವಮಾನ ಮಾಡುವುದು, ಆಕೆಯನ್ನು ಆಕೆಯ ಸಾಮರ್ಥ್ಯಗಳನ್ನು ಲೇವಡಿ ಮಾಡುವುದು, ಬೇರೆ ಮಹಿಳೆಯರೊಡನೆ ಹೋಲಿಸುತ್ತಾ ಹೀಯಾಳಿಸುವುದು,

ಆಕೆಯ ತಂದೆ ತಾಯಿಗಳನ್ನು ಕೆಲಸಗಳನ್ನು ಹೀಯಾಳಿಸುವುದು. ದೈಹಿಕ ನೋವುಂಟು ಮಾಡಲು ಕಾರಣವಾಗುವಂತೆ ಮತ್ತೆ ಮತ್ತೆ ಬೆದರಿಕೆ ಹಾಕುವುದು. ಮಕ್ಕಳಿಲ್ಲದಿರುವಿಕೆ ಅಥವಾ ಒಂದೇ ಹೆಣ್ಣು ಮಗು ಇದೆ ಎಂಬ ಕಾರಣದಿಂದ ಆಕೆಯನ್ನು ಮೂದಲಿಸುವುದು. ಹೆಣ್ಣು ಮಗುವಿನ ಜನ್ಮಕ್ಕೆ ಹೀಯಾಳಿಸುವುದು, ದೈಹಿಕ ಹಿಂಸೆಯಿಂದಾಗಿ ಗಾಯಗಳಾದರೆ ಯಾವುದೇ ರೀತಿಯ ಔಷಧೋಪಚಾರ ನೀಡದೇ ಇರುವುದು.

೩. ಲೈಂಗಿಕ ಹಿಂಸೆ

ಬಲತ್ಕಾರ, ವೈವಾಹಿಕ ಬಲತ್ಕಾರ, ಆಕೆಯ ದೇಹವನ್ನು ಕುರಿತಂತೆ ಹೀನಾಯವಾಗಿ ಕಾಣುವುದು, ವಿವಸ್ತ್ರಗೊಳಿಸುವುದು, ಲೈಂಗಿಕ ಬೈಗುಳ, ಇಷ್ಟಪಡದ ವರ್ತನೆಯಿಂದ ಚುಡಾಯಿಸುವುದು.

೪. ಆರ್ಥಿಕ ಹಿಂಸೆ

ಆರ್ಥಿಕ ಅಥವಾ ಹಣಕಾಸಿನ ಸಂಪನ್ಮೂಲಗಳಿಂದ ವಂಚಿತರನ್ನಾಗಿಸುವುದು. ಅವಳ ಹೆಸರಿನಲ್ಲಿರುವ ಚರ ಅಥವಾ ಸ್ಥಿರ ಆಸ್ತಿಯನ್ನು ಒತ್ತಾಯಿಸಿ ಬಲವಂತವಾಗಿ ಮಾರಾಟ ಮಾಡುವುದು. ಸಂಪನ್ಮೂಲಗಳನ್ನು ಅಥವಾ ಅದರ ಸೌಲಭ್ಯಗಳನ್ನು ಬಳಸಿಕೊಳ್ಳಲು ಅಡ್ಡಿ ಮಾಡುವುದು ಅಥವಾ ನಿಷೇಧಿಸುವುದು. ಆಕೆಯ ಸಂಬಳದ ಮೇಲೆ ಹಿಡಿತ ಸಾಧಿಸುವುದು ಹಾಗೂ ಉದ್ಯೋಗಕ್ಕೆ ಹೋಗು ಅಥವಾ ಬಿಡು ಎಂದು ಒತ್ತಾಯ ಹೇರುವುದು ಕೂಡಾ ಕೌಟುಂಬಿಕ ಹಿಂಸೆಯ ಸ್ವರೂಪದಲ್ಲಿ ಪರಿಗಣಿಸಲಾಗಿದೆ.

ಮಹಿಳೆಯರನ್ನು ಹಿಂಸಿಸಲು ಸಮಾಜದಲ್ಲಿನ ಪುರುಷಪ್ರಧಾನ ವ್ಯವಸ್ಥೆ ಕೂಡ ಒಂದು ಕಾರಣವಾಗಿದೆ. ಇದರಿಂದಾಗಿ ಮಹಿಳೆಯನ್ನು ಒಂದು ಸಾಮಗ್ರಿ ಅಥವಾ ವಸ್ತುವನ್ನಾಗಿ ನೋಡಲಾಗುತ್ತದೆ. ಸಂಪ್ರದಾಯಗಳು, ಕಾನೂನುಗಳು ಪಿತೃಪ್ರಧಾನ ವ್ಯವಸ್ಥೆಗೆ ಸಹಕರಿಸುತ್ತವೆ. ಆಕೆ ಇಂತಹ ಯಾವುದೊಂದನ್ನೇ ಪ್ರತಿಭಟಿಸಿದರೂ ಮತ್ತೊಮ್ಮೆ ಮಾಡದಂತೆ ಹಿಂಸೆಯ ಮೂಲಕ ಪಾಠ ಕಲಿಸಲಾಗುತ್ತದೆ. ಇದನ್ನು ಸಮಾಜ ಮಾನ್ಯ ಮಾಡುತ್ತದೆ.

ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಕುಟುಂಬದ ಸದಸ್ಯರ ವರ್ತನೆಯಿಂದ ಪಾತ್ರಗಳು ಹಾಗೂ ಜವಾಬ್ದಾರಿಗಳು ನಿರ್ಧಾರವಾಗುತ್ತವೆ. ಕುಟುಂಬದ ಗಂಡಸರಿಂದ ಅಥವಾ ಗಂಡನಿಂದ ಹೊಡೆಸಿಕೊಳ್ಳುವುದು. ಅತ್ಯಂತ ಸಾಧಾರಣ ವಿಷಯ. ಇದನ್ನು ಸಕ್ರಮವೆಂದೂ, ಒಂದು ಮೌಲ್ಯವೆಂದೂ ಕೂಡಾ ಒಪ್ಪಿಕೊಳ್ಳಲಾಗುತ್ತದೆ. ಮಹಿಳೆಯರೇ 'ನನ್ನ ಗಂಡ ತಾನೇ ಹೊಡೆಯೋದು, ಅವನಿಗೆ ಆ ಹಕ್ಕಿದೆ' ಎಂದು ಹೇಳುತ್ತಾರೆ. ಕೀಳರಿಮೆಯನ್ನು ಉಳಿಸಿಕೊಳ್ಳುತ್ತಾಳೆ. ತಲೆಬಾಗಿಸಿ ನಡೆಯುತ್ತಾಳೆ. ನೇರವಾಗಿ ತಲೆಎತ್ತಿ ನಡೆಯಲು ಹಿಂಜರಿಯುತ್ತಾಳೆ. ಮನೆಗೆ ಬೇರೆ ಗಂಡಸು ಬಂದಾಗ ಮನೆಯ ಗಂಡಸರು ಮಾತ್ರ ವ್ಯವಹರಿಸಬಹುದು. ಆದರೆ ಹೆಂಗಸರು ಹೊರಗಡೆ ಬಂದು ಅವರ ಜೊತೆ ಮಾತನಾಡಲು ಹಿಂಜರಿಯುವುದು. ಇಂತಹ ಅಂಶಗಳನ್ನು

ಗಮನಿಸಿದರೆ ಪುರುಷ ಪ್ರಧಾನ ವ್ಯವಸ್ಥೆಯು ಮಹಿಳೆಯನ್ನು ಯಾವ ರೀತಿಯಾಗಿ ಬಂಧಿಸಿದೆ ಎಂಬುದು ಸ್ಪಷ್ಟವಾಗಿ ಚಿತ್ರಿತವಾಗುತ್ತದೆ. ಆ ಮೂಲಕ ಹಿಂಸೆಯ ಸ್ವರೂಪವೂ ನಮಗೆ ಗೋಚರಿಸುತ್ತದೆ.

ಇಂದಿನ ಸಂದರ್ಭದಲ್ಲಿ ಸಮಾಜದಲ್ಲಿ ಸಂಸ್ಕೃತಿ ನೈತಿಕ ಮಟ್ಟ ತೀವ್ರವಾಗಿ ಕುಸಿಯುತ್ತಿದೆ. ಹಸುಳೆಯಿಂದ ಹಿಡಿದು ವೃದ್ಧರವರೆಗೆ ಕುಟುಂಬದಲ್ಲಿ ಮಹಿಳೆಯರ ಮೇಲೆ ಹಿಂಸಾಚಾರಗಳು ಸಂಭವಿಸುತ್ತಿವೆ. ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಗಳ ಭೀಕರ ಘಟನೆಗಳಿಲ್ಲದೆ ಒಂದು ದಿನವೂ ಇಲ್ಲ. ಇಂದು ನಮ್ಮ ದೇಶದ ಯಾವುದೇ ಸ್ಥಳದಲ್ಲಿಯೂ ಮಹಿಳೆ ಸುರಕ್ಷಿತವಾಗಿಲ್ಲ. ಭೀತಿಯ ನೆರಳು ಆಕೆ ಹೋದಲೆಲ್ಲಾ ಅಟ್ಟಿಸಿಕೊಂಡು ಬರುತ್ತದೆ.

ಕುಟುಂಬದಲ್ಲಂತೂ ಮಹಿಳೆಗೆ ರಕ್ಷಣೆ ಸಿಗುತ್ತಿಲ್ಲ. ಸಾರ್ವಜನಿಕ ಸ್ಥಳದಲ್ಲಿಯೇ ಆಗಲಿ ಕಾನೂನು ಮತ್ತು ವ್ಯವಸ್ಥೆಯ ಶಿಕ್ಷಕರೆನಿಸಿಕೊಂಡವರ ಆಶ್ರಯದಲ್ಲಿಯೇ ಆಗಲಿ ಮಹಿಳೆ ಸುರಕ್ಷಿತವಾಗಿಲ್ಲ. "ಮಾನವನ ಹಿಂಸಾಚಾರಕ್ಕೆ ಸ್ತ್ರೀ-ಪುರುಷನೆಂಬ ಭೇದಭಾವವಿಲ್ಲದೇ ಮುದುಕರು, ಮಕ್ಕಳು ಎಂಬ ವ್ಯತ್ಯಾಸವಿಲ್ಲದೆ ಎಲ್ಲರೂ ಬಲಿಯಾಗುತ್ತಿದ್ದಾರೆ. ಹಾಗೆ ನೋಡುವುದಿದ್ದರೆ ಪುರುಷರಿಗಿಂತಲೂ ಸ್ತ್ರೀಯರೇ ಮಾನವನ ಕ್ರೌರ್ಯಕ್ಕೆ ಹಿಂಸೆಗೆ ಬಲಿಯಾಗಿದ್ದುದು ಹೆಚ್ಚೆನಿಸುವುದು. ಸ್ತ್ರೀಸಂಬಂಧವಾದ ಸಾಮಾಜಿಕ ವಿಷಯಗಳ ಹಾಗೂ ಸಮಸ್ಯೆಗಳ ಬಗ್ಗೆ ಶತಶತಮಾನಗಳಿಂದಲೂ ಒಂದು ಬಗೆಯ ಅಸಡ್ಡೆಯಿದ್ದು ಇತ್ತೀಚಿನ ವರ್ಷಗಳಲ್ಲಿ ಮಾತ್ರ ಈ ಕುರಿತು ವಿಶೇಷ ಗಮನವನ್ನು ನೀಡಲಾಗುತ್ತಿದೆ."[7] ಸಾಮಾಜಿಕ ಸಂಶೋಧಕರು, ಸಮಾಜ ವಿಜ್ಞಾನಿಗಳು, ಸರ್ಕಾರಗಳು, ಯೋಜನಾ ಆಯೋಗಗಳು, ಸಾಮಾಜಿಕ ಕಾರ್ಯಕರ್ತರು, ಸಮಾಜ ಕಲ್ಯಾಣ ಇಲಾಖೆಗಳು ಇವರೆಲ್ಲರೂ ಸಹ ಸ್ತ್ರೀಸಂಬಂಧವಾದ ಸಾಮಾಜಿಕ ವಿಷಯಗಳನ್ನು ಅಧ್ಯಯನಗಳಿಗೆ ಮತ್ತು ಕಾರಣ ಕಂಡುಕೊಳ್ಳುವುದಕ್ಕೆ ಪ್ರಯತ್ನ ನಡೆಸಿದ್ದಾರೆ. ಆದಾಗ್ಯೂ ಜಗತ್ತಿನಾದ್ಯಂತ ಸ್ತ್ರೀಯರನ್ನು ಇದೀಗ ಹೆಚ್ಚು ಹೆಚ್ಚಾಗಿ ಬಾಧಿಸುತ್ತಿರುವ ಹಿಂಸೆಯನ್ನು ಹತ್ತಿಕ್ಕುವ ಬಗ್ಗೆ ಇಂತಹ ಗಂಭೀರ ಸಮಸ್ಯೆಯನ್ನು ಸಮಗ್ರವಾಗಿ ಅಧ್ಯಯನ ಮಾಡುವ ಬಗ್ಗೆ ಮತ್ತು ಅದಕ್ಕೆ ಸೂಕ್ತ ಪರಿಹಾರ ಕ್ರಮಗಳನ್ನು ಸೂಚಿಸುವ ಬಗ್ಗೆ ವ್ಯವಸ್ಥಿತವಾದ ಪ್ರಯತ್ನಗಳು ನಡೆದಿಲ್ಲವೆಂದು ಹೇಳಬಹುದು. ಜಗತ್ತಿನ ಶೇಕಡ ಅರ್ಧದಷ್ಟು ಮಂದಿಯನ್ನು ಕಾಡುವ ಇಂತಹ ಸಮಸ್ಯೆಯನ್ನು ವೈಜ್ಞಾನಿಕವಾಗಿ ಅರ್ಥೈಸಿಕೊಂಡು ಅದನ್ನು ಸಮರ್ಥವಾಗಿ ಎದುರಿಸುವ ಪ್ರಯತ್ನಗಳು ಇಂದಿನ ಜಾಗತಿಕ ಅವಶ್ಯಕತೆಗಳಲ್ಲೊಂದು. ಇದರೊಟ್ಟಿಗೆ ಇತ್ತೀಚಿಗೆ ಹೊಸದಾಗಿ ಬಂದಂತಹ ಕೌಟುಂಬಿಕ ಹಿಂಸೆ ತಡೆ ಕಾಯ್ದೆ, ಈ ಎಲ್ಲಾ ಹಿಂಸೆಗಳಿಗೆ ಕಡಿವಾಣದಂತಿದ್ದು, ಆದರೆ ಕಾಯ್ದೆಯು ಮಹಿಳೆಯರ ಮೇಲಿನ ದೌರ್ಜನ್ಯ, ಹಿಂಸೆಯನ್ನು ತಡೆಯುವಲ್ಲಿ ಎಷ್ಟರಮಟ್ಟಿಗೆ ಯಶಸ್ವಿಯಾಗುತ್ತವೆ ಎಂಬುದನ್ನು ಕಾದು ನೋಡಬೇಕು.

ಈ ಹಿಂದೆ ಪ್ರಸ್ತಾಪಿಸಿದ ವಿವಿಧ ವಿದ್ವಾಂಸರುಗಳು ಮತ್ತು ಕಾಯ್ದೆ ಕಾನೂನುಗಳು ಕೌಟುಂಬಿಕ ಹಿಂಸೆಯ ಸ್ವರೂಪವನ್ನು ಇಟ್ಟುಕೊಂಡು ನಿರ್ವಚಿಸಿದ ಅಂಶಗಳ ಆಧಾರದ ಮೇಲೆ ನಾವು 'ಕೌಟುಂಬಿಕ ಹಿಂಸೆ' ಎನ್ನುವುದನ್ನು ಒಟ್ಟಾರೆಯಾಗಿ ಹೀಗೆ ನಿರ್ವಚಿಸಬಹುದು.

ಕುಟುಂಬದಲ್ಲಿ ಮಹಿಳೆಯ ಮೇಲೆ ಆಕೆಯ ಇಷ್ಟದ ವಿರುದ್ಧವಾದ ಯಾವುದೇ ವರ್ತನೆಯಾದರೂ ಅಂದರೆ ಮಾನಸಿಕ ಮತ್ತು ಶಾರೀರಿಕ ಹಾಗೂ ಭಾವನಾತ್ಮಕವಾಗಿ, ಮೌಖಿಕವಾಗಿ, ಕುಟುಂಬದ ಸದಸ್ಯ ಹಾಗೂ ಆಕೆಯ ಸಂಬಂಧಿಯಿಂದ ಉಂಟಾದ ನೋವನ್ನು 'ಕೌಟುಂಬಿಕ ಹಿಂಸೆ' ಎಂದು ಹೇಳಬಹುದು.

ಕೌಟುಂಬಿಕ ಹಿಂಸೆಗೆ ಕಾರಣಗಳು

ಶೇಕಡ ೯೪ರಷ್ಟು ಮಹಿಳೆಯರ ಮೇಲೆ ಕೌಟುಂಬಿಕ ದೌರ್ಜನ್ಯ ನಡೆಯುತ್ತಿರುವ ಈಜಿಪ್ಟ್‌ನಂತಹ ರಾಷ್ಟ್ರಗಳಿಗೆ ಹೋಲಿಸಿದರೆ ನಮ್ಮ ದೇಶದಲ್ಲಿ ಇಂತಹ ಪ್ರಕರಣಗಳು ಕಡಿಮೆ. ನಿಜ, ಆದರೆ ನಮ್ಮಲ್ಲಿ ಶೇಕಡ ೭೦ರಷ್ಟು ಮಹಿಳೆಯರು ಅಂತಸ್ತು ಭೇದವಿಲ್ಲದೆ ಕೌಟುಂಬಿಕ ದೌರ್ಜನ್ಯಕ್ಕೆ ಒಳಗಾಗುತ್ತಿರುವುದು ಮಾತ್ರ ವಿಪರ್ಯಾಸ. ಇದರಲ್ಲಿ ಶೇಕಡ ೪೦ರಷ್ಟು ಮಹಿಳೆಯರು ಕೇವಲ ಬಡತನ, ಅನಕ್ಷರತೆಗಳು ಮಾತ್ರ ಇದಕ್ಕೆ ಕಾರಣವಾಗಿರದೆ, ಶತಶತಮಾನಗಳಿಂದಲೂ ನಮ್ಮ ಸಮಾಜದ ಸಾಗುವಳಿಯಲ್ಲೇ ಪುರುಷ ಪ್ರಧಾನ ಕುಟುಂಬವನ್ನು ಶ್ರೇಷ್ಠವೆಂದು ಬಿಂಬಿಸಿರುವುದು ಕೌಟುಂಬಿಕ ದೌರ್ಜನ್ಯಕ್ಕೆ ಮುಖ್ಯ ಕಾರಣವಾಗಿದೆ. ವಿಶ್ವಸಂಸ್ಥೆಯ ಜನಸಂಖ್ಯಾನಿಧಿಯು ದಕ್ಷಿಣ ಏಷ್ಯಾ ಪ್ರದೇಶದಲ್ಲಿ ನಡೆಸಿದ ಸಮೀಕ್ಷೆಯೊಂದರ ಪ್ರಕಾರ ಇಲ್ಲಿನ ಮಹಿಳೆಯರು ಗಂಡಂದಿರು ತಮ್ಮನ್ನು ಥಳಿಸುವುದು ಮತ್ತು ಇತರ ದೌರ್ಜನ್ಯಗಳಿಗೆ ಒಳಪಡಿಸುವುದನ್ನು ಸ್ವಾಭಾವಿಕವೆಂದು ಒಪ್ಪಿಕೊಂಡಿದ್ದಾರೆ. ಹಾಗೆಯೇ ಗಂಡನು ಹೆಂಡತಿಯನ್ನು ಹೊಡೆಯುವುದು ಅವನ ಹಕ್ಕು ಎಂಬುದಾಗಿ ತಿಳಿದುಕೊಂಡಿದ್ದಾರೆ.

"ಗಂಡು ತನ್ನನ್ನು ಮಹಿಳೆಯರಿಗಿಂತ ಉತ್ತಮನು ಎಂದು ಸಾಂಪ್ರದಾಯಿಕವಾಗಿ ನಂಬಿಕೊಂಡು ಬಂದಿರುವುದು ಮತ್ತು ಮಹಿಳೆಯರು ತಾವು ಪುರುಷರಿಗಿಂತ ಕೀಳು ಎಂಬ ಕೀಳರಿಮೆಯನ್ನು ಹೊಂದಿರುವುದು ಸಹ ಕೌಟುಂಬಿಕ ದೌರ್ಜನ್ಯಕ್ಕೆ ಮುಖ್ಯ ಕಾರಣಗಳಲ್ಲಿ ಒಂದಾಗಿದೆ. ಕಿರುಕುಳ ದೌರ್ಜನ್ಯಗಳು ಕುಟುಂಬದ ಆಂತರಿಕ ವಿಚಾರವಾಗಿದ್ದು, ಅವುಗಳಿಗಾಗಿ ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸುವುದು ಮತ್ತು ನ್ಯಾಯಾಲಯದ ಮೊರೆ ಹೋಗುವುದರಿಂದ ತಮ್ಮ ಘನತೆಗೆ ಸಾಮಾಜಿಕ ಪ್ರತಿಷ್ಠೆಗೆ ಕುಂದುಂಟಾಗುವುದೆಂಬ ಭಾವನೆ ನಮ್ಮಲ್ಲಿ ಆಳವಾಗಿ ಬೇರು ಬಿಟ್ಟಿದೆ."[೧೦] ಇವುಗಳ ಜೊತೆಗೆ, ಹೆಂಡತಿ ಬಗೆಗಿನ ಸಂಶಯ, ಆರ್ಥಿಕವಾಗಿ ಹಿಂದುಳಿದಿರುವಿಕೆ, ಗಂಡು ಮಕ್ಕಳಿಲ್ಲದಿರುವುದು, ಬಂಜೆತನ, ಮದ್ಯಪಾನ, ವರದಕ್ಷಿಣೆ ಬಾಕಿ ಮೊತ್ತವನ್ನು ನೀಡಿಲ್ಲವೆಂಬ ಕಾರಣಕ್ಕಾಗಿ, ಹೀಗೆ ಹಲವಾರು ರೀತಿಯ ಕಾರಣಗಳಿಂದ ಕೌಟುಂಬಿಕ ಹಿಂಸೆಗಳು ಕುಟುಂಬದಲ್ಲಿ ನಡೆಯುವುದನ್ನು ನಾವು ಕಾಣಬಹುದು.

ಕೌಟುಂಬಿಕ ಹಿಂಸೆಯಿಂದಾಗುವ ಪರಿಣಾಮಗಳು

ಕೌಟುಂಬಿಕ ಹಿಂಸೆಯಿಂದಾಗಿ ಮಹಿಳೆಯು ಕುಟುಂಬದಲ್ಲಿ ನೆಮ್ಮದಿಯಿಂದ ಜೀವನ ಸಾಗಿಸುವುದು ಕನಸಿನ ಮಾತಾಗಿದೆ. ಇದರಿಂದ ಮಹಿಳೆಗೆ ತುಂಬಾ ತೊಂದರೆ ಉಂಟಾಗಿ ಇದು ಒಂದು ಸಾಮಾಜಿಕ ಸಮಸ್ಯೆಯಾಗಿ ಪರಿಣಮಿಸಿದೆ. ಈ ಕೆಳಗಿನ ಅಂಶಗಳು ಕೌಟುಂಬಿಕ ಕಲಹ, ಹಿಂಸೆಯಿಂದ ಉಂಟಾಗುವ ಪರಿಣಾಮಗಳಾಗಿವೆ.

- "ದೈಹಿಕ ಹಾಗೂ ಮಾನಸಿಕ ತೊಂದರೆಗಳು.
- ತಾತ್ಕಾಲಿಕ ಹಾಗೂ ಶಾಶ್ವತ ವೈಕಲ್ಯ ಅಂಗಹೀನತೆ ಅಥವಾ ಸಾವು.
- ಮಹಿಳೆಯ ಆತ್ಮಗೌರವಕ್ಕೆ ತಗಲುವ ಧಕ್ಕೆ.
- ಮಹಿಳೆಯು ಸಾಮಾನ್ಯ ಆರೋಗ್ಯಮಟ್ಟದ ಕುಸಿತ ಹಾಗೂ 'ಮಾನಸಿಕ ಅಸ್ವಸ್ಥತೆ ದೈಹಿಕ ಶೋಷಣೆಯ ಪರಿಣಾಮವಾಗಿಯೇ ಸುಮಾರು ೭೦ರಷ್ಟು ಮಹಿಳೆಯರು ಮಾನಸಿಕ ಅಸ್ವಸ್ಥ್ಯಕ್ಕೆ ಗುರಿಯಾಗಿರುತ್ತಾರೆ.'"
- ವ್ಯಕ್ತಿತ್ವದ ವಿಕಾಸಕ್ಕೆ ಇದು ಮಾರಕವಾಗುತ್ತದೆ.
- ಅನಗತ್ಯ ಅನಿಯಂತ್ರಿತ, ಯೋಜನಾ ರಹಿತ ಗರ್ಭಧಾರಣೆ ಹೆಚ್ಚಿದ ಗರ್ಭಪಾತ ಹಾಗೂ ಗರ್ಭಸ್ರಾವ.
- ಬಾಲ್ಯದಲ್ಲಾಗುವ ದೌರ್ಜನ್ಯದಿಂದ ಮಹಿಳೆಯ ಆರೋಗ್ಯ ಕುಂಠಿತವಾಗುತ್ತದೆ.
- ಹಿಂಸೆಯಿಂದಾಗಿ ಸ್ತ್ರೀಯರ ಚಟುವಟಿಕೆ ಸಾಮರ್ಥ್ಯ ಮುರುಟಿಡಿ ಹೋಗುತ್ತದೆ.
- ಸಮಾಜಕ್ಕೆ ಒದಗುವ ಭೌತಿಕ ನಷ್ಟ.
- ವಿಚ್ಛೇದನ, ಕೌಟುಂಬಿಕ ಅಭದ್ರತೆ
- ಆತ್ಮಹತ್ಯೆಗಳು.

ಇವುಗಳಲ್ಲದೆ ಸ್ತ್ರೀಯರು ಅಭಿವ್ಯಕ್ತಪಡಿಸದೆ ಕಣ್ಣಿಗೆ ಗೋಚರಿಸದೇ ಇರುವ ಪರಿಣಾಮಗಳು ಅನೇಕ ಇವೆ. ಇದರಿಂದ ಸ್ತ್ರೀಯರ ಜನಸಂಖ್ಯೆ ಇಳಿಮುಖವಾಗಿ ಸಾಮಾಜಿಕ ಅಸಮತೋಲನಕ್ಕೆ ಕಾರಣವಾಗುತ್ತದೆ.

ಟಿಪ್ಪಣಿಗಳು

೧. Vivekananda Institute for Leadership Development Training, Research Advocacy & Consultancy Wing of Swami Vivekananda Youth Movement, 2005, **Gender and Law,** Page No. 24.

೨. Mininstry of Law and Justice Legislative Department, 2005, **The Gazette of India, Chapater II,** Page No. 3.

೩. S.C. Hiremath, 2007, **The Protection of Women from Domestic Violence Rules 2005 & 2006,** page No. 4 & 5.

೪. ಡಾ. ಎಂ. ಉಷಾ, ೨೦೦೪, **ಮಹಿಳಾ ಚಳುವಳಿಗಳು ಮತ್ತು ಮಹಿಳಾ ವಿಷಯಗಳು,** ಪು. ೧೪೮.

೫. ಅದೇ.... ಪು. ೧೪೯.

೬. ಡಾ. ಪ್ರೀತಿ ಶುಭಚಂದ್ರ, ೨೦೦೩, **ಮಹಿಳಾ ಅಧ್ಯಯನ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳುವಳಿಗಳು,** ಪು. ೨೯೨.

೭. ಅದೇ.... ಪು. ೨೯೩.

೮. ಬಿ. ಶೇಷಾದ್ರಿ, ೨೦೦೦, **ಮಹಿಳಾ ವಿವಾಹ ಮತ್ತು ಕುಟುಂಬ,** ಮಹಿಳಾ ಅಧ್ಯಯನ, ದಕ್ಷಿಣಾಯನ ಸಂಚಿಕೆ, ಪು. ೬೪.

೯. ಡಾ. ಸಮತಾ ಬಿ. ದೇಶಮಾನೆ, ೨೦೦೩, **ಸಮಾಜಶಾಸ್ತ್ರ ಮತ್ತು ಮಹಿಳೆ,** ಪು. ೯೬.

೧೦. ಡಾ. ಗೀತಾ ಕೃಷ್ಣಮೂರ್ತಿ, ೨೩ ನವೆಂಬರ್ ೨೦೦೬, **ಕಾನೂನು ಕಾಯಿದೆ,** ತರಂಗ, ಪು. ೨೫.

೧೧. ವಿಜಯಕುಮಾರಿ ಬಾಗೂರು, ೧೬ ಜನವರಿ ೨೦೦೭, ಸ್ಪರ್ಧಾ ಚೈತ್ರ, **ಕೌಟುಂಬಿಕ ಹಿಂಸೆ ವಿರೋಧ ಕಾಯಿದೆ,** ಪು. ೧೬.

• • •

ಅಧ್ಯಾಯ ೩

ಜನಪದ ಸಾಹಿತ್ಯದಲ್ಲಿ ಹಿಂಸೆಯ ಸ್ವರೂಪ

ಅಧ್ಯಾಯ ೩

ಜನಪದ ಸಾಹಿತ್ಯದಲ್ಲಿ ಹಿಂಸೆಯ ಸ್ವರೂಪ

ಜನಪದ ಸಾಹಿತ್ಯದಲ್ಲಿ ಮಹಿಳೆಯ ಮೇಲೆ ನಡೆಯುವ ಕೌಟುಂಬಿಕ ಹಿಂಸೆಯನ್ನು ಮತ್ತು ಹಿಂಸೆಗೆ ಒಳಗಾದ ಮಹಿಳೆಯನ್ನು ದೈವೀಕರಿಸಿ ದೈವತ್ವಕ್ಕೇರಿಸುವುದರ ಮೂಲಕ ಅವುಗಳು ಹಿಂಸೆಗಳಲ್ಲ ಎನ್ನುವಂತೆ ಚಿತ್ರಿಸಲಾಗಿದೆ.

ನಮ್ಮ ಸಮಾಜದಲ್ಲಿ ಕುಟುಂಬವು ಮೊದಲು ಮಾತೃಪ್ರಧಾನ ಸಂಸ್ಥೆಯಾಗಿದ್ದು, ಆಮೇಲೆ ಅದು ಚರಿತ್ರೆಯ ಕಾಲಘಟ್ಟದಲ್ಲಿ ಪಿತೃಪ್ರಧಾನ ಸಂಸ್ಥೆಯಾಗಿ ರೂಪುಗೊಂಡಿತು. ನಮ್ಮ ಪರಂಪರೆಯಲ್ಲಿ ಹೆಣ್ಣು ಶಕ್ತಿದೇವತೆಯ ಪ್ರತೀಕಳಾದರೂ ಆಕೆ ಅಬಲೆಯಾಗಿ ಪರಿಗಣಿಸಲ್ಪಟ್ಟಿದ್ದಾಳೆ. ಮಹಿಳೆಯ ಸಾಮಾಜಿಕ ಅಂತಸ್ತು, ಸ್ಥಾನಮಾನ, ನಡವಳಿಕೆಗಳ ಬಗ್ಗೆ ಕಟ್ಟುಕಟ್ಟಳೆಗಳನ್ನು ರೂಢಿಸುವ ಹಂತದಲ್ಲಿ ಪುರುಷರೇ ಇರುವುದರಿಂದ ಪುರುಷ ಪ್ರಭುತ್ವವೇ ಮೇಲುಗೈಯಾಗಿದೆ. ಆದ್ದರಿಂದ ಮಹಿಳೆಯ ಕೌಟುಂಬಿಕ ಸಂಬಂಧಗಳ ಸುತ್ತ ಹೆಣೆದುಕೊಂಡಿರುವ ನಂಬಿಕೆಗಳು ಗಂಡ-ಹೆಂಡತಿ, ಅತ್ತೆ-ಸೊಸೆ ಬಾಂಧವ್ಯದ ಸ್ವರೂಪವನ್ನು ತಿಳಿಸುತ್ತದೆ. ಆದರೆ ಕೌಟುಂಬಿಕ ವ್ಯವಸ್ಥೆಯಲ್ಲಿ ಸೊಸೆಯ ಸ್ಥಾನಮಾನಗಳನ್ನು ಗಂಡಹೆಂಡತಿಯ ಅಸಮಾನ ನೆಲೆಯ ಸಂಬಂಧದ ಸ್ವರೂಪವನ್ನು ಇಂಥ ನಂಬಿಕೆಗಳು ಪೋಷಿಸುತ್ತವೆ ಎಂದು ಹೇಳಬಹುದು. ಗಂಡನನ್ನು ದೇವರೆಂದು ನಂಬಿಸುವ ಸಾಂಸ್ಕೃತಿಕ ಪರಿಸರದಲ್ಲಿ ಹೆಂಡತಿಗೆ ಪ್ರತ್ಯೇಕ ಸ್ವತಂತ್ರ ಅಸ್ತಿತ್ವದ ಕಲ್ಪನೆಯನ್ನು ಅಸಾಧ್ಯವಾಗಿಸಿದೆ. ತನ್ನ ಸುಖ, ದುಃಖ, ವ್ಯಕ್ತಿತ್ವ ಶ್ರೇಯಸ್ಸೆಲ್ಲವನ್ನು ಗಂಡನ ಬದುಕಿನೊಂದಿಗೆ ಸಮೀಕರಿಸಿಕೊಂಡು ಸತೀತ್ವ ಸಾಧನೆ ಮಾಡಲು ಒತ್ತಾಯಿಸುವ ನಂಬಿಕೆಗಳು ಆಕೆಯ ಅಧೀನ ನೆಲೆಯನ್ನು ಆದರ್ಶದ ಹೆಸರಿನಲ್ಲಿ ಎತ್ತಿ ಹಿಡಿದಿದೆ. ಗಂಡನ ಊಟದ ನಂತರ ಹೆಣ್ಣುಮಕ್ಕಳು ಊಟ ಮಾಡಬೇಕು. 'ಗಂಡನನ್ನು ಏಕ ವಚನದಲ್ಲಿ ಹೆಸರು ಹಿಡಿದು ಸಂಬೋಧಿಸಿದರೆ ಗಂಡನ ಆಯಸ್ಸು ಕಡಿಮೆಯಾಗುತ್ತದೆ'. ವ್ರತ, ಉಪವಾಸ, ಪೂಜೆ, ಪಾವಿತ್ರ್ಯಗಳಿಂದ ಗಂಡನಿಗೆ ದೀರ್ಘಾಯುಷ್ಯ ಪ್ರಾಪ್ತಿ, ಮುತ್ತೈದೆ ಸಾವಿನಿಂದ ಸ್ವರ್ಗ ಪ್ರಾಪ್ತಿ, ಸಹಗಮನ ಪದ್ಧತಿಯಿಂದ ಗಂಡನಿಗೆ ಸ್ವರ್ಗ ಪ್ರಾಪ್ತಿ ಇತ್ಯಾದಿ ನಂಬಿಕೆಗಳು ವಿಧಿಸುವ ನೀತಿ ನಿಯಮಗಳು ಸ್ತ್ರೀಯರ ಬದುಕನ್ನು ಕಷ್ಟಕರವಾಗಿಸಿವೆ.

ಮದುವೆಯ ಮೊದಲ ವರ್ಷದ ಆಷಾಢದಲ್ಲಿ ಅತ್ತೆ ಸೊಸೆ ಕೂಡಿ ಇರಬಾರದೆನ್ನುವುದು ಒಂದು ನಂಬಿಕೆ. ಇಂದಿಗೂ ಕೂಡ ಉತ್ತರ ಕರ್ನಾಟಕದಲ್ಲಿದೆ. ಸಹಗಮನ, ಸ್ತ್ರೀ ಬಲಿ, ಶಿಶು ಬಲಿ, ದೇವದಾಸಿ, ಬೆತ್ತಲೆ ಸೇವೆ, ಕೋಟೆ-ಕೊತ್ತಲು, ಕೆರೆಗೆ ಹಾರ ಮುಂತಾದ ಸಂಪ್ರದಾಯಗಳ ಹಿಂದಿರುವ ಅಮಾನುಷ ನಂಬಿಕೆಗಳು ಮಹಿಳೆಯ ಬದುಕನ್ನು ಅಸಹನೀಯವೆನಿಸುವಷ್ಟು ವಿರೂಪಗೊಳಿಸಿವೆ.

ಕುಟುಂಬದಲ್ಲಿನ ಮಹಿಳೆಯ ಬದುಕಿನ ವಿವಿಧ ಸ್ತರಗಳಾದ ತಾಯಿ-ಮಲತಾಯಿ, ಹೆಂಡತಿ-ಸವತಿ, ಅತ್ತೆ-ಸೊಸೆ, ಅತ್ತಿಗೆ-ನಾದಿನಿ ಮುಂತಾದ ರೂಪಗಳಲ್ಲಿ ಆಕೆ ತನ್ನನ್ನು ಹೇಗೆ ಬಿಚ್ಚಿಕೊಳ್ಳುತ್ತಾಳೆಂಬುದು ಜನಪದ ಸಾಹಿತ್ಯದಲ್ಲಿ ಗಂಡನ ಪ್ರೀತಿಗಾಗಿ ಹಾತೊರೆಯುವ, ತಾಯ್ತನಕ್ಕೆ ತುಡಿಯುವ, ಬಂಜೆತನಕ್ಕೆ ಕೊರಗುವ, ಹೆತ್ತಮ್ಮನಿಗಾಗಿ ಹಂಬಲಿಸುವ ಬಡತನಕ್ಕಾಗಿ ಮರುಗುವ ಇತ್ಯಾದಿಗಳ ಅಭಿವ್ಯಕ್ತಿಯು, ದುಡಿತದ ಸಂದರ್ಭದಲ್ಲಿ ದಣಿವನ್ನು ನೀಗಿಸಿಕೊಳ್ಳಲು ತನ್ನ ಹೊಟ್ಟೆಯೊಳಗಿನ ಕಡು ದುಃಖವೇ ಹಾಡಾಗಿ ಅವರ ಆಳದಲ್ಲಿ ನೋವು, ಹಿಂಸೆ, ನಿರಾಶೆ, ದುಃಖ ಹೆಪ್ಪುಗಟ್ಟಿ ನಿಂತಿರುತ್ತದೆ. "ಪುರುಷ ಪ್ರಧಾನವಾದ ಈ ಸಮಾಜದಲ್ಲಿ ಮೇಲು-ಕೀಳು ಎಂಬ ವರ್ಗಭೇದವಿಲ್ಲದೆ ಹಿಂಸೆಯನ್ನು ಅನುಭವಿಸಿದ್ದಾಳೆ. ಬಂಜೆಯಾದಾಗ ಅಣ್ಣ-ತಮ್ಮ, ತಂದೆ-ತಾಯಿಯಿಂದ ದೂರವಾದಾಗ ಅತ್ತಿಗೆ, ನಾದಿನಿ, ಅತ್ತೆ, ಮಾವರ ದಬ್ಬಾಳಿಕೆಗೆ ಸಿಕ್ಕಾಗ, ಗಂಡನಿಂದ ತಿರಸ್ಕರಿಸಲ್ಪಟ್ಟಾಗ, ಅನಿಷ್ಟ ಪದ್ಧತಿಗೆ ಬಲಿಯಾದಾಗ, ಅವಳು ಅನುಭವಿಸಿದ ನೋವು ಬಿಡಿಗೀತೆಗಳಾಗಿ ಹರಿದು ಬಂದಿವೆ."[೧] ಈ ಎಲ್ಲಾ ನೋವು ಸಂಕಟ ಹಿಂಸೆಗಳ ಸ್ವರೂಪವನ್ನು ಜಾನಪದ ಗೀತೆಗಳಲ್ಲಿ, ಕಥನಗೀತೆಗಳಲ್ಲಿ, ಒಗಟುಗಳಲ್ಲಿ, ಒಡಪುಗಳಲ್ಲಿ, ಗಾದೆಗಳಲ್ಲಿ ಕಂಡುಕೊಳ್ಳಲಾಗಿದೆ. ಉದಾ:- 'ಗಂಜಿ ಕುಡಿದರೂ ಗಂಡನ ಮನೆಲೇಸು' ಎಂಬಂತಹ ಉಕ್ತಿಗಳು ಇದರ ಪರಿಣಾಮವಾಗಿ ಹುಟ್ಟಿಕೊಂಡಿವೆ.

'ಸ್ತ್ರೀಯರನ್ನು, ಗೋವುಗಳನ್ನು, ಬ್ರಾಹ್ಮಣರನ್ನು ಕೊಲ್ಲಬಾರದು' ಎಂಬ ಅನಿಷ್ಟ ಸಂಸ್ಕೃತಿಯ ತಂತ್ರಗಾರಿಕೆಯನ್ನು ಈ ಯೋಜಿತ ಸಂಸ್ಕೃತಿಯು ತನ್ನ ಒಳಗೆ ಒಂದು ಸುರಕ್ಷಿತ ಕೋಟೆಯನ್ನು ಕಟ್ಟಿ ಅಪೇಕ್ಷಿತರನ್ನು ಸದಾ ದೂರ ಇಡುತ್ತಲೇ ಬರುತ್ತದೆ. ಅಂದರೆ ಇಲ್ಲಿ ನಾವು ಒಂದು ತಾರತಮ್ಯ ಇರುವುದನ್ನು ಗ್ರಹಿಸಬಹುದಾಗಿದೆ. "ವಿಶಿಷ್ಟತೆಗೆ ಹೊರತಾದ ಎಲ್ಲ ಬಗೆಯ ತಾರತಮ್ಯವನ್ನು ನಾನು ಹಿಂಸೆಯೆಂದು ಕರೆಯುತ್ತೇನೆ."[೨] ಹೀಗೆ ಎಲ್ಲ ರೀತಿಯ ತಾರತಮ್ಯವನ್ನು ಹಿಂಸೆಯೆಂದು ಕರೆಯಬೇಕಾದ ಅನಿವಾರ್ಯತೆಯಲ್ಲಿ ಹೆಣ್ಣು ಇಂದು ಬದುಕುತ್ತಿದ್ದಾಳೆ.) ಹಿಂಸೆಯನ್ನು ಮೂರು ಮುಖ್ಯ ಭಾಗಗಳಾಗಿ ವಿಭಾಗಿಸಬಹುದಾಗಿದೆ. ಅವುಗಳನ್ನು ರಾಮಚಂದ್ರೇಗೌಡರು "ಸೃಜನಾತ್ಮಕ ಹಿಂಸೆ (Creative Valene), ಸ್ಥಾಪಿತ ಹಿಂಸೆ (Setteled Valene) ಮತ್ತು ಯೋಜಿತ ಹಿಂಸೆ (Polotted valene) ಎಂದು ಕರೆದಿದ್ದಾರೆ. ಇವುಗಳ ವಿವರಣೆಯನ್ನು ಹೀಗೆ ಕೊಡುತ್ತಾರೆ. ಕಾಮಪ್ರೇಮದ ಹಿಂಸೆಗಳು ಸೃಜನಾತ್ಮಕ ಹಿಂಸೆಗಳು, ಧರ್ಮ, ದೇವರು, ಮೋಕ್ಷ ಇಂಥವು ಸ್ಥಾಪಿತ ಹಿಂಸೆಗಳು. ಜಾತಿ, ವರ್ಗ, ವರ್ಣ ಇಂಥವು ಯೋಜಿತ ಹಿಂಸೆಗಳು."[೩] ಸ್ಥಾಪಿತ ಮತ್ತು ಯೋಜಿತ ಹಿಂಸೆಗಳು ಒಂದಕ್ಕೊಂದು ಪ್ರೇರಕ ಮತ್ತು ಪೂರಕ ಎಂಬಂತೆ ಇವೆ. ಈ ಯೋಜಿತ ಹಿಂಸೆಯನ್ನು

ಸ್ತ್ರೀ ಶೋಷಣೆಯ ಹಿನ್ನೆಲೆಯಲ್ಲಿಟ್ಟು ನೋಡಿದಾಗ ಇದು ಇಡಿಯಾಗಿ ಒಂದು ಸಂಚಿನ ಫಲವೇ ಆಗಿರುತ್ತದೆ ಎನ್ನುವುದು ಮೇಲು ನೋಟಕ್ಕೆ ಗೊತ್ತಾಗುತ್ತದೆ. ಹೆಣ್ಣಿಗೆ ಕೊಡಮಾಡಲಾಗಿರುವ ಬಿರುದುಗಳು ಸತಿ, ಮಹಾಸತಿ, ಪತಿವ್ರತೆ ಇತ್ಯಾದಿಗಳಲ್ಲಿ ಈ ಸಂಚಿನ ಸೃಷ್ಟಿಗಳೇ ಆಗಿವೆ.

ಭಾರತೀಯ ಸಮಾಜದಲ್ಲಿ ಈ ಹಿಂಸೆಯ ಸ್ವರೂಪವು ನಯಗಾರಿಕೆ, ಸಭ್ಯ ಎನ್ನುವಷ್ಟರ ಮಟ್ಟಿಗೆ ತನ್ನ ಕ್ರೂರತೆಯನ್ನು ಮರೆಮಾಚುತ್ತದೆ. ಆಳುವ ವರ್ಗಗಳು ಸದಾ ಹಿಂಸೆ ಸೃಷ್ಟಿಯ ಕೇಂದ್ರಗಳಾಗಿರುತ್ತವೆ. ಈ ಆಳುವ ವರ್ಗಗಳೆಂದು ಕೇವಲ ನಾವು ರಾಜಕೀಯ ಹಿನ್ನೆಲೆಯಲ್ಲಿ ನೋಡದೆ ಅದನ್ನು ಕೌಟುಂಬಿಕ ಹಿನ್ನೆಲೆಯಿಂದಲೂ ನೋಡಬೇಕಿದೆ. ಕೌಟುಂಬಿಕ ಹಿನ್ನೆಲೆಯಿಂದ ನೋಡಿದಾಗ, ಆಳುವ ವರ್ಗ ಇಲ್ಲಿ ಪುರುಷ ಪ್ರಭುತ್ವ ಎಂದು ಬದಲಾಗುತ್ತದೆ. ಈ ಹಿಂಸಾ ಪ್ರವೃತ್ತಿ ಅಥವಾ ಹಿಂಸೆಯ ಸ್ವರೂಪ ಶಿಷ್ಟ ಕಾವ್ಯ ಅಥವಾ ಸಾಹಿತ್ಯದಲ್ಲಿ ದಾಖಲಾದಂತೆ ಜನಪದ ಸಾಹಿತ್ಯದಲ್ಲಿಯೂ ದಾಖಲಾಗಿದೆ. ಜನಪದ ಸಾಹಿತ್ಯ ಜೀವನಕ್ಕೆ ಹತ್ತಿರವಾಗಿರುವುದರಿಂದ ಶಿಷ್ಟ ಕಾವ್ಯದಲ್ಲಿ ದಾಖಲಾದುದಕ್ಕಿಂತ ಭಿನ್ನ ಸ್ವರೂಪದಲ್ಲಿ ದಾಖಲಾಗಿರುವುದನ್ನು ಕಾಣಬಹುದು. ಹೆಣ್ಣಿಗೆ ಜನಪದ ಸಾಹಿತ್ಯ ಒಂದು ರೀತಿಯಲ್ಲಿ ಬಹುದೊಡ್ಡ ಕ್ಯಾನವಾಸ್ (ಭಿತ್ತಿ)ನ್ನು ಸೃಷ್ಟಿ ಮಾಡಿದೆ. ಅದಕ್ಕಾಗಿಯೇ ಇರಬೇಕು. ಜನಪದ ಸಾಹಿತ್ಯದ ಎಲ್ಲ ಪ್ರಕಾರ ಗಳಲ್ಲೂ ಹಿಂಸೆಯ ದಾಖಲೀಕರಣವನ್ನು ನಾವು ಕಾಣುತ್ತೇವೆ. ಇದು ಶಿಷ್ಟ ಸಾಹಿತ್ಯಕ್ಕಿಂತ ಭಿನ್ನವಾಗಿ ದಾಖಲೆಗೊಂಡಿದೆ. "ಜನಪದ ಸಾಹಿತ್ಯದಲ್ಲಿ ವರ್ಗಾತ್ಮಕ ಹಿಂಸಾಕೇಂದ್ರ, ಜಾತ್ಯಾತ್ಮಕ ಹಿಂಸಾಕೇಂದ್ರ, ಸ್ತ್ರೀ ಸಂಬಂಧಿ ಹಿಂಸಾಕೇಂದ್ರ ಎಂಬ ಮೂರು ಪ್ರಧಾನ ಹಿಂಸಾಕೇಂದ್ರಗಳಿವೆ."[*] ಈ ಮೂರು ಕೇಂದ್ರಗಳು ಸ್ವನಿರ್ಮಿತವಲ್ಲ. ಅವು ಸಮಾಜದ ನಿಯಂತ್ರಣಕ್ಕೆ ಒಳಪಟ್ಟಿರುವಂತವೇ ಆಗಿರುತ್ತವೆ. ಕಥೆ, ಗಾದೆ, ಒಗಟು, ಗೀತೆ ಹೀಗೆ ಜನಪದ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಹಿಂಸೆ ದಾಖಲಾಗಿರುವುದನ್ನು ಕಾಣಬಹುದು. ಹಲವಾರು ಉದಾಹರಣೆಗಳ ಮುಖಾಂತರ ನೋಡುವುದಾದರೆ ಮೊದಲಿಗೆ ಒಡಪುಗಳಲ್ಲಿನ ಹಿಂಸೆಯ ಸ್ವರೂಪವನ್ನು ನೋಡುವುದಾದರೆ, ಹೆಂಡತಿಯಾದವಳು ದೈಹಿಕವಾಗಿ ಮಾನಸಿಕವಾಗಿ ಗಂಡನಿಗೆ ಮೀಸಲಾಗಿರಬೇಕು ಮತ್ತೆ ಆತ ಹೇಗೆ ಮಾತನಾಡಿದರೂ, ಏನೇ ಮಾಡಿದರೂ ಹೆಂಡತಿಯಾದವಳು ಸಹಿಸಿಕೊಂಡು ಹೋಗಬೇಕು ಎನ್ನುವಂತಹ ಅಂಶ ಈ ಕೆಳಗಿನ ಒಡಪುಗಳಲ್ಲಿ ನಾವು ಕಾಣಬಹುದಾಗಿದೆ.

"ಹಗ್ಗದಲೆ ಬಡಿದರ
ಮಗ್ಗಲಾಗ ಬರುತ್ತಾಳೆ."

"ಗಣಕೋಲಿಲೆ ಬಡಿದರ
ಕುಣಕೋತ ಬರುತಾಳೆ."

"ರವದೀಲೆ ಬಡಿದರ
ರೊಂಯಗುಡುತ ಬರುತಾಳ."

"ಪಟ್ಕಿನ್ ಬಡಿದರ
ಸಟ್ಕಿನ ಬರುತಾಳ."

"ಸಿಟ್ಯಾಗಿ ಬಂದರ ಬಡಿಲಾಕ
ಸಟ್ಕಿನ ಬಂದ ಕಾಲಹಿಡಿತಾಳ."

'ಗಲ್ಲ ಕಡಿದರೆ ಗುಲ್ಲ ಮಾಡತಾಳ
ಸೊನ್ನಿ ಮಾಡಿದರೆ ಸುಮ್ಮನೆ ಆಗುತಾಳ."

ಈ ಮೇಲಿನ ಎಲ್ಲ ಸಾಲುಗಳನ್ನು ನೋಡಿದಾಗ ಹೆಣ್ಣನ್ನು ಗಂಡಿನ ಅಡಿಯಾಳಾಗಿ ಮತ್ತು ಗಂಡನು ಹೆಂಡತಿಗೆ ಯಾವ ರೀತಿಯಲ್ಲಿ ಬಡಿದು ಹಿಂಸೆ ಕೊಟ್ಟಾಗಲೂ ಆಕೆ ಆತನ ಕಾಲು ಹಿಡಿದು ಜೀವನ ಮಾಡಬೇಕು ಎಂದು ಹೆಂಡತಿಯ ಮೇಲಿನ ಬಡಿತ ಹೊಡೆತದ ಹಿಂಸೆಯನ್ನು ಹಿಂಸೆಯಲ್ಲ ಎನ್ನುವಂತೆ ಚಿತ್ರಿಸಲಾಗಿದೆ.

ಸಾಮಾನ್ಯವಾಗಿ ಕೌಟುಂಬಿಕ ಚೌಕಟ್ಟಿನೊಳಗಡೆಯೇ ಮಹಿಳೆಯ ಮೇಲೆ ದೌರ್ಜನ್ಯ ನಡೆಯುತ್ತಿರುತ್ತದೆ. ಕುಟುಂಬವನ್ನು ಖಾಸಗಿಯಾಗಿ ಗುರುತಿಸಿದ್ದರಿಂದ ಇದರೊಳಗಡೆ ಮಹಿಳೆ ಅನುಭವಿಸುವ ನೋವು ಖಾಸಗಿ ಎಂದೇ ಪರಿಗಣಿಸಲ್ಪಡುತ್ತದೆ. ಖಾಸಗಿ ಸಂಗತಿಗಳನ್ನು ಬಹಿರಂಗಗೊಳಿಸಬಾರದೆಂಬ ಸಾಮಾಜಿಕ ನಿಯಮ ಭಾರತದಲ್ಲಿದೆ. ಹೀಗಾಗಿ ಬಹಳಷ್ಟು ಸಂದರ್ಭಗಳಲ್ಲಿ ಮಹಿಳೆ ತನಗಾದ ನೋವು, ಹಿಂಸೆಯನ್ನು ಅಭಿವ್ಯಕ್ತಗೊಳಿಸುವುದಿಲ್ಲ. ಅವುಗಳನ್ನು ಅದುಮಿಡುತ್ತಾಳೆ. ಗಂಡನಿಂದ ದೈಹಿಕ ಮತ್ತು ಮಾನಸಿಕ ಹಲ್ಲೆಗೊಳಗಾಗುತ್ತಿರುವ ಎಷ್ಟೋ ಮಹಿಳೆಯರಿಗೆ ತಾವು ಹಲ್ಲೆಗೊಳಗಾಗುತ್ತಿದ್ದೇವೆ ಎನ್ನುವ ಅರಿವು ಕೂಡ ಇರುವುದಿಲ್ಲ. ಗಂಡನು ಹೆಂಡತಿಯ ಮೇಲೆ ನಡೆಸುವ ಹೊಡೆತ, ಬೈಗಳು, ಆತನ ಹಕ್ಕಾಗಿ, ಪ್ರೀತಿಯ ದ್ಯೋತಕಗಳಾಗಿ ನಿರೂಪಿಸಲ್ಪಡುತ್ತವೆ. "ನಿನ್ನ ಗಂಡ ಬೇರೆ ಹೆಣ್ಣಿನೊಂದಿಗೆ ಸಂಬಂಧ ಬೆಳೆಸಿದ್ದಾನೆ ಎಂದು ಹೇಳಿದರೂ ನಾ ಮುಡಿದ ಮಲ್ಲಿಗೆ ಅವಳೊಂದು ಗಳಿಗೆ ಮುಡಿಯಲಿ"[೬] ಎಂದು ನುಡಿಯುತ್ತಾಳೆ. ಈ ಎಲ್ಲ ಸಂದರ್ಭಗಳಲ್ಲಿ ಹೆಂಡತಿಯಾದವಳು ಅವಮಾನವಾಗುತ್ತಿದ್ದರೂ ಅವಳು ಅದನ್ನು ಅವಮಾನವೆಂದು ಗ್ರಹಿಸದೆ ಸಾಮಾಜಿಕ ಸ್ಥಿತಿಯಲ್ಲಿರುತ್ತಾಳೆ. ಅಂದರೆ ಅವಳ ನೋವುಗಳು ನಿರ್ಲಕ್ಷಿಸಲ್ಪಟ್ಟಿರುತ್ತವೆ. ಹೆಣ್ಣಿಗೆ ಹಿಂಸೆ, ನೋವುಗಳು, ಕರ್ಮ ಫಲಗಳಾಗಿಯೇ ನಿರ್ವಹಿಸಲ್ಪಟ್ಟಿರುವುದರಿಂದ ನೋವುಗಳನ್ನು ಅವಳು ಸ್ವೀಕರಿಸುತ್ತಾಳೆ. ಯಾಕೆಂದರೆ ನೋವುಗಳನ್ನು ತಿರಸ್ಕರಿಸಿದರೂ ಅವುಗಳಿಂದ ಆಕೆಗೆ ಮುಕ್ತಿ ಸಿಗುವುದಿಲ್ಲ. ಅವುಗಳನ್ನು ಮೀರಲು ಪ್ರಯತ್ನಿಸದರೂ ಪರ್ಯಾಯ ಬದುಕು ಇಲ್ಲವಾದ್ದರಿಂದ ಅವಳಲ್ಲಿ ಪ್ರತಿಭಟನಾ

ಅಂಶ ಕಡಿಮೆ. ಮಹಿಳೆಯಾದವಳು ತನ್ನ ನೋವನ್ನು ಹಿಂಸೆಯನ್ನು ಅಭಿವ್ಯಕ್ತಗೊಳಿಸಲಾಗದ ಸಾಮಾಜಿಕ ಒತ್ತಡದಲ್ಲಿದ್ದಾಳೆ. ಅವಳು ತನ್ನ ನೋವನ್ನು ಅದುಮಿಡುವುದರಿಂದ ದೊಡ್ಡವಳಾಗುತ್ತಾಳೆ ಎನ್ನುವ ಸಾಮಾಜಿಕ ನಂಬಿಕೆ ಇದೆ. ಮಹಿಳೆ ತಾನು ಅನುಭವಿಸುವ ಬಹುಪಾಲು ನೋವುಗಳನ್ನು ನೋವುಗಳೆಂದು ಪರಿಭಾವಿಸುವುದೇ ಇಲ್ಲ. ಹೆಣ್ಣು ಅನುಭವಿಸುವ ನೋವುಗಳಲ್ಲಿ ಕೆಲವು ನಿಸರ್ಗ ಸಹಜ ಎಂದು ನಿರ್ವಚಿಸಲ್ಪಟ್ಟಿವೆ.

ಗಾದೆಗಳಲ್ಲಿ

ಕುಟುಂಬವು ಸಮಾಜದ ಒಂದು ಭಾಗವಾಗಿದ್ದು ಕೌಟುಂಬಿಕ ರೀತಿನೀತಿಗಳಿಗೆ ಯೋಗಕ್ಷೇಮಗಳಿಗೆ ಸಂಬಂಧಿಸಿದ ಗಾದೆಗಳು ಅಕ್ಷಯ-ನಿಧಿ, ಪ್ರೇಮ-ವೈರ, ಸುಖ-ದುಃಖ ಕಷ್ಟ-ಕಾರ್ಪಣ್ಯ, ಲೋಕನೀತಿ, ಲೋಕಾನುಭವ ಒಟ್ಟಿನಲ್ಲಿ ಎಲ್ಲಾ ಮುಖಗಳು, ಎಲ್ಲಾ ಸಾಧನಗಳು, ಎಲ್ಲ ರೂಪಗಳು, ಎಲ್ಲ ಹಾಡುಗಳ ಎಲ್ಲ ಆಗುಹೋಗುಗಳು ಅಲ್ಲಿ ಪ್ರತಿಫಲನಗೊಂಡಿವೆ. ಅತ್ತೆ ಮನೆಯಲ್ಲಿ ಮಗಳು ಪಡುವ ಪಾಡನ್ನು ಕಂಡು ತಾಯಿಯೊಬ್ಬಳ ಮನಸ್ಸಿನಲ್ಲಿ "ಹೆಣ್ಣು ಪಡೆಯೋದು ಬೇಡ, ಹೆರವರಿಗೆ ಕೊಡೋದು ಬೇಡ" ಎಂಬ ಗಾದೆ ಬಂದಿದೆ.

'ಬರಿ ಮಗ್ಗುಲಿಗಿಂತ ಬಡವನ ಹುಡುಗಿ ಮೇಲು'

'ಬಡವನ ಹೆಂಡತಿ ಊರಿಗೆಲ್ಲಾ ಸೊಸೆ'

'ತಿರುಕ ಅಪ್ಪ ಅಲ್ಲ, ಸೂಳೆ ಅವ್ವ ಅಲ್ಲ'

'ಗೆದ್ದೆಯ ಹೊಲಹೀನ ಗೊಡ್ಡಿ ಹೆಂಡತಿಹೀನ'[4]

ಇದನ್ನು ಈ ರೀತಿಯಲ್ಲಿ ಸಮೀಕರಿಸಬಹುದು. ಒಡವರ ಆಸ್ತಿಗೆ ಯಾವುದೇ ರೀತಿಯ ಸ್ಥಿರ ಮೌಲ್ಯವಿಲ್ಲದಿರುವುದನ್ನು ಈ ಗಾದೆಗಳು ಮತ್ತೆ ಮತ್ತೆ ನೆನಪಿಸುತ್ತವೆ. ಅಂದರೆ ಇದರರ್ಥ ಯಾರು ಬೇಕಾದರೂ ಅವುಗಳನ್ನು ಬಳಸಿಕೊಳ್ಳಬಹುದು ಎಂಬುದು. ಇವುಗಳು ನಿಯಮಿತವಾಗಿ ಬಳಸಲ್ಪಡುವುದೂ ಇಲ್ಲ, ಕೇವಲ Variants (ಬದಲಿ)ಗಳ ರೂಪದಲ್ಲಿ ಬಳಸಲ್ಪಡುತ್ತವೆ. ಇಲ್ಲಿ ಗಾದೆಗಳಲ್ಲಿ ಸಾಹಿತ್ಯಕ ಧ್ವನಿಗಿಂತ ಸಾಮಾಜಿಕ ಧ್ವನಿ ಮುಖ್ಯವಾಗುತ್ತದೆ. ಒಂದು ಗಾದೆಗೆ ಅನೇಕ ಸಾಮಾಜಿಕ ಸಂದರ್ಭಗಳಿರುತ್ತವೆ.

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಗಾದೆಗಳ ಉತ್ಪಾದಕರು ಪುರುಷರಾಗಿದ್ದು ಪುರುಷ ಅಧಿಕಾರ ಮತ್ತು ಧೋರಣೆಗಳ ಮೌಲ್ಯಗಳು ಪುರುಷರ ಪರವಾಗಿಯೇ ಇರುತ್ತವೆ. "ಎರಡು ಹೆಣ್ಣುಗಳನ್ನು ಪರಸ್ಪರ ವಿರೋಧದ ನೆಲೆಯಲ್ಲಿ ಶತ್ರುಗಳಾಗಿ ನಿರ್ವಚಿಸುವುದು. ಹೀಗೆಯೇ 'ಅತ್ತೆ ಒಡೆದ ಗಡಿಗೆಗೆ ಬೆಲೆಯಿಲ್ಲ' ಎನ್ನುವ ಗಾದೆ ಕುಟುಂಬದೊಳಗಡೆ ಅತ್ತೆಗಿರುವ ಅಧಿಕಾರವನ್ನು ಹೇಳಿದರೆ, ಹೆಣ್ಣೊಬ್ಬಳಿಗೆ ಮಗಳು ಮತ್ತು ಸೊಸೆಯ ಮೇಲಿನ ಸಂಬಂಧಗಳಲ್ಲಿರುವ ಭಿನ್ನ ಬೇಧವನ್ನು ಗಾದೆಗಳು ಸ್ಪುಟವಾಗಿ ತೆರೆದಿಟ್ಟಿವೆ.

"ಸೊಸೆಯಾದರೆ ಜೋಳೋ ಜೋಳು ಮಗಳಾದರೆ ಚುಳು ಚುಳು" ಬೌದ್ಧಿಕ ಶಕ್ತಿಯನ್ನು ಗಂಡನದೆಂದು ಇಡುಗಂಟಾಗಿ ಸ್ಥಾಪಿಸಿಕೊಂಡ ಪುರುಷನಿಷ್ಠ ನಿಲುವು ಹೆಣ್ಣನ್ನು ಬುದ್ಧಿಗೇಡಿ ಅಪಾಯಕಾರಿಯೆಂದೇ ನಿರ್ವಚಿಸಿದೆ. ಅದೇ ರೀತಿಯಾಗಿ 'ಹೆಂಟೆ ಕೂಗಿದರೆ ಮನೆಗೆ ಮಾಟ, ಹೆಣ್ಣು ಸೊಕ್ಕಿದರೆ ಮನೆಗೆ ಮಣ್ಣು'. 'ಈಡು ಇಲ್ಲದ್ದು ಕೋವಿಯಲ್ಲ, ರೀತಿಯಿಲ್ಲದ್ದು ಹೆಣ್ಣಲ್ಲ'. ಇಂತಹ ಭಯ ಆತಂಕಗಳು ಹೆಣ್ಣಿಗೆ ಗಂಡಿನ ರಕ್ಷಣೆಯನ್ನು ಒತ್ತಿ ಒತ್ತಿ ಹೇಳಿದವು. 'ಲಂಕೆಯಲ್ಲಿದ್ದ ಹೆಣ್ಣು ಮಜ್ಜಿಗೆಯಲ್ಲಿದ್ದ ಬೆಣ್ಣೆ ಕೆಡುವುದಿಲ್ಲ'. 'ಗೂಟವಿಲ್ಲದ ಬೇಲಿ ಗಂಡನಿಲ್ಲದ ಹೆಣ್ಣು'. ಈ ಬಗೆಯ ಆತಂಕ ಹಾಗೂ ರಕ್ಷಣೆಯ ಒಳನೆಲೆಯಲ್ಲಿ ಸೃಷ್ಟಿಸಿದ್ದು ಹೆಣ್ಣಿನ ಮೂಕತೆಯನ್ನು, ಒಂದು ಕಡೆ ಹೆಣ್ಣಿಗೆ ಮಾತು ಹೆಚ್ಚು ಎಂಬ ಭಯದಿಂದ ನಿಷೇಧ ಅವಳನ್ನು ಮೂಕಳಾಗಿಸಿದರೆ ಇನ್ನೊಂದು ಕಡೆ 'ಮಾತು ಬೆಳ್ಳಿ ಮೌನ ಬಂಗಾರ' ಎಂಬ ಆದರ್ಶದಲ್ಲಿ ಹೆಣ್ಣನ್ನು ಮೂಕಳಾಗಿಸಿದೆ. ಹೆಣ್ಣಿನ ಈ ಮೌನವೇ ಕುಟುಂಬದ ಒಳಗೆ ಮತ್ತು ಹೊರಗೆ ಆಕೆಯ ಮೇಲಾಗುವ ಹಿಂಸೆ ದೌರ್ಜನ್ಯಗಳನ್ನು ಬಹಳ ಬಾರಿ ಮುಚ್ಚಿ ಹಾಕುವಂತಹದು. ಹೆಣ್ಣೊಬ್ಬಳ ಮೌನ ಒಡೆದ ಕ್ಷಣದಲ್ಲಿ ತನ್ನ ಹೆಣ್ಣುತನವನ್ನು ಕಳೆದುಕೊಂಡು ಗಯ್ಯಾಳಿಯಾಗುತ್ತಾಳೆ. 'ಅಂದೆ ಬಾಯಿ ಕಟ್ಟಬಹುದು, ಮುಂದೆ ಬಾಯಿ ಕಟ್ಟಲಾಗದು'. 'ಹರಕು ಬಾಯಿಯ ಹೆಣ್ಣು ಹೆಣ್ಣಲ್ಲ. ಕೊಳಕು ಮಣ್ಣಿನ ಗದ್ದೆ ಗದ್ದೆಯಲ್ಲ' ಪುರುಷ ನಿಗ್ರಹಕ್ಕೆ ಒಳಪಟ್ಟು ಬದುಕಬೇಕಾಗಿ ಬಂದ ಹೆಣ್ಣಿಗೆ ತನ್ನ ಬಾಯಿಯ ಮೇಲೂ ಹತೋಟಿ ಸಾಧಿಸುವ ಗಂಡಿನ ಪ್ರಯತ್ನವಾಗಿ ಇಂತಹ ಗಾದೆಗಳನ್ನು ಕಾಣಬಹುದು. ಹೆಣ್ಣಿನೊಂದಿಗೆ ಗಾದೆಗಳಿರುವ ಒಳಸಂಬಂಧದ ಸಿಕ್ಕುಗಳನ್ನು ಬಿಡಿಸಿಕೊಂಡಂತೆ."[೮] ಕುಟುಂಬದಲ್ಲಿ ಹೆಣ್ಣುಮಕ್ಕಳ ಮೇಲೆ ನಡೆಯುವ ಹಿಂಸೆ ಅವಮಾನವನ್ನು ಕಾಣಬಹುದು.

ಜನಪದ ಗೀತೆಗಳಲ್ಲಿ

ಮಕ್ಕಳು ಮರಿಗಳನ್ನು ಸಾಕಿ ಸಲಹುವ ಜವಾಬ್ದಾರಿ ಹೆಣ್ಣಿನ ಮೇಲೆಯೇ ಇರುತ್ತದೆ. ಆಕೆ ಮಾತ್ರ ಇಡೀ ಕುಟುಂಬದ ಜವಾಬ್ದಾರಿಗಳನ್ನು ಹೊತ್ತಿರುತ್ತಾಳೆ. ಗಂಡು ಕೇವಲ ದುಡಿಮೆಯ ನೆಪ ಮಾಡಿಕೊಂಡು ಕುಟುಂಬದ ಆಗುಹೋಗುಗಳ ಕಡೆಗೆ ಗಮನವೇ ಕೊಡುವುದಿಲ್ಲ. ಕುಟುಂಬದ ಹಿಂಸೆಯನ್ನು ಸೂಚ್ಯವಾಗಿ ದಾಖಲಿಸುವ ಮಳೆರಾಯನಿಗೆ ಸಂಬಂಧಿಸಿದ ಗೀತೆಯೊಂದು ಈ ರೀತಿಯಲ್ಲಿದೆ.

"ಗಿದ್ದಾನ ಅಕ್ಕಾಗ ಮಳಿರಾಜ || ಅವರು
ಅಪುರವನ್ನು ಕೂಡ್ಯಾರ ಮಳಿರಾಜ
ಸಣ್ಣ ಕೂಸಿಗೆ ಮನ್ನಿಸಿ ಉಣಸ್ಯಾರ
ಕಣ್ಣನ್ನೇ ಮುಚ್ಯಾವ ಮಳಿರಾಜ ||"[೯]

ಮಳಿರಾಯ ಬರದೇ ಇರುವುದು ಅಥವಾ ಬರಗಾಲ ಬೀಳುವುದು ಒಂದು ರೀತಿಯಲ್ಲಿ ಹೆಣ್ಣಿಗೆ ತಲ್ಲಣವನ್ನುಂಟು ಮಾಡುತ್ತದೆ. ಆ ನೋವನ್ನು ತಾಳಲಾರದೇ ಆಕೆ ಆತ್ಮಹತ್ಯೆಗೆ ಮುಂದಾಗುತ್ತಾಳೆ. ತನ್ನ ಮಕ್ಕಳು ಮರಿಗಳನ್ನು ಕೂಡಾ ಸಾಯಿಸಿ ನಂತರ ತಾನೂ ಸಾಯುತ್ತಾಳೆ.

“ಗಂಡ್ನಲ್ ಗುಣವಿಲ್ಲ
ಕೆಂಡದೇಲ್ ತನುವಿಲ್ಲ
ಗಡಗೇಲ್ ಅಕ್ಕಿಲ್ಲ
ಅಯ್ಯೊಯ್ಯೋ ಬದ್ಕೆ ನಾ ಬಂದುದ್ದೇ ಇದ್ಕೆ?”

“ಹೆಣ್ಣಿನ ಗೋಳುಟ್ಟೆ ಬನ್ನಿಯ ಮರಬೆಂದೋ
ಅಲ್ಲಿ ಸನ್ಯಾಸಿ ಮಠ ಬೆಂದೋ ಹಾರಾವ್ರು
ಪಂಚಾಂಗ ಕತ್ತಿ ಉರಿದಾವ್ರೋ ||’[೨೦]

ಸಾಮಾಜಿಕ ಕಟ್ಟುಪಾಡುಗಳು, ಶಾಸ್ತ್ರ, ಸಂಪ್ರದಾಯಗಳು ಹೆಣ್ಣಿನ ಒಡಲನ್ನು ಉರಿಸುತ್ತಿರುವ ಚಿತ್ರ ಇಲ್ಲಿದೆ. ಧರ್ಮ ಮತ್ತು ಕತ್ತಿ ಅಧಿಕಾರಶಾಹಿ ಮುಂತಾದವೆಲ್ಲವೂ ಹೆಣ್ಣಿನ ಗೋಳಿಗೆ ಸಿಕ್ಕು ಉರಿದು ಹೋಗುತ್ತಿವೆ ಎಂಬ ಅವಳ ಉದ್ಗಾರ ತೀವ್ರತರವಾದ ನೋವನ್ನು ಪ್ರಕಟಿಸುವಂತಾದ್ದಾಗಿದೆ. ಕೆಲವೊಮ್ಮೆ ಸಿಟ್ಟು ಬಂದಾಗ ಆ ಯಮನನ್ನೇ ಅವಳು ತರಾಟೆಗೆ ತೆಗೆದುಕೊಳ್ಳುತ್ತಾಳೆ.

ಪುರುಷಪ್ರಧಾನ ವ್ಯವಸ್ಥೆ ಹೆಣ್ಣಿಗಾಗಿಯೇ ರೂಢಿಸಿದ ಸಾಮಾಜಿಕ ಮೌಲ್ಯಗಳನ್ನು ಕಾಪಾಡಿಕೊಂಡು ಬರುವ ಮತ್ತು ಅವನ್ನೇ ಗಟ್ಟಿಗೊಳಿಸುವಂತಹ ಗೀತೆಗಳನ್ನು ಗರತಿಯ ಹಾಡು, ಮಲ್ಲಿಗೆ ದಂಡೆ, ಜೀವನ ಸಂಗೀತ ಇನ್ನೂ ಮುಂತಾದ ಸಂಕಲನಗಳಲ್ಲಿ ಕಾಣುತ್ತೇವೆ. ಅತ್ತೆ ಮನೆಯ ಕಷ್ಟ, ಪ್ರೀತಿ ಒಲುಮೆಗಳ ಕೊರತೆ ಕೈಹಿಡಿದ ಗಂಡನ ಅನಾದಾರ, ವೈಧವ್ಯ, ಬಂಜೆತನ, ಕೌಟುಂಬಿಕ ಕಿರುಕುಳ ಆಕೆಯ ದುಃಖದ ಮೂಲಗಳು ಹೆತ್ತ ತಾಯಿಯೊಬ್ಬಳನ್ನು ಬಿಟ್ಟು ತನ್ನ ಕಷ್ಟಕ್ಕೆ ಸ್ಪಂದಿಸುವ ಜೀವಿಗಳ್ಯಾರೂ ಇಲ್ಲ. ಹೀಗಿದ್ದರೂ ನೆನೆಸಿಕೊಂಡಾಗ ತವರುಮನೆಗೆ ಹೋಗುವ ಅವಕಾಶ ಇಲ್ಲ.

ಆದ್ದರಿಂದಲೇ ಅವಳು ಮದುವೆಯಾದ ಕೂಡಲೇ ಮಕ್ಕಳನ್ನು ಬೇಡುತ್ತಾಳೆ. ಮಕ್ಕಳಾಗದಿದ್ದರೆ, ‘ಬಂಜೆಯ ಬದುಕು ಬಾಡಿಗೆ ಎತ್ತು ದುಡಿದಂಗೆ, ಬಾಳೆಲೆಯ ಹಾಸುಂಡು ಬೀಸಿ ಒಗೆದಂಗೆ’ ಮಾಡುತ್ತದೆ. ಹೆಣ್ಣು ತಾನು ಬದುಕಿರುವಾಗಲೇ ಗಂಡನನ್ನು ಕಳೆದುಕೊಂಡರೆ ತಾಳಿ, ಬಳೆ ಕಿತ್ತು, ತಲೆ ಬೋಳಿಸಿ ಮುಂಡೆ ಎನ್ನುವ ಮಾತು ಕೇಳಲಾದರೆ, ಬದುಕಿದ್ದು ಸತ್ತಂತಿರುವ ಜೀವನ ನಡೆಸಲಾಗದೆ ಸಮಾಜದ ಕ್ರೂರ ನಡವಳಿಕೆಗೆ ಹೆದರಿ ‘ಮುಂದೆ ಮರಣವ ಕೊಡು’ ಎಂಬ ಸ್ಥಿತಿಗೆ ಇಳಿಯುತ್ತಾಳೆ.

ಜನಪದ ಕಥನಗೀತೆಗಳಲ್ಲಿನ ಅಸಂಖ್ಯಾತ ಹೆಣ್ಣುಗಳು ಕೆರೆಗೆ ಹಾರವಾಗುತ್ತಾರೆ. ಗುಡಿ ಕೋಟೆಗಳಿಗೆ ಆತ್ಮಾರ್ಪಣೆ ಮಾಡಿಕೊಳ್ಳುತ್ತಾರೆ. "ನಮ್ಮ ಮುಂದೆ ಮಹಾಸತಿ ವೀರತಿಮ್ಮವ್ವ, ನಾಗಮ್ಮ, ಕಾಟವ್ವ, ಕೆಂಚವ್ವ, ಧರಣೆಯಮ್ಮನ ಬಲಿದಾನ, ವಲ್ಲಣದೇವಿ, ರೇಣುಕಾ ಎಲ್ಲಮ್ಮ, ಕಾಡುಸಿದ್ದವ್ವ, ಗುಣಸಾಗರಿ, ಸತಿ ಚನ್ನಮ್ಮ, ಚನ್ನವ್ವ ಮತ್ತು ಭಾಗೀರಥಿಯರಂತೆ ಕೆರೆಗೆ ಹಾರದಂಥ ಅನೇಕ ಕಥನಗೀತೆಗಳ ಉದಾಹರಣೆ ಇದೆ. ಗ್ರಾಮದ ಹಿತಕ್ಕಾಗಿ ಸತಿ ತ್ಯಾಗ ಮಾಡುವುದು ಗೀತೆಯ ಮೊದಲ ಭಾಗದಲ್ಲಿ ಬಂದು ಎರಡನೇ ಹಂತದಲ್ಲಿ ತೀರಿಕೊಂಡವಳು. ದೇವತೆಯಾದ ನಂತರವೂ ಕಥೆಯು ಮುಂದುವರಿಯುತ್ತದೆ. ಸಾಯುವುದಕ್ಕೂ ಮೊದಲೇ ಆಕೆ ತವರುಮನೆಗೆ ಹೋಗಿ ಗಂಡನ ಮನೆಯಲ್ಲಿ ಬದುಕು ಮಾಡುವುದು ತನ್ನೊಬ್ಬಳಿಂದ ಆಗದೆಂದು ತಂಗಿಯನ್ನು ಗಂಡನಿಗೆ ಕೊಡುವಂತೆ ಒಪ್ಪಿಸಿ ಭಾಷೆ ತೆಗೆದುಕೊಂಡು ಬರುತ್ತಾಳೆ. ಆಗ ತಾನು ಕೆರೆಗೆ ಬಲಿಯಾಗಲಿರುವ ಸುದ್ದಿಯನ್ನು ಪ್ರಕಟಿಸುವುದಿಲ್ಲ. ಕೊನೆಯ ಭಾಗದಲ್ಲಿ ಸತಿ ತೀರಿಕೊಂಡ ಮೇಲೆ ದೂರ ನೆಲೆಸಿದ ಗಂಡನಿಗೆ ಸುದ್ದಿ ತಿಳಿದು ಧಾವಿಸಿ ಬಂದು ಕೆರೆಯ ಮುಂದೆ ನಿಂತು ದುಃಖಿಸುತ್ತಾನೆ. ದೇಹ ಧರಿಸಿ ಬಂದ ಸತಿ ಆತನಿಗೆ ತನ್ನ ತಂಗಿಯನ್ನು ಲಗ್ನವಾಗುವಂತೆ ತಿಳಿಸುತ್ತಾಳೆ. ನೀರಿಗಾಗಿ ಬಲಿಯಾದ ಹೆಂಗಸರ ತ್ಯಾಗ ಮಾಡಿರುವ ಕಥನಗೀತೆಗಳಲ್ಲಿ ಮನಮುಟ್ಟುವಂತೆ ಚಿತ್ರಿತವಾಗಿರುತ್ತದೆ."[೧೧] ಜನ ಸಾಮಾನ್ಯರಲ್ಲಿ ಬಲಿಕೊಡುವುದು ಅದು ಯಾವುದನ್ನು ಕೇಳುತ್ತದೋ ಅದನ್ನೇ ಬಲಿ ಕೊಡುತ್ತಾರೆ. ಹೆಚ್ಚಾಗಿ ಗರ್ಭಿಣಿ ಹೆಂಗಸರನ್ನೇ ಬಲಿ ಕೊಡಲಾಗುತ್ತದೆ.

ಜನಪದ ಕಥೆಗಳಲ್ಲಿ

ಜನಪದ ಕಥೆಗಳಲ್ಲಿನ ಹೆಣ್ಣು ಎಲ್ಲಿಯೂ ಪಲಾಯನವಾದಿಯಲ್ಲ. ಆಕೆ ಸ್ವಾಭಿಮಾನದ ಸಂಕೇತ. ಎದುರಾದ ಸಂದರ್ಭಕ್ಕೆ ಮುಖಾಮುಖಿಯಾಗಿ ನಿಂತು ದಿಟ್ಟತನದಿಂದಲೇ ಗೆಲುವು ಕಾಣುತ್ತಾಳೆ. ರಾಕ್ಷಸನಿಗೆ ಸೆರೆ ಸಿಕ್ಕಾಗಲೀ, ಪರಪುರುಷನ ಅಪಹರಣಕ್ಕೆ ಒಳಗಾದ ಸಂದರ್ಭದಲ್ಲಾಗಲೀ, ಅತ್ತೆಯ ಹಿಂಸೆಗೆ ತುತ್ತಾಗುವ ಸನ್ನಿವೇಶದಲ್ಲಾಗಲೀ, ದರಿದ್ರನ, ಹೆಣದ ಅಥವಾ ಪ್ರಾಣಿರೂಪಗಳ ಜೊತೆ ಮದುವೆಯಾಗುವ ಅನಿವಾರ್ಯ ದಲ್ಲಾಗಲೀ ವಿಚಲಿತಗೊಳ್ಳದೇ ಸವಾಲನ್ನು ಎದುರಿಸುವುದನ್ನು ಹಲವಾರು ಜನಪದ ಕಥೆಗಳಲ್ಲಿ ನಾವು ಕಾಣುತ್ತೇವೆ. ಅಂದರೆ ಇಲ್ಲಿನ ಮಹಿಳೆಯ ಹೋರಾಟ ಪುರುಷ ನಿಷ್ಠ ಮೌಲ್ಯಗಳ ವಿರುದ್ಧವಾಗಿದ್ದು ಹೆಣ್ತನದ ನಿರ್ದಿಷ್ಟ ಚೌಕಟ್ಟನ್ನು ನಿರಚಿಸಿ ಹೊಸ ನಿರ್ವಚನವನ್ನು ಮಾಡುತ್ತಾರೆ.

ಜನಪದ ಕಥೆಗಳಲ್ಲಿ ಮಹಿಳೆಯ ಮೇಲೆ ನಡೆಯುವ ಹಿಂಸೆಯ ಸ್ವರೂಪದಿಂದ ಕೂಡಿದ ಕಥೆಗಳು ಹಲವಾರು ಕಂಡುಬಂದರೂ ಅವುಗಳಲ್ಲಿ ಹೆಣ್ಣು ಎಲ್ಲ ಕಡೆ ಬೌದ್ಧಿಕ ಶಕ್ತಿಯ ಸಂಕೇತ ಅಥವಾ ಪ್ರತಿನಿಧಿಯಾಗಿ ಕಂಡುಬರುತ್ತಾಳೆ. ಆ ಶಕ್ತಿಯಿಂದಲೇ ಪ್ರತಿನಾಯಕನನ್ನು ಮಣ್ಣು ಮುಕ್ಕಿಸುತ್ತಾಳೆ. ಒಲ್ಲದವನನ್ನು ತಂತ್ರ ಹೂಡಿ ಮೋಸಗೊಳಿಸುತ್ತಾಳೆ. ಬಹುತೇಕ ಹಾಸ್ಯ ಕಥೆಗಳ ನಾಯಕ ಪೆದ್ದ ಗುಂಡ,

ದಡ್ಡ, ಅದು ದಡ್ಡ ಗುಂಡಿ ಅಥವಾ ದಡ್ಡಿ ಆಗಿರುವುದಿಲ್ಲ ಎನ್ನುವುದು ಗಮನಾರ್ಹ. ಕೆಲವು ಕಥೆಗಳಲ್ಲಿ ಸೊಸೆ ಅತ್ತೆಯನ್ನು ವಿರೋಧಿಸಿ ನಿಲ್ಲುತ್ತಾಳೆ. ಗಂಡನ ಮೋಸ ಅನ್ಯಾಯಗಳನ್ನು ಹೆಂಡತಿ ಪ್ರತಿಭಟಿಸುತ್ತಾಳೆ. ಉದಾಹರಣೆಗಾಗಿ ಈ ಕೆಳಗಿನ ಕಥೆಯನ್ನು ನೋಡೋಣ. ಕಥೆಯ ಹೆಸರು 'ತಂದದ್ದು ತಿಂದದ್ದು'.

"ಒಂದೂರಲ್ಲಿ ಗಂಡ ಹೆಂಡ್ತಿ ಇಬ್ರು ಇರ್ತಾರೆ. ಗಂಡ ಒಬ್ಬ ಸಾಹುಕಾರನ ಮನೇಲಿ ಸಂಬ್ಳ ಇದ್ದ. ದಿನಾಲು ಒಂದೇ ತರದ ಅಡಿಗೇನ ಊಟ ಮಾಡಿ ಅವನ್ಗೆ ಬಾಯಿ ಕೆಟ್ಟಂಗೆ ಆಗಿರುತ್ತೆ. ಒಂದಿನ ಕಡುಬು ತಿನ್ನಂಗೆ ಆಯ್ತು. ಸಂಬ್ಳದ ಮನೆಯಿಂದ ಒಂದು ಪರಂಗಿಕಾಯಿ ತಂದು ಹೆಣ್ತಿ ಕೈಗೆ ಕೊಡ್ತಾನೆ. ಹೆಣ್ತಿಯಿದ್ದು, 'ಇದನ್ಯಾಕ ತಂದ್ರಿ' ಅಂತ ಕೇಳ್ತಳೆ. ಈ ಪರಂಗಿಕಾಯಿಲೀ ಕಡುಬು ಮಾಡು. ನನಗೆ ತಿನ್ನಬೇಕು ತುಂಬ ಆಸೈತೆ ಅಂತ ಹೇಳ್ತನೆ. ಅವಾಗ ಹೆಣ್ತಿ ಮೂರು ಕಡುಬು ಕಟ್ಟಿ, ಸ್ವಾರೆ ಒಳಗೆ ಬೇಯಾಕೆ ಇಟ್ಟು ಒಲೆಮ್ಯಾಲೆ ಇಟ್ಲು.

ಕಡುಬು ಬೇಸ್ತ ಕುಂತ್ಗಂಡ್ಲು. ಬೆಂದತೋ ಬೆಂದಿಲ್ಲೋ ಅಂತ ಒಂದು ತೆಗೆದು, ಅದನ್ನು ತಿಂದ್ಲು. ಬಾಳ ಚನ್ನಾಗಿ ಬೆಂದಿತ್ತು. ಇವಳ್ಗೆ ಮತ್ತೆ ತಿನ್ಬೇಕೆಂಬ ಆಶೆ ಉಟ್ತು. ಆವಾಗ ಈಕೆ ಏನಂದ್ಕಂತಾಳೆ ಇನ್ನೆರಡು ಕಡುಬು ಉಳುದ್ವಲ್ಲ! ಇದ್ರಲ್ಲಿ ನನ್ಗೊಂದು ನನ್ಗೊಡ್ಗೊಂದು ಅಂದು, ತನ್ನ ಪಾಲಿನ ಕಡುಬು ತಿಂದ್ಲು. ಸ್ವಲ್ಪ ವೊತ್ತಾದ್ಮೇಲೆ ಕಡುಬು ನೆನಸ್ಗಂಡು ಬಾಯಲ್ಲಿ ನೀರು ಬಂದು. ಜಲ್ಮ ತಡೆಯಕಾಗ್ಲಿಲ್ಲ. ಅಲ್ಲ ನನ್ಗಂಡ ತಂದದ್ದು ನಾನ್ಯಾಕೆ ತಿನ್ನಬಾರದು? ನಾನು ತಿಂದ್ರೆ, ಅವುರೇನು ಬ್ಯಾಡಂತರೇನು? ಅಂದು ಮೂರ್ನೆ ಕಡುಬು ತಿಂದು ಬಿಡ್ತಾಳೆ.

ಕಡುಬೆಲ್ಲ ಖಾಲಿ ಆದ್ಮೇಲಿ ಗಂಡ, ಸಂಬ್ಳ ಮನೆಯಿಂದ ಕಡುಬು ನೆನಸ್ಗಂಡು ಮನೆಗೆ ಬರ್‍ತಾನೆ, ಕೋಣೆ ಒಳಗೆ ಹೆಣ್ತ ಕುಂತಿದ್ಲು. ಏನೇ ಏನು ಮಾಡ್ತಿಯೇ ಕಡುಬು ಬೆಂದಿದ್ರೆ, ಕೊಡ್ತಿಯಾ ಅಂತ ಜೋರಾಗಿ ಕೂಗಿ ಕೇಳ್ತನೆ.

ಆವಾಗ ಈಕೆ ಅಯ್ಯೋ ಮಾರಾಯ ಬೆಂದತೋ ಬೆಂದಿಲ್ಲೋ ಅಂತ ಒಂತಿಂದೆ. ಎರೆಡು ಉಳುದ್ವು. ನನ್ನ ಪಾಲಿಂದು ನಾನು ಯಾಕೆ ತಿನ್ನಬಾರದು ಅಂತ ಒಂತಿಂದೆ, ಗಂಡ ತಂದಿದ್ದು ತಿಂದ್ರೆ ಬ್ಯಾಡ ಅನ್ನಲ್ಲಂತ ಇನ್ನೊಂದು ತಿಂದೆ ಅಂತ ಹೇಳ್ತಳೆ. ಆ ಮಾತು ಕೇಳಿ ಆಯಪ್ಗೆ ಮನಸು ಒಡೆದೋಯ್ತು. ಅವಾಗ ಅವ್ನು ಏನ್ಮಾಡ್ತನಂದ್ರೆ; ನಗ್ತಿಯೋ ಇಲ್ವೋ ಅಂತ ಒಂದು ಗುದ್ದು ಗುದ್ದಿದ. ಅಳ್ತಿಯೋ ಇಲ್ವೋ ಅಂತ ಮತ್ತೊಂದು ಗುದ್ದು ಹಾಕ್ದ. ನನ್ನೇಣ್ತೀನ ನಾನು ಗುದ್ದಿದ್ರೆ ಯಾರು ಬ್ಯಾಡಂತಾರೆ ಅಂದು ದಡಲ್ ಅಂತ ಇನ್ನೊಂದು ಗುದ್ದು ಗುದ್ದಿದ. ಇಂಗೆ ಗಂಡ ಹೆಣ್ತಿಗೆ ವಾಗ್ವಾದ ಬಿದ್ದು ಮನೆಲ್ಲ ಸತಿ ಹೋಗಂಗೆ ಬಾಯ್ಬಾಯಿ ಮಾಡ್ಕಂಡು ಜಗ್ಳ ಆಡ್ತ ಇದ್ರು. ಅವಾಗ ಅಕ್ಕಪಕ್ಕದ ಜನ ಸೇರಿ ಯಾಕೆ ಜಗ್ಳ ಮಾಡದಂತ ವಿಚಾರಣೆ ಮಾಡ್ತರೆ.

ಅವಾಗ, ತಂದದ್ದು ಅವ್ನು ಹೇಳ್ದ, ತಿಂದದ್ದು ಈಕೆ ಹೇಳಿದ್ಳು, ಗುದ್ದಿದ್ದು ಗಂಡ ಹೇಳ್ದ. ಎಲ್ಲದನ್ನು ಪಂಚಾಯ್ತಿ ಮುಖ್ಯಸ್ಥರು ಕೇಳಿಸ್ಗಂಡು ಏನ್ಹೇಳ್ತರಂದ್ರೆ; ನಿಮ್ಮಿಬ್ರುದು ನ್ಯಾಯವಾಗೆ ಇದೆ. ಇನ್ಮುಂದೆ ಜಗ್ಳ ಆಡ್ದಂತೆ, ಸುಖ್ವಾಗಿ ಸಂಸಾರ ಮಾಡಿಕೊಂಡು ಹೋಗ್ರಿ ಅಂತ ಒಂದ್ಮಾಡಿದ್ರು.''[೧೨]

ಈ ಮೇಲಿನ ಕಥೆಯ ಹಾಸ್ಯ ಪ್ರಧಾನವಾಗಿ ಕಂಡು ಬಂದರೂ, ಕುಟುಂಬದಲ್ಲಿನ ಮಹಿಳೆಯು ಪುರುಷನ ಅಥವಾ ಗಂಡನ ಅನುಮತಿಯ, ಆಜ್ಞೆಯ ಮೇರೆಗೆ ಜೀವನ ಮಾಡಬೇಕು. ಆತ ಹೇಳಿದಂತೆಯೇ ಕೆಲಸ ಕಾರ್ಯ ಮಾಡಬೇಕು ಇಲ್ಲದಿದ್ದರೆ ಗುದ್ದು ಖಾಯಂ ಆಗಿ ಬೀಳುತ್ತವೆ. ಇದರಿಂದ ಆಕೆಗೆ ಮಾನಸಿಕ ಮತ್ತು ದೈಹಿಕ ಹಿಂಸೆಯಾದರೂ ಅದನ್ನು ಪ್ರತಿಭಟಿಸಿದರೆ ಸಮಾಜ ಪುರುಷ ಮಾಡಿದ್ದೇ ಸರಿ ಎಂದು ತೀರ್ಮಾನ ಮಾಡುವುದು ಕಂಡು ಬರುತ್ತದೆ. ಈ ಕಥೆ ಕೇವಲ ಹಾಸ್ಯಪ್ರಧಾನವಾಗಿರಬಹುದು. ಆದರೆ ಸಮಾಜದ ಎಷ್ಟೋ ಕುಟುಂಬದಲ್ಲಿ ಈ ತರಹದ ಸಣ್ಣಪುಟ್ಟ ಕಾರಣಕ್ಕಾಗಿ ಪ್ರತಿ ದಿನ ಕೌಟುಂಬಿಕ ಜಗಳಗಳಾಗಿ ಹಿಂಸೆಯ ರೂಪ ತಾಳಿ ಕೊನೆಗೆ ಗಂಡ ಹೆಂಡತಿ ಬೇರೆಯಾಗುವ ತನಕ ಹೋದ ಎಷ್ಟೋ ಘಟನೆಗಳನ್ನು ನಾವು ಕಾಣುತ್ತೇವೆ. ಇದೇ ತರಹದ ಕಡುಬಿನ ಆಕಾರ ಹೆಂಡತಿಯ ಮೈಮೇಲೆ ಮೂಡುವಂತೆ ಗಂಡ ಹೊಡೆದಂಥ ಕಥೆಗಳು ಕೂಡ ನಾವು ಕೇಳಿರಬಹುದು.

ಟಿಪ್ಪಣಿಗಳು

೧. ಡಾ. ಸುಶೀಲ ನೆಲ್ಲಿಸರ, ೨೦೦೪, ಜನಪದ ಸಾಹಿತ್ಯದಲ್ಲಿ ಪುರುಷ ಪ್ರಾಬಲ್ಯ, 'ವಿಜಯನ್ವೇಷಣೆ', ಪು. ೧೨೩.

೨. ಹಿ.ಶಿ. ರಾಮಚಂದ್ರೇಗೌಡ, ೨೦೦೩, ತನ್ನತಾವು, ಪು. ೩೫.

೩. ಅದೇ... ಪು. ೩೭.

೪. ಅದೇ... ಪು. ೪೭.

೫. ಜ್ಯೋತಿ ಹೊಸೂರು, ೧೯೭೧, ಹೆಸರ ಹೇಳ್ತೀನಿ ಒಡಪ ಕಟ್ಟಿ, ಪು. ೭೩, ೭೪.

೬. ಸಂ. ವಿಜಯಶ್ರೀ ಸಬರದ, ೨೦೦೫, ಮಹಿಳೆ ಶೋಷಣೆಯ ಸವಾಲುಗಳು, ಪು. ೭೫.

೭. ಹಿ.ಶಿ. ರಾಮಚಂದ್ರೇಗೌಡ, ೨೦೦೪, ಜಾನಪದ ಸಾಹಿತ್ಯ ಪ್ರಕಾರಗಳು, ಪು. ೭೫.

೮. ಡಾ. ಗಾಯತ್ರಿ ನಾವಡ, ೨೦೦೩, ಮಹಿಳಾ ಸಂಕಥನ, ಪು. ೧೦೮.

೯. ಶ್ರೀಕಂಠ ಕೂಡಿಗೆ, ೧೯೯೩, ಕನ್ನಡ ಸಾಹಿತ್ಯದಲ್ಲಿ ನೋವಿನ ನೆಲೆಗಳು, ಪು. ೨೬.

೧೦. ಸಂ. ಡಾ. ಸುಶೀಲ ನೆಲ್ಲಿಸರ, ೨೦೦೪, ಜನಪದ ಸಾಹಿತ್ಯದಲ್ಲಿ ಪುರುಷ ಪ್ರಾಬಲ್ಯ, 'ವಿಜಯನ್ವೇಷಣೆ, ಪು. ೧೨೫-೧೨೬.

೧೧. ಸಂ. ಹಂಪನಾಗರಾಜಯ್ಯ, ೧೯೮೧, ಕತ್ತಲ ದಾರಿದೂರ, ಪು. ೭, ೨೩.

೧೨. ಸಂ. ಮೈಲಹಳ್ಳಿ ರೇವಣ್ಣ, ೧೯೮೫, ಅಡವಿ ಗಮಾರ ಮತ್ತು ಇತರ ಜನಪದ ಕಥೆಗಳು, ಪು. ೨೨೬-೨೨೭.

• • •

ಅಧ್ಯಾಯ ೪

ಪ್ರಕರಣಗಳ ಅಧ್ಯಯನಗಳು

ಅಧ್ಯಾಯ ೪

ಪ್ರಕರಣಗಳ ಅಧ್ಯಯನಗಳು

ತಾಯಿ, ಹೆಂಡತಿ, ಸಹೋದರಿಯರು ಹಾಗೂ ಪುತ್ರಿಯರ ಮೇಲೆ ಪುರುಷರು ವಿನಾಕಾರಣ ನಡೆಸುವ ನಾನಾ ಬಗೆಯ ದೌರ್ಜನ್ಯಗಳು ನಿಜಕ್ಕೂ ಬಹಳ ಭಯಾನಕ.

ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯಗಳಿಗೆ ಇಂತಹುದೇ ಎಂದು ನಿರ್ದಿಷ್ಟ ಕಾರಣಗಳಿರುವುದಿಲ್ಲ. 'ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು' ಎಂಬ ಗಾದೆಯಂತೆ ಹೆಂಡತಿಗೆ ಹಿಂಸೆ ಕೊಡಲು ಗಂಡನಿಗೆ ಯಾವುದೇ ನೆಪಗಳು ದೊರೆಯಬಹುದು. ಅಡುಗೆಗೆ ಉಪ್ಪು ಹೆಚ್ಚು ಹಾಕಿದರೆ, ತರಕಾರಿ ಕತ್ತರಿಸಿದ್ದು ಸರಿಯಾಗದಿದ್ದರೆ, ಮನೆಗೆ ಬರುವುದು ತಡವಾದರೆ, ಅಂಗಿಗೆ ಗುಂಡಿ ಹಾಕದಿದ್ದರೆ, ಅಡುಗೆ ಸ್ವಲ್ಪ ತಡವಾದರೆ, ಹೀಗೆ ಯಾವುದಾದರೊಂದು ನೆಪದ ಮೂಲಕ ಹೆಂಡತಿಯನ್ನು ಹಿಂಸಿಸಲು ಸಾಕಾಗುತ್ತದೆ. ಈ ಅಧಿಕಾರವನ್ನು ನಮ್ಮ ಸಮಾಜವು ಪುರುಷರಿಗೆ ಮಂಜೂರು ಮಾಡಿದೆ. ಅಲ್ಲದೆ ಅಂತಹ ಸಂದರ್ಭದಲ್ಲಿ ಹೆಂಗಸರನ್ನೇ ಹೊಣೆಗಾರರನ್ನಾಗಿ ಮಾಡುವ ಹುನ್ನಾರ ಪುರುಷಪ್ರಧಾನ ವ್ಯವಸ್ಥೆಯಲ್ಲಿ ಕಂಡುಬರುತ್ತದೆ. 'ಗಂಡನಲ್ಲವೇ ಹೊಡೆಯುವುದು. ಅವಳೇ ಏನೋ ಮಾಡಿರಬೇಕು. ಅದಕ್ಕೆ ಅವನು ಹಾಗೆ ಹೊಡೆದಿರಬೇಕು' ಎನ್ನುವಂತಹ ಮನೋಭಾವದವರೇ ನಮ್ಮಲ್ಲಿ ಹೆಚ್ಚು ಕಂಡುಬರುತ್ತಾರೆ.

'ಹಿಂಸಿಸುವುದು ಪುರುಷನ ಹಕ್ಕು, ಹಿಂಸೆಗೊಳಗಾಗುವುದು ಮಹಿಳೆಯರ ಕರ್ತವ್ಯ'ವೆಂದು ಸಾರುತ್ತಿರುವ ಸಾಮಾಜಿಕ ವ್ಯವಸ್ಥೆಯ ಕುಟುಂಬದಲ್ಲಿ ಕೇವಲ ಗಂಡನಿಂದ ಹಿಂಸೆಗೆ ಒಳಗಾಗುವುದಲ್ಲದೇ ಇತರ ಸದಸ್ಯರಿಂದಲೂ ಮಹಿಳೆಯರು ಹಿಂಸೆ ಅನುಭವಿಸುವುದನ್ನು ಈ ಕೆಳಗಿನಂತೆ ವಿವರಿಸಲಾಗಿದೆ. ಇವುಗಳಲ್ಲಿ ಕೆಲವು ಪ್ರಕರಣಗಳು ದಾಖಲಾಗಿ ನ್ಯಾಯಾಲಯದವರೆಗೂ ಹೋದರೆ ಇನ್ನೂ ಕೆಲವು ಪ್ರಕರಣಗಳು ಯಾವುದೇ ರೀತಿಯ ಪೋಲೀಸ್ ಠಾಣೆಯ ಹತ್ತಿರ ಹೋಗದೇ ಮತ್ತು ದಾಖಲಾಗದೇ ಅಜ್ಞಾತವಾಗಿ ಉಳಿದಿವೆ.

೧. ಜಯಲಕ್ಷ್ಮಿ

೩೦ ವರ್ಷದ ಜಯಲಕ್ಷ್ಮಿ ೩೪ ವರ್ಷದ ಗಂಡ ವೀರಭದ್ರಯ್ಯನ ಜೊತೆ ಮದುವೆಯಾಗಿ ೮ ವರ್ಷಗಳಾಗಿದ್ದು, ಹೂವಿನ ಹಡಗಲಿ ತಾಲ್ಲೂಕು ಹಿರೇಮಲ್ಲಿನಕೇರಿಯಲ್ಲಿ ವ್ಯವಸಾಯ ಮಾಡಿಕೊಂಡು

ಜೀವನ ಸಾಗಿಸುತ್ತಿದ್ದರು. ೭ ವರ್ಷಗಳವರೆಗೆ ಇವರ ಜೀವನ ಚೆನ್ನಾಗಿಯೇ ಇದ್ದು, ಈಗ ಎರಡು ಮೂರು ವರ್ಷಗಳಿಂದ ಜಯಲಕ್ಷ್ಮಿ ಗಂಡನಿಗೆ ಹಣದ ಸಮಸ್ಯೆಯಿಂದಾಗಿ ವರದಕ್ಷಿಣೆಯ ಹೆಸರಿನಲ್ಲಿ ದೈಹಿಕವಾಗಿ ಮತ್ತು ಮಾನಸಿಕವಾಗಿ ಆಕೆಗೆ ಹಿಂಸೆ ಕೊಟ್ಟಿರುತ್ತಾನೆ. ಇದಾದ ನಂತರ ಮನೆಗೆಲಸ ಸರಿಯಾಗಿ ಮಾಡುತ್ತಿಲ್ಲ ಎಂದು ದೈಹಿಕವಾಗಿ ಹಿಂಸೆ ನೀಡುತ್ತಿದ್ದಾನೆ. ಈ ಹಿಂಸೆಯನ್ನು ತಾಳಲಾರದೆ ನಾನು ತನ್ನ ತಾಯಿ ಮತ್ತು ಅಣ್ಣನಿಗೆ ತಿಳಿಸಿದರೆ 'ಗಂಡನ ಮನೆಯಲ್ಲಿ ಅದೆಲ್ಲ ಮಾಮೂಲಿ ನೀನೆ ಹೊಂದಿಕೊಂಡು ಸಹಿಸಿಕೊಂಡು ಹೋಗಬೇಕು' ಎಂದು ಹೇಳಿ ಕಳಿಸಿದ್ದಾರೆ. ನಂತರ ಇದನ್ನು ತನ್ನ ಅಕ್ಕ, ಬಾವ, ಇವರಿಗೆ ತಿಳಿಸಿದಾಗ ಅವರುಗಳು ಬಂದು ಗಂಡನಿಗೆ 'ಹೀಗೆಲ್ಲಾ ಮಾಡಬಾರದು. ಜಯಲಕ್ಷ್ಮಿ ನಿನ್ನ ಹೆಂಡತಿ, ಸರಿಯಾಗಿ ನೋಡಿಕೊಂಡು ಹೋಗಬೇಕು' ಎಂದು ಹೇಳಿದರೆ, ಅವರಿಗೆ 'ಇದು ನಮ್ಮ ಸಂಸಾರದ ವಿಷಯ ಇದರಲ್ಲಿ ಹೇಳಲು ನೀವ್ಯಾರು'' ಎಂದು ಬೈದು ಕಳುಹಿಸಿದ್ದಾನೆ. ಅಕ್ಕ ಬಾವನ ಮಾತಿನ ಸಲುವಾಗಿ ಹೆಂಡತಿಗೆ 'ನೀವು ನಿನ್ನ ಬಾವಯ್ಯನನ್ನು ಇಟ್ಟುಕೊಂಡಿದ್ದೀಯಾ' ಎಂದು ಪ್ರತಿ ದಿನವೂ ಮಾನಸಿಕ ಹಿಂಸೆ ನೀಡಿದ್ದಾನೆ. ದಿನಾಂಕ ೧೧.೦೩.೨೦೦೭ ರಂದು ರಾತ್ರಿ ೭ ಗಂಟೆ ಸುಮಾರಿಗೆ 'ಏನೇ ಸೂಳೆ ನಿನಗೆ ಎಷ್ಟು ಸಾರಿ ಹೇಳಿದರೂ ಸಹ ಬಾಗಿಲಲ್ಲಿ ನಿಂತು ಅವರಿವರನ್ನು ನೋಡ್ತಿಯ' ಎಂದು ಸುಮ್ಮನೆ ಜಗಳ ತೆಗೆದು ಅಲ್ಲಿ ಇದ್ದ ಬಡಿಗೆಯಿಂದ ಮೈಕೈಗೆ ರಕ್ತ ಬರುವಂತೆ ಹೊಡೆದಿದ್ದಾನೆ. 'ಈ ವಿಷಯವನ್ನು ತವರಿನ ಮನೆಯವರಿಗೆ ನೀನೇನಾದರೂ ತಿಳಿಸಿದರೆ ಇದೇ ಬಡಿಗೆಯಿಂದ ತಲೆಗೆ ಹೊಡೆದು ಪ್ರಾಣ ತೆಗೆಯುತ್ತೇನೆ' ಎಂದು ಪ್ರಾಣ ಬೆದರಿಕೆ ಹಾಕಿದ್ದಾನೆ ಎಂದು ಹಡಗಲಿ ಪೊಲೀಸ್ ಠಾಣೆಯಲ್ಲಿ CRNO ೩೪/೦೭, ೪೯೮ (ಎ) ೫೦೭(೨)ರಲ್ಲಿ ದಿನಾಂಕ ೧೪.೦೩. ೨೦೦೭ ರಂದು ಪ್ರಕರಣ ದಾಖಲಾಗಿದ್ದು, ನಂತರ ೨೭.೦೨.೨೦೦೭ರಲ್ಲಿ ಸಿ.ಜೆ. ಜೆಎಂ.ಎಫ್ ನ್ಯಾಯಾಲಯದಲ್ಲಿ ಆರೋಪಿ ಈ ಕೆಲಸ ಮಾಡಿಲ್ಲವೆಂದು ತೀರ್ಪು ನೀಡಿದೆ.

೨. ರಾಣಿಬಾಯಿ

೨೦ ವರ್ಷದ ರಾಣಿಬಾಯಿ ಗಂಡ ೨೩ ವರ್ಷದ ಪಾಂಡುನಾಯ್ಕ ಲಂಬಾಣಿ ಜನಾಂಗಕ್ಕೆ ಸೇರಿದ್ದು, ಕೂಲಿ ಕೆಲಸ ಮಾಡಿಕೊಂಡು ಹೂವಿನ ಹಡಗಲಿ ತಾಲ್ಲೂಕು ಕುಮಾರನಾಯ್ಕನ ಹಳ್ಳಿ ತಾಂಡದಲ್ಲಿ ವಾಸವಾಗಿದ್ದಾರೆ. ಈಕೆ ಅನುಭವಿಸಿದ ನೋವನ್ನು ಈ ಕೆಳಗಿನಂತೆ ಹೇಳಿದ್ದಾಳೆ.

"ಎರಡು ವರ್ಷಗಳ ಹಿಂದೆ ನಮ್ಮ ಮದುವೆಯಾಯಿತು. ಆರು ತಿಂಗಳವರೆಗೆ ಚೆನ್ನಾಗಿದ್ದೆವು. ನಂತರ ನಮ್ಮ ಅತ್ತೆ ಶಾಂತಬಾಯಿ ನೀನು ಸರಿಯಾಗಿ ಕೆಲಸ ಮಾಡೋದಿಲ್ಲ. ನಿನಗೆ ಅಡುಗೆ ಮಾಡಲು ಬರುವುದಿಲ್ಲ ಎಂದು ಹಿಂಸೆ ಕೊಟ್ಟಿದ್ದಾಳೆ. ನನಗೆ ಐದು ತಿಂಗಳ ಮಗು ಇದೆ. ಮಗುವಿನ ಆರೋಗ್ಯ ಸರಿ ಇಲ್ಲದ ಕಾರಣ ಸ್ವಲ್ಪ ದಿನ ನಾನು ಹೊರಗಡೆ ದುಡಿಯಲಿಕ್ಕೆ ಹೋಗಿರಲಿಲ್ಲ. ಆದ್ದರಿಂದ ನನ್ನ ಜೊತೆ

ಜಗಳ ತೆಗೆಯುತ್ತಾರೆ. ನನ್ನ ಗಂಡ ಪಾಂಡುನಾಯ್ಕ ಬೆಂಗಳೂರಿಗೆ ದುಡಿಯಲು ಹೋಗಿದ್ದನು. ೧೫ ದಿನಗಳ ಹಿಂದೆ ಬಂದಾಗ ಅವನು ಮತ್ತು ಅವನ ಅಣ್ಣ ದೂದ್ಯನಾಯ್ಕ ಇವರು ಸೇರಿ ಮಾನಸಿಕ ಮತ್ತು ದೈಹಿಕವಾಗಿ ಕಿರುಕುಳ ನೀಡಿದರು. ಆ ದಿನ ರಾತ್ರಿ ೧೧.೩೦ ಗಂಟೆಗೆ ನನ್ನ ಮೈಯಲ್ಲಿ ಆರಾಮ ಇರಲಿಲ್ಲದ ಕಾರಣ ಮನೆಯಲ್ಲೇ ಮಲಗಿದ್ದೆನು. ಆಗ ಗಂಡ, ಅತ್ತೆ, ಬಾವ ಸೇರಿ ನಿನ್ನದು ದಿನಾ ಇದೇ ಗೋಳು ಆಯ್ತು, ಕೂಲಿ ಕೆಲಸಕ್ಕೂ ಹೋಗಲ್ಲ, ಮನೆಯಲ್ಲಿ ಕೆಲಸನೂ ಮಾಡಲ್ಲ ಎಂದು ಹೊಡೆದು ಇನ್ನೂ ಮುಂದೆ ಇದೇ ರೀತಿ ಮಾಡಿದರೆ ನಿನ್ನ ಪ್ರಾಣ ಉಳಿಸುವುದಿಲ್ಲ ಎಂದು ಮನೆಯಿಂದ ಹೊರಗೆ ದಬ್ಬಿ ಪ್ರಾಣ ಬೆದರಿಕೆ ಹಾಕಿದ್ದಾರೆ" ಎಂದು ತನ್ನ ಕಷ್ಟವನ್ನು ತೋಡಿಕೊಂಡಿದ್ದಾಳೆ. ಇದೇ ರೀತಿಯಲ್ಲಿ ಹಡಗಲಿ ಪೋಲೀಸ್ ಠಾಣೆಯಲ್ಲಿ ಪ್ರಕರಣ CRNO ೨/೦೭, ೪೯೮ (ಎ) ೩೨೪, ೫೦೪, ೫೦೬, ದಾಖಲಾಗಿದ್ದು, ಇದು ಇನ್ನೂ ನ್ಯಾಯಾಲಯದಲ್ಲಿ ಕೇಸು ನಡೆಯುತ್ತಿದೆ.

೩. ಉಮಾ

೨೦ ವರ್ಷದ ಉಮಾ ೨೯ ವರ್ಷದ ಗಂಡ ರಾಜಪ್ಪ ನಾಯಕ ಜನಾಂಗಕ್ಕೆ ಸೇರಿದ್ದು, ಕೂಲಿ ಕೆಲಸ ಮಾಡಿಕೊಂಡು ಹೂವಿನ ಹಡಗಲಿ ತಾಲ್ಲೂಕು ಇಟ್ಟಿಗಿ ಗ್ರಾಮದಲ್ಲಿ ವಾಸವಾಗಿದ್ದಾರೆ. ಉಮಾ ಹೇಳಿದಂತೆ "ಮದುವೆಯಾಗಿ ೬ ತಿಂಗಳು ಮಾತ್ರ ಚೆನ್ನಾಗಿ ಇದ್ದೆವು. ೫೦ ವರ್ಷದ ಭಾವ, ೨೦ ವರ್ಷದ ಮೈದುನ, ೪೮ ವರ್ಷದ ಅತ್ತೆ, ಇವರುಗಳ ಜೊತೆ ಗಂಡನು ಸಹ ನನಗೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿದ್ದಾರೆ. ನೀನು ಅವರನ್ನು ನೋಡ್ತಿಯ ಇವರನ್ನು ನೋಡ್ತಿಯ ಅಂತ ನನ್ನ ಶೀಲದ ಬಗ್ಗೆ ಸಂಶಯಪಟ್ಟು, ಮಾನಸಿಕವಾಗಿ ಹಿಂಸೆ ನೀಡಿರುತ್ತಾರೆ. ಹೊಡೆಯುವುದು, ಒದೆಯುವುದು, ಬೈಯುವುದು ಮಾಡುತ್ತಾರೆ. ಈ ಹಿಂಸೆಯನ್ನು ತಾಳಲಾರದೇ ತವರುಮನೆಗೆ ಬಂದು ತಂದೆ ತಾಯಿಯ ಜೊತೆ ವಾಸವಾಗಿದ್ದೆ. ಅಲ್ಲಿಗೆ ೨೩.೦೪.೨೦೦೭ ರಂದು ರಾತ್ರಿ ನನ್ನ ಗಂಡ ಬಂದು ನನ್ನನ್ನು ಕರೆದುಕೊಂಡು ಹೋಗುವ ನೆಪ ಹೇಳಿ ದೈಹಿಕವಾಗಿ ಹಿಂಸೆ ನೀಡಿರುತ್ತಾರೆ". ಹೀಗಾಗಿ ಹೂವಿನ ಹಡಗಲಿ ತಾಲೂಕಿನ ಇಟ್ಟಿಗಿ ಗ್ರಾಮದ ಪೋಲೀಸ್ ಠಾಣೆಯಲ್ಲಿ CRNO ೨೮/೦೭, ೪೯೮ (ಎ) ೩೨೩, ೫೦೪, ೩೪ IPC Section ಅಡಿಯಲ್ಲಿ ೨೪.೦೪.೨೦೦೭ ರಂದು ಪ್ರಕರಣ ದಾಖಲಾಗಿದ್ದು, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆಕೆಯ ಮನೆಯವರನ್ನು ಕರೆಯಿಸಿ ಮತ್ತು ಊರಿನ ಕೆಲ ಹಿರಿಯರು ಎಲ್ಲಾ ಸೇರಿ ಹೊಂದಾಣಿಕೆ ಮಾಡಿ ಈ ಪ್ರಕರಣವನ್ನು ನ್ಯಾಯಾಲಯದವರೆಗೆ ಹೋಗಲು ಬಿಡದೇ ಇಲ್ಲೇ ಸರಿ ಮಾಡಿ ಇತ್ಯರ್ಥ ಮಾಡಿ ಕಳುಹಿಸಲಾಗಿದೆ. ಇದರಿಂದ ಆ ಮಹಿಳೆಗೆ ನಿರೀಕ್ಷಿಸಿದ ನ್ಯಾಯ ಸಿಕ್ಕಿರುವುದಿಲ್ಲ.

೪. ಯಶಸ್ವಿನಿ

"ನನ್ನ ವಿವಾಹವಾಗಿ ೮ ವರ್ಷಗಳು ಆಗಿವೆ. ಗಂಡನ ಮನೆಯಲ್ಲಿ ತುಂಬಾ ಕಿರುಕುಳ ಅನುಭವಿಸಿ ಅದನ್ನು ತಡೆಯಲಾರದೆ ಗಂಡನನ್ನು ಬಿಡಬೇಕಾಯಿತು. ವಿವಾಹವಾಗಿ ನಾಲ್ಕು ವರ್ಷಗಳಲ್ಲಿ ತಾಯಿಯ

ಮನೆ ಸೇರಿದೆ. ನನಗೆ ಮಕ್ಕಳಿಲ್ಲ. ಮಕ್ಕಳಾಗದಿರುವುದಕ್ಕೆ ಸದಾ ನನಗೆ ಅತ್ತೆ ಮನೆಯಲ್ಲಿ ಹಿಂಸೆಗೆ ಕಾರಣವಾಯಿತು. ಈ ಪರಿಸ್ಥಿತಿಯಲ್ಲಿ ನಾನು ಕೋರ್ಟಿಗೆ ಹೋಗಿ ಪರಸ್ಪರ ಒಪ್ಪಿಕೊಂಡು ಡೈವರ್ಸ್ ಮಾಡಿಕೊಂಡೆವು. ಡೈವರ್ಸ್ ಆಗಿ ಮೂರು ವರ್ಷಗಳೂ ಆಗಿವೆ. ಕೆಲವು ಹಿರಿಯರ ಸಹಾಯದಿಂದ ನನಗೆ ಕೆಲಸವೂ ಸಿಕ್ಕಿದೆ. ಈಗ ಜೀವನ ಉತ್ತಮವಾಗಿದೆ. ಆದರೆ ಒಂಟಿತನ ನನಗೆ ಸಹಿಸಲಾಗದ ಹಿಂಸೆಯಾಗಿದೆ".

೫. ಮಂಗಳಮ್ಮ

"ನನ್ನ ಗಂಡನಿಗೆ ಇಬ್ಬರು ಹೆಂಡತಿಯರು. ಮೊದಲನೇ ಹೆಂಡತಿಗೆ ಒಂದು ಗಂಡು, ನಾಲ್ಕು ಜನ ಹೆಣ್ಣುಮಕ್ಕಳು. ಎಲ್ಲಾ ಹೆಣ್ಣುಮಕ್ಕಳಿಗೂ ಗಂಡು ಮಗನಿಗೂ ಮದುವೆಯಾಗಿದೆ. ಎರಡನೇ ಹೆಂಡತಿಯಾದ ನನಗೆ ಎರಡು ಹೆಣ್ಣುಮಕ್ಕಳಿವೆ. ಮದುವೆಯ ವಯಸ್ಸಿಗೆ ಬಂದಿದ್ದಾರೆ. ನನ್ನ ಗಂಡ ತೀರಿಕೊಂಡು ಎಂಟು ತಿಂಗಳುಗಳಾಗಿವೆ. ಹಿರಿಯ ಹೆಂಡತಿ ಮತ್ತು ಅವರ ಮಕ್ಕಳು ಸೇರಿಕೊಂಡು ನನ್ನನ್ನು ಹೊರಗೆ ಹಾಕಿದ್ದಾರೆ ಹಾಗೂ ಆಸ್ತಿ ಮತ್ತು ಮನೆಯಲ್ಲಿ ಯಾವುದೇ ಪಾಲು ಇಲ್ಲವೆಂದು ಹೇಳುತ್ತಾರೆ ಹಾಗೂ ನನ್ನ ಗಂಡನ ಇನ್ಷ್ಯೂರೆನ್ಸ್ ಹಣ ಕೊಡುವುದಿಲ್ಲ ಎಂದು ಹೇಳುತ್ತಾರೆ. ಇದರಿಂದ ನನಗೆ ತುಂಬಾ ಮಾನಸಿಕ ಹಿಂಸೆಯಾಗಿದೆ. ಈ ನಿಟ್ಟಿನಲ್ಲಿ ನಾನು ಕಾನೂನಿನ ಮೊರೆ ಹೋಗಿದ್ದೇನೆ. ಅದು ತುಂಬಾ ವಿಳಂಬವಾಗುತ್ತಿದೆ".

೬. ಚಂದ್ರಮ್ಮ

"ನನಗೆ ಮದುವೆಯಾಗಿ ಎರಡು ವರ್ಷವಾಗಿದೆ. ನಾನು ಶಾಲೆ ಕಲಿತಿಲ್ಲ, ರಾತ್ರಿ ಶಾಲೆಯಲ್ಲಿ ಸಹಿ ಮಾಡುವುದನ್ನು ಮಾತ್ರ ಕಲಿತಿದ್ದೇನೆ. ನನ್ನ ಗಂಡ ಹೊಡಿಯೋದು, ಬಡಿಯೋದು ಮಾಡಿ ಚಿತ್ರಹಿಂಸೆ ಕೊಟ್ಟು, ಮನೆ ಬಿಟ್ಟು ಕಳಿಸಿ ಒಂದು ವರ್ಷವಾಯಿತು. ಎಷ್ಟೋ ಬಾರಿ ರಾಜಿ ಮಾಡಿಕೊಳ್ಳಲು ನಾನು ನನ್ನ ತವರಿನವರೊಂದಿಗೆ ಪ್ರಯತ್ನಪಟ್ಟರೂ, ನನ್ನ ಗಂಡನಿಗೆ ಡೈವರ್ಸ್ ಬೇಕಾದ ಕಾರಣ ಅವರು ಈಗಾಗಲೇ ಬೇರೆ ಹುಡುಗಿಯನ್ನು ನೋಡಿಕೊಂಡಿದ್ದಾರೆಂದು ತಿಳಿದು ಬಂದಿದೆ. ನನಗೆ ಬಲವಂತ ಮಾಡಿ ಇಷ್ಟವಿಲ್ಲದಿದ್ದರೂ ರುಜು ಹಾಕಿಸಿಕೊಂಡು ಡೈವರ್ಸ್ ಅರ್ಜಿ ಕೊಟ್ಟಿದ್ದಾರೆ. ಕೋರ್ಟಿನಲ್ಲಿ ನನ್ನದೇನು ಅಡ್ಡಿಯಿಲ್ಲ ಎಂದು ಹೇಳಬೇಕೆಂದು ಬಲವಂತ ಮಾಡುತ್ತಿದ್ದಾರೆ. ನನಗೆ ಕೋರ್ಟಿಗೆ ಹೋಗಲು ಇಷ್ಟವಿಲ್ಲ. ಹೋದರೂ ಸಹ ನನ್ನನ್ನು ಬಲವಂತ ಮಾಡಿ ರುಜು ಹಾಕಿಸಿಕೊಂಡಿದ್ದಾರೆ ಎಂಬ ನಿಜಾಂಶವನ್ನು ಹೇಳಿದರೆ ನನಗೆ ತೊಂದರೆಯಾಗಬಹುದೆಂದು ಆತಂಕದಿಂದ ಬಳಲುತ್ತಿದ್ದೇನೆ".

೭. ಬೊಮ್ಮಕ್ಕ

ಕೂಡ್ಲಿಗಿಯ ೩೫ ವರ್ಷದ ಬೊಮ್ಮಕ್ಕ ಗಂಡ ಹನುಮಂತಪ್ಪ ನನಗೆ ಮೂರು ಹೆಣ್ಣುಮಕ್ಕಳು. ನಾಲ್ಕನೆಯದು ಗಂಡು ಮಗು. ಗಂಡ ಬರೀ ಹೆಣ್ಣು ಮಕ್ಕಳು ಆಗಿದ್ದರಿಂದ ನಾಲ್ಕನೆಯವನು ನನಗೆ

ಹುಟ್ಟಿಲ್ಲ, ಅದು ಬೇರೆಯವರಿಗೆ ಹುಟ್ಟಿದೆ. ನಿನಗೆ ಬೇರೆಯವರ ಜೊತೆ ಸಂಬಂಧವಿದೆ ಎಂದು ಅನುಮಾನ ಪಡುತ್ತಿದ್ದಾರೆ. ಅಡುಗೆ ಮಾಡಿ ಎಲ್ಲರೂ ಊಟ ಮಾಡಿದ ನಂತರ ನಾನು ಊಟ ಮಾಡಲು ಉಳಿಸಿದ ಊಟದಲ್ಲಿ ನೀರು ಹಾಕಿ ಬಿಡುತ್ತಿದ್ದ. ಬೇರೆ ಏನಾದರೂ ಮಾಡಿಕೊಳ್ಳಬೇಕು ಎಂದು ಒಲೆಯ ಹತ್ತಿರ ಹೋದರೆ ಒಲೆಯಲ್ಲಿ ತನ್ನ ಕಾಲು ಇಟ್ಟು ಬಿಡುತ್ತಿದ್ದ. ಹೀಗೆ ದಿನಾಲು ಉಪವಾಸವಿರುತ್ತಿದ್ದೆ. ಕೂಲಿ ಕೆಲಸಕ್ಕೆ ಯಾರಾದರೂ ನನ್ನನ್ನು ಕರೆದರೆ ಅವರ ಹತ್ತಿರ ಹೋಗಿ ಇವಳು ಸರಿ ಇಲ್ಲ. ನಿಮ್ಮ ಗಂಡಂದಿರ ತಲೆಕೆಡಿಸಿ ಬಿಡುತ್ತಾಳೆ ಎಂದು ಹೇಳಿ ಬರುತ್ತಿದ್ದ. ಅವರು ಕೆಲಸಕ್ಕೆ ನನ್ನನ್ನು ಕರೆದುಕೊಳ್ಳುತ್ತಿರಲಿಲ್ಲ. ತಾನಾದರೂ ದುಡಿದು ತರುತ್ತಿರಲಿಲ್ಲ. ಆತ ದುಡಿದಿದ್ದನ್ನು ಎಲ್ಲಾ ಕುಡಿದು ಬಿಡುತ್ತಿದ್ದ. ಮನೆ ಖರ್ಚಿಗೆ ಏನೂ ಕೊಡುತ್ತಿರಲಿಲ್ಲ. ಮನೆಯಲ್ಲಿ ಮಕ್ಕಳು ಉಪವಾಸವಿರುತ್ತಿದ್ದರು. ನಾನಾದರೂ ದುಡಿಯಲಿಕ್ಕೆ ಹೋಗುತ್ತೇನೆ ಎಂದರೆ ಅಲ್ಲಿ ಹೋಗಿ ಕಲ್ಲು ಹಾಕುತ್ತಿದ್ದ ಮಕ್ಕಳು ಉಪವಾಸ ಇರುವುದಕ್ಕೆ ಆಗದೆ ನಮ್ಮ ತಾಯಿಯ ಮನೆಗೆ ಹೋಗಿ ಊಟ ಮಾಡಿ ಬರುತ್ತಿದ್ದರು. ಇದರಿಂದ ಪ್ರತಿದಿನ ತುಂಬಾ ಚಿತ್ರಹಿಂಸೆಯನ್ನು ಅನುಭವಿಸುತ್ತಿದ್ದೇನೆ.

೮. ಸಾವಿತ್ರಮ್ಮ

೨೮ ವರ್ಷದ ಸಾವಿತ್ರಮ್ಮ ಗಂಡ ಬಸವರಾಜ. "ನನಗೆ ಮದುವೆಯಾಗಿ ೨ ವರ್ಷವಾಗಿದೆ. ಗಂಡ ಸರಿಯಾಗಿ ದುಡಿಯುವುದಿಲ್ಲ. ನಾನೇ ಕೂಲಿನಾಲಿ ಮಾಡಿ ಕತ್ತೆ ದುಡಿದಂಗೆ ದುಡಿದರೂ ಬಾಳಿಗೆ ಒಂದಿಷ್ಟು ನೆಮ್ಮದಿ ಇಲ್ಲ. ಏನ್‌ಮಾಡ್ತಿಯ ಕುಡಿಯೋ ಗಂಡನ ಕಟ್ಕೊಂಡು ಬದುಕು ಸಾಕು ಸಾಕಾಗಿದೆ. ಹೊಲಮನಿಯಾಗ ದುಡಿಯುವುದಲ್ಲದೆ ಕುಡಿದು ಬಂದ ಗಂಡ ಒದ್ದರೆ ಒದೆಸಿಕೊಳ್ಳಬೇಕು. ಎದುರು ಮಾತಾಡೋಹಾಗಿಲ್ಲ. ಏನಾದ್ರು ಅಂದ್ರೆ ಮನೆಯಿಂದ ಹೊರಗೆ ಆಕ್ತೀನಿ ಅಂತಾನೆ. ಏನ್ ಮಾಡೋದು ಎಲ್ಲಾ ನಮ್ಮ ಹಣೆ ಬರಹ" ಎಂದು ನೋವಿನಿಂದ ಹೇಳಿಕೊಂಡಳು.

೯. ಲಲಿತ

೩೦ ವರ್ಷದ ಲಲಿತ ಗಂಡ ಮಲ್ಲಣ್ಣ. ಮದುವೆಯಾಗಿ ಮೂರು ವರ್ಷಗಳಾಗಿವೆ. ನನ್ನ ಗಂಡ ನನ್ನ ಮೇಲೆ ಅನುಮಾನ ಪಡುತ್ತಿದ್ದರು. ಯಾರಾದರೂ ಅವರಿಗೆ ನಿನ್ನ ಹೆಂಡ್ತಿ ಹೇಗೆ ಅಂತ ಕೇಳಿದರೆ ಸಾಕು ಮತ್ತು ಯಾರ ಜೊತೆನಾದ್ರು ಚೆನ್ನಾಗಿ ಮಾತನಾಡಿದರೆ ಅಥವಾ ಅವರು ನಿನ್ನ ಹೆಂಡತಿ ಒಳ್ಳೆಯವಳು. ಚೆನ್ನಾಗಿ ಮಾತನಾಡುತ್ತಾಳೆ ಎಂದು ಹೇಳಿದರೆ ಸಾಕು. ದಿನಾಲು ಬಂದು ಹೊಡೆಯುತ್ತಿದ್ದರು. ನಾನು ಕಿರುಚುವುದು. ಹೊರಗಡೆ ಕೇಳಿಸಬಾರದು ಎಂದು ಟೇಪ್‌ರಿಕಾರ್ಡರ್ ಹಾಕಿ ಹೊಡೆಯುತ್ತಿದ್ದರು. ನನ್ನ ಮಕ್ಕಳು ಹೊಡೆಯ ಬೇಡಪ್ಪ ಅಂತ ಕಾಲು ಹಿಡಿದುಕೊಂಡರೂ ಬಿಡುತ್ತಿರಲಿಲ್ಲ. ಅವರನ್ನೂ ಸೇರಿಸಿ ಹೊಡೆಯುತ್ತಿದ್ದರೂ ನಾನು ಊರಿಗೆ ಹೋಗುತ್ತೇನೆ ಎಂದು ಮನೆಯಿಂದ ಹೇಳಿ ಹೋಗುತ್ತಿದ್ದರು. ಆದರೆ

ಊರಿಗೆ ಹೋಗುತ್ತಲೇ ಇರಲಿಲ್ಲ. ಇಲ್ಲೇ ಹೋಟಲ್‌ನಲ್ಲಿ ಇದ್ದು, ರಾತ್ರಿ ಮನೆಯ ಹತ್ತಿರ ಬಂದು ಯಾರಾದರೂ ಬರುತ್ತಿದ್ದಾರೋ ಎಂದು ನೋಡುತ್ತಿದ್ದರು. ನನ್ನ ಯಾರು ನೋಡಬಾರದು ಎಂದು ನನ್ನ ಒಳಗಡೆ ಕಳುಹಿಸಿ ಬೀಗ ಹಾಕಿ ಕೆಲಸಕ್ಕೆ ಹೋಗುತ್ತಿದ್ದರು. ಹೊರಗಡೆ ಎಲ್ಲೂ ಕಳುಹಿಸುತ್ತಿರಲಿಲ್ಲ. ತವರು ಮನೆಗಂತೂ ಕಳುಹಿಸುತ್ತಲೇ ಇರಲಿಲ್ಲ. ನಮ್ಮ ಸಂಬಂಧಿಕರಲ್ಲಿ ಪುರುಷರನ್ನು ಮಾತನಾಡಿಸುವ ಹಾಗೆ ಇಲ್ಲ. ಮಾತನಾಡಿಸಿದರೆ ಸಾಕು ಹೊಡೆಯುತ್ತಿದ್ದರು. ಈಗ ಒಂದು ರೀತಿಯಲ್ಲಿ ಆರಾಮದಿಂದ ಇದ್ದೇನೆ. ಅವರ ಆರೋಗ್ಯ ಸರಿ ಇಲ್ಲದ ಕಾರಣ ಹೃದಯಘಾತದಿಂದ ಸತ್ತು ಒಂದು ತಿಂಗಳಾಗಿವೆ. ಗಂಡನಿಲ್ಲ ಎನ್ನುವ ಒಂದು ಕೊರಗನ್ನು ಬಿಟ್ಟರೆ ಅವರಿಂದ ಅನುಭವಿಸಿದ ಹಿಂಸೆಯಿಂದ ಆರಾಮದಿಂದ ಇದ್ದೇನೆ. ನಾನು ಅನುಭವಿಸಿದ ಹಿಂಸೆ ಯಾವ ಹೆಂಗಸಿಗೂ ಬೇಡ ಎನ್ನುತ್ತಾಳೆ.

೧೦. ಸವಿತ

೨೩ ವರ್ಷದ ಸವಿತ ೩೦ ವರ್ಷದ ಗಂಡ ನಾಗರಾಜನು ನನಗೆ ಮದುವೆಯಾಗಿ ಆರು ತಿಂಗಳತನಕ ಚೆನ್ನಾಗಿ ತಂದು ಹಾಕುತ್ತಿದ್ದ. ಊಟಕ್ಕೆ, ಬಟ್ಟೆಗೆ ಏನೂ ಕಡಿಮೆ ಮಾಡಿಲ್ಲ. ಆದರೆ ಇವನು ತಂದೆ ತಾಯಿಯ ಒತ್ತಾಯಕ್ಕೆ ನಿನ್ನನ್ನು ಮದುವೆಯಾಗಿದ್ದೇನೆ. ನೀನು ನೋಡಲು ಅಷ್ಟು ಚೆನ್ನಾಗಿಲ್ಲ. ಕಪ್ಪಾಗಿದ್ದೀಯ. ಆದ್ದರಿಂದ ನಾನು ಬೇರೆಯವಳನ್ನು ಮದುವೆಯಾಗುತ್ತೇನೆ. ಅದಕ್ಕೆ ನಿನ್ನ ಒಪ್ಪಿಗೆ ಬೇಕು ಎಂದು ದಿನಾಲು ಪೀಡಿಸುತ್ತಾನೆ. ಇದನ್ನು ನಾನು ಒಪ್ಪುತ್ತಿಲ್ಲ. ಅದಕ್ಕಾಗಿ ದಿನಾಲು ಹೊಡೆಯುವುದು, ಬೈಯುವುದು. ಬಾಯಿಗೆ ಬಂದಂತೆ ಸಿಕ್ಕಾಪಟ್ಟೆ ಹೊಲಸು ಮಾತುಗಳನ್ನು ಆಡುತ್ತಾನೆ. ಈ ವಿಷಯವನ್ನು ನನ್ನ ತವರಿನವರಿಗೆ ತಿಳಿಸಿದರೆ ಅದೆಲ್ಲ ಹೊಸತರದಲ್ಲಿ ಹಾಗೆ ನೀನೆ ಅವನಿಗೆ ಸರಿಯಾಗಿ ಹೊಂದಿಕೊಂಡು ಹೋಗು ಎಂದು ಹೇಳುತ್ತಾರೆ. ಇಲ್ಲಿ ಗಂಡನ ಮನೆಯಲ್ಲಿ ಹಿರಿಯರು ಅನ್ನುವರು ಯಾರೂ ಇಲ್ಲ. ಗಂಡನ ತಮ್ಮ ಮಾತ್ರ ಇದ್ದಾನೆ. ಅವನು ಏನೇ ಹೇಳಿದರೂ ಅವನ ಮಾತು ನಡೆಯುವುದಿಲ್ಲ. ಹೀಗಾಗಿ ಗಂಡನ ಜೊತೆಯಲ್ಲಿ ಬದುಕುವುದಕ್ಕೂ ಆಗ್ತಾ ಇಲ್ಲ. ಸಾಯೋದಕ್ಕೂ ಆಗ್ತಾ ಇಲ್ಲ. ಇದರಿಂದ ನನಗೆ ಆ ದೇವರು ನನ್ನನ್ನು ಕಪ್ಪಾಗಿ ಏಕೆ ಹುಟ್ಟಿಸಿದನೋ ಎಂದು ಜೀವನದಲ್ಲಿ ಜಿಗುಪ್ಸೆಯಾಗಿದೆ. ಇದರಿಂದಾಗಿ ಮಾನಸಿಕವಾಗಿ ತುಂಬಾ ಹಿಂಸೆ ಅನುಭವಿಸಿದ್ದೇನೆ. ಈಗ ಅವನು ಇನ್ನೊಂದು ಮದುವೆಯಾಗಿ ಬಂದಿದ್ದಾನೆ. ಏನ್ನೇ ಆಗಲಿ ಅವನು ನನ್ನ ಗಂಡ. ಅವನು ಸಂತೋಷವಾಗಿದ್ದರೆ ಸಾಕು ಮತ್ತು ಚಿತ್ರಹಿಂಸೆ ನೀಡುವುದು ಇನ್ನೂ ಮೇಲಾದರೂ ಕಡಿಮೆಯಾಗಬಹುದು ಎನ್ನುವ ಭರವಸೆಯ ಮೇಲೆ ಜೀವನ ಸಾಗಿಸುತ್ತಿದ್ದೇನೆ. ಇದಕ್ಕಾಗಿ ಯಾವುದೇ ರೀತಿಯ ಕಾನೂನಿನ ಮೊರೆ ಹೋಗಿದ್ದಿರಾ? ಎಂದು ಕೇಳಿದರೆ ನನಗೆ ಕಾನೂನಿನ ಬಗ್ಗೆ ತಿಳುವಳಿಕೆ ಇಲ್ಲ. ಒಂದು ವೇಳೆ ನಾನು ಕಾನೂನಿನ ಮೊರೆ ಹೋದರೂ ಸಹ ಇದರ ಸಲುವಾಗಿ ಅವನು ಏನೂ ಬೇಕಾದರೂ ಮಾಡುತ್ತಾನೆ. ಆದ್ದರಿಂದ ಸುಮ್ಮನಿರುವುದೇ ಒಳ್ಳೆಯದೆಂದು ಸುಮ್ಮನಿದ್ದೇನೆ.

೧೧. ಗಂಗಮ್ಮ

೨೫ ವರ್ಷದ ಚನ್ನಪ್ಪನಿಗೆ ೨೩ ವರ್ಷದ ಗಂಗಮ್ಮಳನ್ನು ತಂದೆಯಾದ ದೇವಪ್ಪ ಹಂದ್ರಾಳ್ ಮದುವೆ ಮಾಡಿಕೊಟ್ಟು ೨ ವರ್ಷಗಳಾಗಿದ್ದವು. ಮದುವೆ ಸಂದರ್ಭದಲ್ಲಿ ವರದಕ್ಷಿಣೆಯಾಗಿ ಅಳಿಯನಿಗೆ ನಾಲ್ಕು ತೊಲೆ ಬಂಗಾರ, ಬಾಂಡೆ ಸಾಮಾನು ಜೊತೆಗೆ ೪೦,೦೦೦ ಸಾವಿರ ರೂಪಾಯಿ ಹಣ ಕೊಟ್ಟಿದ್ದೆವು. ಇದಕ್ಕೆ ಅವರಿಗೆ ತೃಪ್ತಿಯಾಗಿರಲಿಲ್ಲ. ಇದರ ಸಲುವಾಗಿ ನಮ್ಮ ಮಗಳಿಗೆ ಇನ್ನೂ ೮,೦೦೦ ರೂಪಾಯಿಗಳು ಬಾಕಿ ಬರಬೇಕು. ಅದರ ಜೊತೆಗೆ ಇನ್ನೂ ಹೆಚ್ಚಿಗೆ ಹಣವನ್ನು ತವರಿನಿಂದ ತೆಗೆದುಕೊಂಡು ಬಾ ಎಂದು ಪ್ರತಿದಿನ ಹಿಂಸೆಯನ್ನು ಗಂಡ, ಅತ್ತೆ, ಮಾವ, ಮೈದುನ ಎಲ್ಲರೂ ಸೇರಿ ಬಡಿಯುವುದು, ಹೊಡೆಯುವುದು, ಬಾಯಿಗೆ ಬಂದಂತೆ ಬೈಯ್ಯುತ್ತಿದ್ದುದನ್ನು ನಮಗೆ ನಮ್ಮ ಮಗಳು ತಿಳಿಸುತ್ತಿದ್ದಿಲ್ಲ. ಅವರು ಕೊಡುತ್ತಿದ್ದ ಹಿಂಸೆಯನ್ನು ಸಹಿಸಿಕೊಂಡಿದ್ದಳು. ಕಾರಣ ನಮ್ಮದು ತುಂಬಾ ಬಡ ಕುಟುಂಬ ಹೇಗೋ ಸಾಲ ಸೂಲ ಮಾಡಿ ಮದುವೆ ಮಾಡಿಕೊಟ್ಟಿದ್ದೆವು. ಆದರೆ ಅವರುಗಳು ಈ ರೀತಿಯಾಗಿ ಕೊಲೆ ಮಾಡುತ್ತಾರೆಂದು ನಂಬಿದ್ದಿಲ್ಲ. ಆಕೆಯನ್ನು ದಿನಾಂಕ ೦೩.೦೫.೨೦೦೬ ರಂದು ಸಾಯಿಸಿ, ಆಕೆನೇ ನೇಣು ಹಾಕಿಕೊಂಡು ಸತ್ತಿರುವುದಾಗಿ ಸೃಷ್ಟಿಸಿರುತ್ತಾರೆ. ಇದರ ಸಂಬಂಧ ದಿನಾಂಕ ೧೨.೦೫.೨೦೦೬ ರಂದು ಹೂವಿನಹಡಗಲಿ ಪೋಲೀಸ್ ಠಾಣೆಯಲ್ಲಿ CRNO ೫೫/೦೬, ೪೯೮ (ಎ) ೩೦೪(ಬಿ) ೩೦೬ IPC Section ೩೪ DP Act ಅಡಿಯಲ್ಲಿ ಪ್ರಕರಣ ದಾಖಲಾಗಿದೆ. ಇದು ಇನ್ನೂ ಕೇಸು ನ್ಯಾಯಾಲಯದಲ್ಲಿ ನಡೆಯುತ್ತಿದೆ.

ಪ್ರಜಾವಾಣಿ ಪತ್ರಿಕೆಯ ಭೂಮಿಕಾ ಪುರವಣಿಯಲ್ಲಿ ರೇಖಾ ಕಿಲಾರ ಕೌಟುಂಬಿಕ ಹಿಂಸೆಯ ಬಗ್ಗೆ ಅಂಗನೆಗೆ ಕಾಯ್ದೆಯ ಅಭಯ ಎಂಬ ಶೀರ್ಷಿಕೆಯಲ್ಲಿ ಈ ಮೇಲಿನ ಪ್ರಕರಣವು ೦೪.೧೧.೨೦೦೬ ರಂದು ವರದಿಯಾಗಿದೆ.

೧೨. ಕೋಮಲೆ

ಕೋಮಲೆ ಅನಕ್ಷರಸ್ಥೆ ಮದುವೆಯಾಗಿ ೧೮ ವರ್ಷ ಆಗಿದೆ. ಇನ್ನೂ ಮಕ್ಕಳಾಗಿಲ್ಲ. ಈಕೆ ಇರುವಾಗಲೇ ತನ್ನ ಹತ್ತಿರದ ಸಂಬಂಧಿಕಳೊಬ್ಬಳನ್ನು ಮನೆಗೆ ತಂದಿಟ್ಟುಕೊಂಡ. ಆಕೆಯು ಗಂಡನ ಈ ವಿಷಯಕ್ಕಾಗಿ ಗಂಡನ ಜೊತೆ ಜಗಳ ಆಡಿಕೊಂಡು ಮನೆ ಬಿಟ್ಟು ತವರು ಸೇರಿದಳು. ಕೋಮಲ ಗಂಡನ ವಿರುದ್ಧ ವಿಚ್ಛೇದನಕ್ಕೆ ಅರ್ಜಿ ಹಾಕಿದಳು. ಆಗ ವಕೀಲರು ಇವರಿಬ್ಬರ ನಡುವೆ ರಾಜಿ ಮಾಡಿಸಿದರು. ಮನೆಗೆ ಕರೆತಂದ ಮತ್ತೊಬ್ಬ ಹೆಂಗಸನ್ನು ಹೊರ ಕಳಿಸುವಂತೆ ಈಕೆಯ ಗಂಡನಿಗೆ ತಾಕೀತು, ಮಾಡಿದರೂ ಎಲ್ಲವೂ ಸ್ವಲ್ಪ ದಿನ ಮಾತ್ರ. ಆಕೆ ಮನೆ ಬಿಟ್ಟು ಹೋದರೇನು, ಅವಳಿರುವಲ್ಲಿಗೇ ಈತ ಹೋಗಲಾರಂಭಿಸಿದ. ಕೆಲವರ್ಷಗಳ ನಂತರ ಆ ಹೆಂಗಸು ಅವನ ಮನೆಗೆ ಬಂದು ನೆಲೆಸಿದ್ದಾಳೆ. ಕೊನೆಗೆ ಕೋಮಲಗೆ

ಕಾನೂನಿನಿಂದಲೂ ಸೂಕ್ತ ನ್ಯಾಯ ಸಿಗಲಿಲ್ಲ. ಇತ್ತ ಗಂಡನಿಂದಲೂ ಸಹಬಾಳ್ವೆ ಸಿಗಲಿಲ್ಲ. ಆದರೂ ಗಂಡನ ಮನೆಯಲ್ಲೇ ಜೀವನ ಸಾಗಿದೆ. ಏನಾದರೂ ಅವನು ಗಂಡ ಎಂದು ಜೀವನ ಸಾಗಿಸುತ್ತಿದ್ದಾಳೆ.

೧೩. ರಮ್ಯ

ರಮ್ಯ ಪದವೀಧರೆ. ದುಡಿಯುತ್ತಿರುವಾಗಲೇ ಅಪ್ಪ-ಅಮ್ಮ ಒಪ್ಪಿದ ವರನಿಗೆ ಕೊರಳು ಕೊಟ್ಟಳು. ಈಕೆಯ ಇಷ್ಟ-ಕಷ್ಟ ಮನೆಯವರಿಗೆ ಬೇಕಿರಲಿಲ್ಲ. ಸಂಪ್ರದಾಯಸ್ಥ ಕುಟುಂಬ. ರಮ್ಯ ಓದುವಾಗ ಕೂಡ ಯಾವ ಹಾಸ್ಟೆಲ್‌ನಲ್ಲಿ ಇರಬೇಕು. ರೂಮ್‌ಮೇಟ್ ಯಾರಾಗಿರಬೇಕು ಎಂಬೆಲ್ಲ ನಿರ್ಬಂಧನಗಳು, ಈಕೆಯ ಮುಕ್ತ, ಮುಗ್ಧ ಮನಸ್ಸನ್ನು ಈ ಘಟನೆಗಳು ಆಗಲೇ ಘಾಸಿಗೊಳಿಸಿದ್ದವು. ತನ್ನ ಗಂಡನಿಗೆ ದೆಹಲಿಗೆ ವರ್ಗಾವಣೆಯಾಗಿದೆ ಹಾಗೂ ಕೈತುಂಬಾ ಸಂಬಳ ಬರುತ್ತಿದೆ ಎಂದು ರಮ್ಯ ಕೆಲಸಕ್ಕೆ ರಾಜಿನಾಮೆ ನೀಡಿಯೂ ಬಿಟ್ಟಳು. ಎರಡು ವರ್ಷಗಳಲ್ಲಿ ಒಂದು ಹೆಣ್ಣು ಮಗುವಿಗೂ ತಾಯಿಯಾದಳು. ಆನಂತರ ಮತ್ತೆ ಬೆಂಗಳೂರಿಗೆ ವರ್ಗಾವಣೆ. ಆಕೆ ಇನ್ನೊಂದು ಮಗುವಿಗೆ ತಾಯಿಯಾಗುವ ಹಂತದಲ್ಲಿದ್ದಾಳೆ. ಅದಕ್ಕೆ ಬಾಹ್ಯ ಪ್ರಪಂಚವನ್ನು ನೋಡುವ ಅದೃಷ್ಟ ಇದೆಯೋ ಇಲ್ಲವೋ ಗೊತ್ತಿಲ್ಲ. ಯಾಕೆ? ಅದು ಆಕೆಗೆ ಒಲ್ಲದ ಬಸಿರು? ರಾತ್ರಿ ಹಾಸಿಗೆಯಲ್ಲಿ ಮಾತ್ರ ಆತ ಗಂಡನ ವೇಷ ಧರಿಸುತ್ತಾನೆ. ಆಕೆಯ ಭಾವನೆಗಳು ಒತ್ತಟ್ಟಿಗಿರಲಿ. ಅವಳ ಮನಸ್ಸನ್ನು ಅರ್ಥಮಾಡಿಕೊಳ್ಳುವ ಸೌಜನ್ಯ ಮರೆತ್ತಿದ್ದಾನೆ. ಇವನ ಇಷ್ಟದಂತೆ ನಡೆದುಕೊಂಡರೂ ಅವನ ಅಸಹ್ಯ ವರ್ತನೆಗೆ ನಿಜದ ಕಾರಣ ತಿಳಿದಿಲ್ಲ. ಮೃಗದಂತೆ ಎರಗುತ್ತಾನೆ. ಆಕೆಯ ಮೃದು-ಮಧುರ ಮನಸ್ಸನ್ನು ಘಾಸಿಗೊಳಿಸಿದ್ದಾನೆ. ಈ ಬಸಿರನ್ನು ಉಳಿಸಿಕೊಳ್ಳಲೋ ಬೇಡವೋ ಎಂಬ ಗೊಂದಲ ರಮ್ಯಳನ್ನು ಕಾಡುತ್ತಿದೆ.

ಈ ಮೇಲಿನ ಪ್ರತಿಯೊಂದು ಪ್ರಕರಣಗಳಲ್ಲಿ ಮಹಿಳೆಯ ಮೇಲೆ ನಡೆಯುವ ಕೌಟುಂಬಿಕ ಹಿಂಸೆಯು ನಾನಾ ಬಗೆಯಲ್ಲಿ ಕಂಡು ಬರುತ್ತವೆ.

ಪ್ರಕರಣ-೯ರ ಲಲಿತ ಹೇಳುವ ಹಾಗೆ ಕೌಟುಂಬಿಕ ಹಿಂಸೆ ತಾಳಲಾರದೆ ಆಕೆಯು 'ನನ್ನ ಗಂಡ ಸತ್ತ ಕಾರಣ ನಾನು ಸಂತೋಷದಿಂದ ಇದ್ದೀನಿ. ಗಂಡನು ಇಲ್ಲ ಎನ್ನುವ ಕೊರಗು ಸ್ವಲ್ಪ ಬಿಟ್ಟರೆ ಮಾತ್ರ' ಈ ಮಾತು ಕುಟುಂಬದ ಒಳಗಡೆ ನಡೆಯುವ ಹಿಂಸೆಯ ತೀವ್ರತೆಯನ್ನು ಹೇಳುತ್ತದೆ. ಅದೇ ಪ್ರಕಾರ ಪ್ರಕರಣ-೧೨ರಲ್ಲಿ ಕೌಟುಂಬಿಕ ಹಿಂಸೆಯಿಂದ ಬೇಸತ್ತ ಕೋಮಲೆ ತನ್ನ ಗಂಡನಿಂದ ವಿಚ್ಛೇದನ ಪಡೆಯಲಿಕ್ಕೆ ಅರ್ಜಿ ಹಾಕಿದ್ದೇನೆ ಎನ್ನುವ ಮಾತಿನಿಂದ ಕುಟುಂಬ ಎನ್ನುವುದು ಅವಳಿಗೆ ಹಿಂಸೆಯ ನೆಲೆಯಾಗಿದೆ ಎಂದೆನಿಸಿದೆ. ಪ್ರಕರಣ-೧೩ರಲ್ಲಿ ರಮ್ಯ ಎಂಬಾಕೆ ಮನೆಯ ಗೌರವ, ಘನತೆ, ಅಂತಸ್ತಿಗೆ ಅಂಜಿದ್ದಾಳೆ. ಜೊತೆಗೆ ನೀನೆ ಗಂಡನ ಜೊತೆ ಹೊಂದಿಕೊಂಡು ಹೋಗು ಎನ್ನುವ ಅಪ್ಪ-ಅಮ್ಮನ ಹಿತನುಡಿ ಮುಂದಿನ ನಿರ್ಧಾರವನ್ನು ಕಟ್ಟಿ ಹಾಕಿದೆ.

• • •

ಅಧ್ಯಾಯ ೫

ಕೌಟುಂಬಿಕ ಹಿಂಸೆ : ಕಾನೂನು

ಅಧ್ಯಾಯ ೫

ಕೌಟುಂಬಿಕ ಹಿಂಸೆ : ಕಾನೂನು

ಭಾರತದ ಸಂವಿಧಾನ ಸ್ತ್ರೀ-ಪುರುಷರೆಂಬ ಭೇದವಿಲ್ಲದೆ ಭಾರತದ ಸಮಸ್ತ ನಾಗರಿಕರಿಗೂ ಸಮಾನ ಸ್ಥಾನಮಾನ, ಸಮಾನ ಅವಕಾಶಗಳು ಹಾಗೂ ಕಾನೂನಿನ ದೃಷ್ಟಿಯಲ್ಲಿ ಸಮಾನ ರಕ್ಷಣೆಯನ್ನು ನೀಡಿದೆ. ಮಹಿಳೆಯರ ಹಿತಾಸಕ್ತಿಯನ್ನು ಕಾಪಾಡಲು ಹಾಗೂ ಅವರ ಸ್ಥಾನಮಾನದಲ್ಲಿ ಸಾಮಾಜಿಕ, ಆರ್ಥಿಕ ಬದಲಾವಣೆಯನ್ನು ತರಲು ಅನೇಕ ಕಾನೂನುಗಳನ್ನು ರಚಿಸಲಾಗಿದೆ. ಆದರೂ ಸ್ವಾತಂತ್ರ್ಯ ಬಂದು ಅರ್ಧ ದಶಕ ಕಳೆದರೂ ಮಹಿಳೆಯರ ಮೇಲೆ ನಡೆಯುವ ಹಿಂಸೆ ಹಾಗೂ ಅಪರಾಧಗಳ ಸಂಖ್ಯೆ ಹೆಚ್ಚಾಗುತ್ತಲೇ ಇವೆ. ಅತ್ಯಾಚಾರ, ಹಿಂಸೆ, ಅವಹೇಳನ, ನಿಂದನೆಗಳಿಗೆ, ಜೀವಂತ ದಹನಕ್ಕೆ ಮಹಿಳೆ ಗುರಿಯಾಗುತ್ತಲೇ ಇದ್ದಾಳೆ. "ಈ ಹಿನ್ನೆಲೆಯಲ್ಲಿ ಕೌಟುಂಬಿಕ ಹಿಂಸೆ ಮತ್ತು ದಬ್ಬಾಳಿಕೆಗೆ ಗುರಿಯಾಗುವ ಮಹಿಳೆಯರ ಪರಿಸ್ಥಿತಿಯನ್ನು ಸುಧಾರಿಸುವ ದೃಷ್ಟಿಯಿಂದ ಜಾರಿಯಲ್ಲಿರುವ ಕಾನೂನಿನಲ್ಲಿ ತಿದ್ದುಪಡಿ ಮಾಡುವ ಮೂಲಕ ಮಹಿಳೆಯರ ವಿರುದ್ಧದ ಹಿಂಸೆಯನ್ನು ಒಂದು ದಂಡನೀಯ ಅಪರಾಧವನ್ನಾಗಿ ಮಾಡಲಾಗಿದೆ" (IPC Section ೪೯೮, ಎ).

ಸರಕಾರವು ಸಿದ್ಧಪಡಿಸಿರುವ ಈ ವಿಧೇಯಕದ ಲೋಪದೋಷಗಳನ್ನು ಗಮನಕ್ಕೆ ತೆಗೆದುಕೊಂಡು ವಿಸ್ತೃತ ಅಧ್ಯಯನ ನಡೆಸಿ ಲಾಯರ್ಸ್ ಕಲೆಕ್ಟ್ ವಿಮೆನ್ಸ್ ರೈಟ್ಸ್ ಇನಿಷಿಯೇಟೀವ್ (LCWRI) ಎಂಬ ಮಹಿಳಾ ಹಕ್ಕುಗಳ ಹೋರಾಟ ಸಂಸ್ಥೆ, ಮಹಿಳೆಯರ ವಿರುದ್ಧ 'ಕೌಟುಂಬಿಕ ಹಿಂಸೆ ನಿವಾರಣಾ ವಿಧೇಯಕ ೨೦೦೧'ರಲ್ಲಿ ಸಿದ್ಧಪಡಿಸಿತ್ತು. "ಇದರ ಉದ್ದೇಶವು ಹೆಚ್ಚುತ್ತಿರುವ ಕೌಟುಂಬಿಕ ಹಿಂಸೆಗೆ ಸಿವಿಲ್ ಕಾನೂನು ಮೂಲಕ ಪರಿಹಾರ ದೊರೆಯುವಂತೆ ಮಾಡುವುದು. ಕೌಟುಂಬಿಕ ಹಿಂಸೆಗೆ ಒಳಗಾಗಿ ನೊಂದವರಿಗೆ ರಕ್ಷಣೆ ನೀಡುವುದು. ಆದೇಶಗಳನ್ನು ಹೊರಡಿಸಲು ನ್ಯಾಯಾಲಯಗಳಿಗೆ ಅಧಿಕಾರ ನೀಡುವುದು ಇತ್ಯಾದಿ" ಈ ಸಂಗತಿಗಳನ್ನು ಈ ವಿಧೇಯಕ ಒಳಗೊಂಡಿತ್ತು.

ಈ ಮೊದಲು ಮಹಿಳಾ ಹಕ್ಕುಗಳಿಗೆ ಸಂಬಂಧಿಸಿದಂತೆ ಹಕ್ಕುಗಳಾದ 'ನಾಗರಿಕ ಹಕ್ಕು' ಹಾಗೂ 'ಮಾನವ ಹಕ್ಕು' ಹೇಳುವುದೇನೆಂದರೆ ಮಹಿಳೆಯ ಕುರಿತಾಗಿ ಸಂಪ್ರದಾಯಿಕ ಚಿಂತನೆಗಳು, ಗಂಡನ

ಹಿಂಸೆಯನ್ನು ಅನುಭವಿಸಿ ಬಾಳುವುದು ಹೆಂಡತಿಯ ಕರ್ತವ್ಯ ಎಂಬುದನ್ನು ಮುರಿಯಲು ಎಲ್ಲಾ ದಿಕ್ಕಿನಿಂದಲೂ ಒತ್ತಾಯವನ್ನು ತರಲಾಯಿತು. ಈ ನಿಟ್ಟಿನಲ್ಲಿ ಹಲವು ರಾಷ್ಟ್ರಗಳು ಈಗಾಗಲೇ ವಿವಿಧ ರೀತಿಯ ರಕ್ಷಕ ಕಾನೂನುಗಳನ್ನು ಜಾರಿಗೆ ತಂದಿವೆ. "ಅಮೇರಿಕದ ೨೨ ರಾಜ್ಯಗಳಲ್ಲೂ ಮತ್ತು ವಾಷಿಂಗ್ಟನ್ ಡಿಸಿಯಲ್ಲಿ ಗಂಡನಾದವನು ತನ್ನ ಹೆಂಡತಿಯೊಡನೆ ಬಾಳುತ್ತಿದ್ದರೂ ಅವಳ ಮೇಲೆ ಅತ್ಯಾಚಾರ ನಡೆಸಿದರೆ ಅದು ಶಿಕ್ಷಾರ್ಹ ಅಪರಾಧ ಎನಿಸುತ್ತದೆ. ಮಹಿಳೆಗೆ ತಾನು ಹೆಣ್ಣಾಗಿ, ಓರ್ವ ಪ್ರಜೆಯಾಗಿ ಎಲ್ಲಾ ರೀತಿಯ ಹಕ್ಕುಬಾಧ್ಯತೆಗಳು ದೊರೆಯುವಂತೆ ಶ್ರಮಿಸಿರುವ ಸ್ತ್ರೀವಾದ ಚಳುವಳಿಗಳು ಕೊನೆಗೂ ಯಶಸ್ವಿಯನ್ನು ಪಡೆದಿವೆ. ಮಹಿಳೆಯ ಮೇಲಿನ ನಡೆಯುವ ದೌರ್ಜನ್ಯ ಮಾನವ ಹಕ್ಕು ಉಲ್ಲಂಘನೆ ಎನಿಸುತ್ತದೆ ಎಂದು ಈಗಾಗಲೇ ಸ್ವೀಕೃತವಾಗಿದೆ."[8] ಮಾನವ ಹಕ್ಕು ಪ್ರತಿಪಾದನೆಯಲ್ಲಿ ಹಿಂಸಾಚಾರವನ್ನು ಈ ಕೆಳಗಿನಂತೆ ನಿರ್ವಚಿಸಿಕೊಳ್ಳಲಾಗಿದೆ.

"ಲಿಂಗಾಧಾರಿತ ಹಿಂಸಾಚಾರವು ದೈಹಿಕ, ಲೈಂಗಿಕ ಅಥವಾ ಮಾನಸಿಕ ತೊಂದರೆಗಳನ್ನು ಅಥವಾ ನೋವನ್ನು ಹೆಣ್ಣಿಗೆ ನೀಡುವ ರೀತಿಯಲ್ಲಿದ್ದರೆ, ಇದು ಸಾರ್ವಜನಿಕ ಅಥವಾ ವೈಯಕ್ತಿಕ ಬದುಕಿನ ನೆಲೆಗಳಲ್ಲಿ ಬಲ ಪ್ರಯೋಗ ನಿರಂಕುಶ ತಡೆಗಳ ರೂಪದಲ್ಲಿ ಹೆಣ್ಣಿಗೆ ಸ್ವತಂತ್ರವಾಗಿರಲು ಅವಕಾಶ ನೀಡದ ರೀತಿಯಲ್ಲಿದ್ದರೆ, ಇದನ್ನು ಹಿಂಸೆಯೆಂದು ಪರಿಗಣಿಸಲಾಗುವುದು"[9] (Artical-1, The Diclaration on the Elimination of Voilence Againest Women, 1993, UNO).

ಈ ರೀತಿಯಲ್ಲಿ ಕೌಟುಂಬಿಕ ಹಿಂಸಾಚಾರವನ್ನು, ಮಾನವ ಹಕ್ಕು ಉಲ್ಲಂಘನೆಯಾಗಿ ಪರಿಗಣಿಸುವುದು ಸಾಧ್ಯವಾಗಿದೆ. ಭಾರತದಲ್ಲಿ ಮಹಿಳಾ ದೌರ್ಜನ್ಯದ ವಿವಿಧ ಅಪರಾಧಗಳಿಗೆ ಈಗಾಗಲೇ ಅನೇಕ ರೀತಿಯ ರಕ್ಷಕ ಕಾನೂನುಗಳು ಜಾರಿಯಲ್ಲಿವೆ. ಭಾರತೀಯ ಸಂವಿಧಾನವು ನೀಡಿರುವ ಮೂಲಭೂತ ಹಕ್ಕುಗಳೊಂದಿಗೆ (ಭಾರತೀಯ ಸಂವಿಧಾನ ವಿಧಿನಿಯಮ, ೧೪, ೧೫, ೧೬) ಭಾರತೀಯ ದಂಡಸಂಹಿತೆ, ವಿಶೇಷ ಕಾನೂನುಗಳು, ಅವುಗಳ ತಿದ್ದುಪಡಿಗಳು ಮಹಿಳಾ ದೌರ್ಜನ್ಯಕ್ಕೆ ಸಂಬಂಧಿಸಿದಂತೆ ಹಲವು ಅಪರಾಧಗಳು ಈಗಾಗಲೇ ದಂಡರ್ಹವೆಂದು ಪರಿಗಣಿಸಿವೆ.

"ಭಾರತೀಯ ದಂಡ ಸಂಹಿತೆಯ ಸೆಕ್ಷನ್ ೪೯೮(ಎ)ರ ಅನ್ವಯ ಗಂಡ ಅಥವಾ ಗಂಡನ ಬಂಧುಗಳು ಒಬ್ಬ ಹೆಂಗಸಿನ ಮೇಲೆ ದೌರ್ಜನ್ಯ ನಡೆಸಿದರೆ, ಮಾನಸಿಕ, ದೈಹಿಕ ಕಿರುಕುಳ ನೀಡಿದರೆ ಅದು ದಂಡನಾರ್ಹ ಅಪರಾಧ ಎನಿಸುತ್ತದೆ. ದಂಡಸಂಹಿತೆಯಲ್ಲಿ ಈ ಕೆಳಗಿನವುಗಳನ್ನು ಅಪರಾಧಗಳೆಂದು ಗುರುತಿಸಲಾಗಿದೆ. ಅತ್ಯಾಚಾರ ಸೆಕ್ಷನ್ ೩೭೬, ಅಪಹರಣ ಸೆಕ್ಷನ್ ೩೬೩, ೩೭೩, ವರದಕ್ಷಿಣೆಗಾಗಿ ಹತ್ಯೆ ಅಥವಾ ಕೊಲೆ ಅಥವಾ ಅನಿಷ್ಟ ಪ್ರಯತ್ನಗಳು ಸೆಕ್ಷನ್ ೩೦೨, ೩೦೪ ಬಿ, ಚಿತ್ರಹಿಂಸೆ ದೈಹಿಕ ಮತ್ತು ಮಾನಸಿಕ ಹಿಂಸೆ ಸೆಕ್ಷನ್ ೪೯೮, ಪೀಡನೆ ಸೆಕ್ಷನ್ ೩೫೪, ೨೧ ವರ್ಷದೊಳಗಿನ ಹೆಣ್ಣುಮಕ್ಕಳ ಮಾರಾಟ ಸೆಕ್ಷನ್ ೩೬೬

(ಬಿ), - ಹೀಗೆ ದಂಡಸಂಹಿತೆಯಲ್ಲಿ ಕೌಟುಂಬಿಕ ಹಿಂಸಾಚಾರವನ್ನು ಪ್ರತ್ಯೇಕವಾಗಿ ನಿರ್ವಚಿಸಿ ನೋಡುವ ಅವಕಾಶವನ್ನು ನೀಡಲಾಗಿಲ್ಲ. ಭಾರತೀಯ ದಂಡ ಪ್ರಕ್ರಿಯಾ ಸಂಹಿತೆಯ ಸೆಕ್ಷನ್ ೧೯೮ (ಎ) ಅನ್ವಯ ಒಬ್ಬ ಮಹಿಳೆಯ ಗಂಡ ಅಥವಾ ಆತನ ಸಂಬಂಧಗಳು ಆಕೆಯನ್ನು ಕ್ರೌರ್ಯಕ್ಕೆ ಒಳಪಡಿಸುವ ಸಂದರ್ಭಗಳಲ್ಲಿ ಕ್ರಿಮಿನಲ್ ನ್ಯಾಯಾಲಯವು ಕ್ರಮ ತೆಗೆದುಕೊಳ್ಳಬಹುದು."[೫]

ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದ ಬಳಿಕ ಜಾರಿಗೆ ಬಂದಿರುವ ಈ ಕೆಳಗಿನ ವಿಶೇಷ ಕಾನೂನುಗಳು ಮಹಿಳೆಯರ ಪರವಾಗಿ ನಿಂತು ಕಾರ್ಯನಿರ್ವಹಿಸಿದೆ. ಅವುಗಳೆಂದರೆ "ವರದಕ್ಷಿಣೆ ನಿಷೇಧ ಅಧಿನಿಯಮ (೧೯೬೧) ತಿದ್ದುಪಡಿ (೧೯೮೪), ಅನೈತಿಕ ವ್ಯವಹಾರ ತಡೆಯುವಿಕೆ ಅಧಿನಿಯಮ (೧೯೫೬), ತಿದ್ದುಪಡಿ (೧೯೮೬), ಸತಿಪದ್ಧತಿ ತಡೆಯುವಿಕೆ ಅಧಿನಿಯಮ (೧೯೮೭), ಕೌಟುಂಬಿಕ ಹಿಂಸಾಚಾರದ ವಿರುದ್ಧ ಈಗಾಗಲೇ ಭಾರತೀಯ ವಕೀಲರ ಸಂಘಟನೆಯು ಒಂದು ಮಾದರಿಯನ್ನು ರಚಿಸಿ, ಈ ಕುರಿತು ಕ್ರಮ ತೆಗೆದುಕೊಳ್ಳುವಂತೆ ಹೇಳಿದ ಪ್ರಕಾರ ಮಹಿಳಾ ಆಯೋಗವು ಕೌಟುಂಬಿಕ ಹಿಂಸಾಚಾರದಿಂದ ಮಹಿಳೆಯರನ್ನು ರಕ್ಷಿಸಲು, ಕೌಟುಂಬಿಕ ಹಿಂಸಾಚಾರ ತಡೆ ಮಸೂದೆ ೧೯೯೪ರಲ್ಲೇ ಕರಡನ್ನು ಒಪ್ಪಿಸಿದ್ದು, ಕರ್ನಾಟಕದಲ್ಲಿ ರಾಜ್ಯದೊಳಗೆ ನಡೆಯುವ ದೌರ್ಜನ್ಯಗಳಿಗೆ ಸಂಬಂಧಿಸಿದಂತೆ ರಚಿಸಲಾದ ಜಂಟಿ ಸದನ ಸಮಿತಿಯು ೧೯೯೯ರ ಜುಲೈ ೧ ರಂದು ಸರಕಾರಕ್ಕೆ ವರದಿ ಸಲ್ಲಿಸಿತ್ತು. ಇದರಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ತಡೆಗೆ ಐದು ಕರಡು ಮಸೂದೆಗಳನ್ನು ರಚಿಸಿಕೊಳ್ಳಲಿದೆ."[೬] ಇದೀಗ ಮೊದಲ ಬಾರಿಗೆ ರಾಷ್ಟ್ರೀಯ ನೀತಿಯಲ್ಲಿ ಕೌಟುಂಬಿಕ ಹಿಂಸೆ ಕಾಣಿಸಿಕೊಳ್ಳಲಿದೆ.

ಕೌಟುಂಬಿಕ ಹಿಂಸೆ ತಡೆ ಮಸೂದೆಯ ರೂಪುರೇಷೆಗಳು ಈ ಕೆಳಗಿನಂತಿವೆ.

(ಭಾರತದ ರಾಜ್ಯಪತ್ರ (Gazette News) ನವದೆಹಲಿ, ಬುಧವಾರ, ಸೆಪ್ಟೆಂಬರ್ ೧೪, ೨೦೦೫, ಕಾನೂನು ಮತ್ತು ನಿಯಮಗಳ ಮಂತ್ರಾಲಯ ಇದರ ಪ್ರಕಾರ)

"೧೩ನೇ ಸೆಪ್ಟೆಂಬರ್ ೨೦೦೫, ಹಿಂಸೆಗೆ ಬಲಿಯಾಗುತ್ತಿರುವ ಹೆಣ್ಣುಮಕ್ಕಳಿಗೆ ಭಾರತ ಸಂವಿಧಾನದ ಇನ್ನೂ ಹೆಚ್ಚಿನ ಹಕ್ಕುಗಳನ್ನು ಮನೆತನದಲ್ಲಿ ಮತ್ತು ಮನೆತನಕ್ಕೆ ಸಂಬಂಧಿಸಿದ ಯಾವುದೇ ತರಹದ ಹಿಂಸೆಗೆ ಬಲಿಯಾಗುತ್ತಿರುವ ಹೆಣ್ಣು ಮಕ್ಕಳಿಗೆ ಅಧಿಕಾರಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಭರವಸೆ ಕೊಡುವ ಉದ್ದೇಶಕ್ಕಾಗಿ ಈ ಅಧಿನಿಯಮ ಮಾಡಲಾಗಿದೆ. ಭಾರತದ ಗಣರಾಜ್ಯದ ಐವತ್ತಾರನೆಯ ವರ್ಷದಲ್ಲಿ ಸಂಸತ್ತಿನಿಂದ ದಿನಾಂಕ ೧೩ನೇ ಸೆಪ್ಟೆಂಬರ್ ೨೦೦೫ ರಂದು ಈ ಅಧಿನಿಯಮವನ್ನು ಮಾಡಲಾಗಿದೆ."[೭]

ಕೌಟುಂಬಿಕ ಹಿಂಸೆ ದಿನದಿನಕ್ಕೆ ಸಮಾಜದಲ್ಲಿ ಹಬ್ಬುತ್ತಿರುವ ಒಂದು ಸಾಮಾಜಿಕ ಪಿಡುಗು. ಅದನ್ನು ನಾವು ಕಠಿಣ ಶಿಕ್ಷೆಯನ್ನು ವಿಧಿಸಿ, ಹೋಗಲಾಡಿಸಬೇಕು. ಮಹಿಳೆಯರನ್ನು ಕೌಟುಂಬಿಕ ಹಿಂಸೆಯಿಂದ

ರಕ್ಷಿಸುವ ಅಧಿನಿಯಮವನ್ನು ಈ ಮೇಲೆ ಉಲ್ಲೇಖಿಸಲಾಗಿದೆ. ಈ ನಿಟ್ಟಿನಲ್ಲಿ ಸರಕಾರವು ಕೈಗೊಂಡ ದಿಟ್ಟ ಕ್ರಮವಾಗಿದೆ. "ಸಂಯುಕ್ತ ರಾಷ್ಟ್ರ ಸಂಘದ ಕಮಿಟಿಯು ಹೆಣ್ಣುಮಕ್ಕಳಿಗೆ ಇರುವ ಅನೇಕ ಅಡೆತಡೆಗಳನ್ನು ತೆಗೆದುಹಾಕಿ (CEDAW) ತನ್ನ ಸಾಮಾನ್ಯ ಶಿಫಾರಸ್ಸುಗಳಲ್ಲಿ ನಂ. XII (೧೯೮೯) ಇದರ ಜೊತೆಗೆ ವ್ಹಿಯೆನ್ನಾ ಅಕಾರ್ಡ ೧೯೯೩, ಬೀಜಿಂಗ್ ಡಿಕ್ಲರೇಷನ್ ಆ್ಯಂಡ್ ಪ್ಲಾಟಫಾರ್ಮ ಫಾರ್ ಆಕ್ಷನ್ (೧೯೯೫) ಇವುಗಳನ್ನು ಮನ್ನಿಸಿ ಮಾನವ ಹಕ್ಕುಗಳ ಬಗೆಗೆ ಸಂಯುಕ್ತ ರಾಷ್ಟ್ರ ಸಂಘವು ಮಹಿಳೆಯರ ಮತ್ತು ಗಂಡುಮಕ್ಕಳಲ್ಲಿ ಯಾವುದೇ ತರದ ಭಿನ್ನಭೇದ, ತಾರತಮ್ಯ, ಮಾಡಬಾರದೆಂದು U.N.O. ಕಮಿಟಿ ಸಾಮಾನ್ಯವಾಗಿ ಹೆಣ್ಣು ಮಕ್ಕಳಿಗೆ ಯಾವುದೇ ಗೃಹ ಹಿಂಸೆ ಕೊಡಬಾರದೆಂದು ತನ್ನ ಸಾಮಾನ್ಯ ಶಿಫಾರಸ್ಸುಗಳಲ್ಲಿ ಎಲ್ಲಾ ರಾಷ್ಟ್ರಗಳಿಗೆ ತನ್ನ ಸದುದ್ದೇಶವನ್ನು ತಿಳಿಸಿ ಆಯಾ ರಾಷ್ಟ್ರಗಳಲ್ಲಿ ತಮ್ಮ ಅಧಿನಿಯಮವನ್ನು ಪಾಸು ಮಾಡಲು ತಿಳಿಸಿತು. ಅದರಂತೆ ಭಾರತಕ್ಕೂ ತಿಳಿಸಿತು. ಭಾರತ ಸಂವಿಧಾನ ಪರಿಚ್ಛೇದ ೧೪, ೧೫ ಮತ್ತು ೨೧ರ ಅನ್ವಯ ಭಾರತ ಸರಕಾರವು "ಕೌಟುಂಬಿಕ ಹಿಂಸೆಯಿಂದ ಮಹಿಳೆಯರನ್ನು ರಕ್ಷಿಸುವ ಅಧಿನಿಯಮ ೨೦೦೫ ಇದನ್ನು ಪಾಸು ಮಾಡಿತು." ಇದು ಅತ್ಯಂತ ಮಹತ್ವದ ಕಾನೂನು ಆಗಿದೆ. ಇದನ್ನು ಭಾರತ ಸರಕಾರವು ತನ್ನ ಅಧಿಸೂಚನೆಯ ಮೂಲಕ ದಿನಾಂಕ ೨೬.೧೦.೨೦೦೬ ರಿಂದ ಜಾರಿಗೆ ತಂದಿತು. ಇಲ್ಲಿ ಹಿಂಸೆಗೆ ವಿಶಾಲವಾದ ಅರ್ಥವನ್ನು ಕಲ್ಪಿಸಲಾಗಿದೆ.

ಈ ಮಸೂದೆಯಲ್ಲಿ ನಮೂದಾಗಿರುವ ವ್ಯಾಖ್ಯಾನದ ಪ್ರಕಾರ, ಕೌಟುಂಬಿಕ ಸಂಬಂಧಗಳಿಂದಾಗಿ ಮತ್ತು ವಿವಾಹವಲ್ಲದ ಸಹಬಾಳ್ವೆಯಿಂದಾಗಿ ಪುರುಷನೊಡನೆ ಒಂದೇ ಸೂರಿನಡಿಯಲ್ಲಿ ವಾಸಿಸುವ ಯಾವುದೇ ಮಹಿಳೆಯು ಅನುಭವಿಸುವ ಮಾನಸಿಕ ಹಿಂಸೆ, ಆರ್ಥಿಕ ಅಭದ್ರತಾ ಭಾವ, ದೈಹಿಕ ನೋವು, ಲೈಂಗಿಕ ಕಿರುಕುಳ, ವಸ್ತುಶಃವಾಗಿರಲಿ, ಭಾವನಾತ್ಮಕವಾಗಿರಲಿ ಅಥವಾ ಬೆದರಿಕೆಯ ಅಂದರೆ ಮೌಖಿಕ ರೂಪದಲ್ಲಿರಲಿ ಅದು ಕೌಟುಂಬಿಕ ದೌರ್ಜನ್ಯ ಎನಿಸಿಕೊಳ್ಳುತ್ತದೆ.

ಕೌಟುಂಬಿಕ ದೌರ್ಜನ್ಯವೆನ್ನುವುದು ಕೇವಲ ಗಂಡ ಹೆಂಡತಿಯರಿಗೆ ಸಂಬಂಧಪಟ್ಟ ವಿಷಯವಾಗಿಲ್ಲ. ಒಂದೇ ಮನೆಯಲ್ಲಿ ವಾಸಿಸುತ್ತಿರುವ ಯಾವುದೇ ಪುರುಷ ಸಂಬಂಧಿಯಿಂದ ಸಂಕಷ್ಟಕ್ಕೊಳಗಾಗಿರುವ ವಿಧವೆ, ಮಗಳು, ಮೊಮ್ಮಗಳು, ತಾಯಿ, ಸಹೋದರಿ ಹಾಗೂ ವಿವಾಹ ಮೂಲಕ ಸಂಬಂಧಿಯಾದ ಮಹಿಳೆ, ರಕ್ತಸಂಬಧಿ ಮಹಿಳೆ, ದತ್ತಕದಿಂದ ಸಂಬಂಧಿಯಾದ ಮಹಿಳೆ ಮತ್ತು ಒಂದೇ ಸೂರಿನಡಿ ವಾಸಿಸುತ್ತಿರುವ ಒಂಟಿ ಮಹಿಳೆಯರು ಹಾಗೂ ಪುರುಷನೊಂದಿಗೆ ವಿವಾಹವಿಲ್ಲದೆ ಸಹಬಾಳ್ವೆಯಲ್ಲಿರುವ ಮಹಿಳೆ ಈ ಕಾನೂನಿನ ಸಹಾಯ ತಡೆಯಬಹುದಾಗಿದೆ.

ಗಂಡ ಹಾಗೂ ಇತರೆ ಯಾವುದೇ ಪುರುಷ ಸಂಬಂಧಿಯು, ಮಹಿಳೆಯರಿಗೆ ವರದಕ್ಷಿಣೆ ಕಿರುಕುಳ ನೀಡುವುದು, ಹೊಡೆಯುವುದು, ಅವಾಚ್ಯ ಶಬ್ದಗಳಿಂದ ನಿಂದಿಸುವುದು, ಚಾರಿತ್ರ್ಯ ವಧೆಯಂತಹ ಅವಮಾನಕರ

ಮಾತುಗಳನ್ನಾಡುವುದು, ಮನೆಯಲ್ಲಿಯೇ ಕೂಡಿ ಹಾಕುವುದು. ಗರ್ಭಪಾತಕ್ಕಾಗಿ ಬಲವಂತ ಮಾಡುವುದು, ಲೈಂಗಿಕ ಸಂಪರ್ಕಕ್ಕಾಗಿ ಒತ್ತಡ ಹೇರುವುದು, ಅಶ್ಲೀಲ ಚಿತ್ರಗಳನ್ನು ನೋಡುವಂತೆ ಬಲವಂತ ಮಾಡುವುದು. ಉದ್ಯೋಗಕ್ಕೆ ಸೇರುವಂತೆ ಬಲವಂತಪಡಿಸುವುದು ಅಥವಾ ಉದ್ಯೋಗಕ್ಕೆ ಹೋಗದಂತೆ ತಡೆಯುವುದು ಹಾಗೂ ಇನ್ನಿತರ ದೈಹಿಕ ಮತ್ತು ಮಾನಸಿಕ ಕಿರುಕುಳ ನೀಡುವುದು. ಆರ್ಥಿಕ ಅಭದ್ರತೆಗೆ ಒಳಪಡಿಸುವುದಾಗಿ ಬೆದರಿಸುವುದು. ಈ ಕಾನೂನಿನ ಪ್ರಕಾರ ಶಿಕ್ಷಾರ್ಹ ಅಪರಾಧವಾಗಿರುತ್ತದೆ.

ಈ ಕಾನೂನಿನ ಮತ್ತೊಂದು ಗಮನಾರ್ಹ ಅಂಶವೆಂದರೆ "ದೌರ್ಜನ್ಯಕ್ಕೆ ಒಳಗಾದ ಮತ್ತು ಒಳಗಾಗುತ್ತಿರುವ ಮಹಿಳೆಗೆ ತಾನು ವಾಸ ಮಾಡುತ್ತಿರುವ ಮನೆಯಲ್ಲಿ ದಾಖಲೆಗಳ ಮೂಲಕ ಹಕ್ಕು ಇಲ್ಲದಿದ್ದರೂ ಸಹ, ಅಂತಹ ಮಹಿಳೆಯು ತನ್ನ ವಾಸದ ಹಕ್ಕನ್ನು ಕೇಳಿ ಪಡೆಯಬಹುದಾಗಿರುತ್ತದೆ." ಈ ಎಲ್ಲಾ ರೀತಿಯ ಕಾನೂನಿನ ಸೇವೆಯನ್ನು ಪಡೆಯಲು ಈ ಕೆಳಗಿನ ಯಾವುದಾದರೊಬ್ಬ ಅಧಿಕಾರಿಗೆ ದೂರನ್ನು ನೀಡಬಹುದಾಗಿದೆ.

೧. ಹಿಂಸೆಗೆ ಸಂಬಂಧಪಟ್ಟ ವ್ಯಾಪ್ತಿಯ ಪೋಲೀಸ್ ಅಧಿಕಾರಿ.

೨. ಸಂರಕ್ಷಣಾ ಅಧಿಕಾರಿ.

೩. ಸೇವಾ ಅಧಿಕಾರಿ.

೪. ಸಲಹೆಗಾರ.

೫. ಈ ವ್ಯಾಪ್ತಿಗೆ ಸಂಬಂಧಿಸಿದ ಮ್ಯಾಜಿಸ್ಟ್ರೇಟರ್.

ನಿಯಮ-೨ರಲ್ಲಿರುವಂತೆ ದೂರು ದಾಖಲಿಸುವ ವಿಧಾನ

ಕೌಟುಂಬಿಕ ಹಿಂಸೆಗೆ ಒಳಗಾದ ಮಹಿಳೆಯು ಮೊದಲು ಪೋಲೀಸ್ ಠಾಣೆಯಲ್ಲಿ ಮೌಖಿಕ ಅಥವಾ ಲಿಖಿತ ದೂರು ದಾಖಲಿಸಬೇಕಾಗುತ್ತದೆ. ಅಂತಹ ಮಹಿಳೆಯ ಸಂಬಂಧಿಕರು ನೆರೆಹೊರೆಯವರು ಸ್ನೇಹಿತರು ಆ ಮಹಿಳೆಯ ಪರವಾಗಿ ಠಾಣೆಯಲ್ಲಿ ದೂರು ದಾಖಲಿಸಬಹುದು. ನಂತರ ಆ ವ್ಯಾಪ್ತಿಯ ಮ್ಯಾಜಿಸ್ಟ್ರೇಟ್ ಪ್ರದೇಶದ ಸಂರಕ್ಷಣಾ ಅಧಿಕಾರಿ ರಕ್ಷಣಾದೇಶ ಹೊರಡಿಸುವುದರ ಮೂಲಕ ಮಹಿಳೆಗೆ ರಕ್ಷಣೆ ಒದಗಿಸಬೇಕು. ಅಪರಾಧ ಸಾಬೀತಾದಲ್ಲಿ ನ್ಯಾಯಾಲಯವು ಅಪರಾಧಿಗೆ ಸೆರೆವಾಸದಂತಹ ಶಿಕ್ಷೆ ವಿಧಿಸುವುದು ಮಾತ್ರವಲ್ಲ ದೌರ್ಜನ್ಯಕ್ಕೆ ಒಳಪಟ್ಟ ಆಸ್ತಿ ರಕ್ಷಣೆಯನ್ನು ಮಾಡಬೇಕಿರುತ್ತದೆ. ಈ ನಿಟ್ಟಿನಲ್ಲಿ ಸರ್ಕಾರೇತರ ಸಂಸ್ಥೆಗಳನ್ನು ಹಿಂಸೆಗೆ ಒಳಗಾದ ಮಹಿಳೆಗೆ ಸಹಾಯ ನೀಡುವ ಅಧಿಕಾರ ಇರುತ್ತದೆ. ತೊಂದರೆಗೀಡಾದ ಮಹಿಳೆಯರಿಗೆ ಕಾನೂನು, ವೈದ್ಯಕೀಯ ಮತ್ತು ತಾತ್ಕಾಲಿಕ ವಸತಿ ನೆರವು ನೀಡಬಯಸುವ ಸರ್ಕಾರೇತರ ಸಂಸ್ಥೆಗಳು ಈ ಕಾನೂನಿನಡಿಯಲ್ಲಿ ನೊಂದಾಯಿಸಿಕೊಳ್ಳಬೇಕಾಗುತ್ತದೆ. ಈ ಕಾಯ್ದೆ ಅಡಿಯಲ್ಲಿ

ದೂರು ದಾಖಲಿಸಿಕೊಳ್ಳಲು ಸರ್ಕಾರವು ಪೂರ್ಣಾವಧಿಯ ರಕ್ಷಣಾ ಅಧಿಕಾರಿಯನ್ನು ನೇಮಕ ಮಾಡ ಬೇಕಾಗಿರುತ್ತದೆ.

ನಿಯಮ-೩ರಲ್ಲಿರುವಂತೆ ಸಂರಕ್ಷಣಾ ಅಧಿಕಾರಿ ನೇಮಕ, ವಿದ್ಯಾರ್ಹತೆ ಮತ್ತು ಅನುಭವ

೧. ಸಂರಕ್ಷಣಾ ಅಧಿಕಾರಿಯನ್ನು ರಾಜ್ಯ ಸರಕಾರ ನೇಮಕ ಮಾಡುತ್ತದೆ. ಇದರಲ್ಲಿ ಸರ್ಕಾರೇತರ ಸಂಘ ಸಂಸ್ಥೆಯಲ್ಲಿ ಕೆಲಸ ಮಾಡಿದ ಅನುಭವವಿರುವ ವ್ಯಕ್ತಿಗಳಿಗೆ ಹಾಗೂ ಮಹಿಳಾ ಅಭ್ಯರ್ಥಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ.

೨. ಈ ಅಧಿನಿಯಮದ ಅನ್ವಯ ನೇಮಕಗೊಳ್ಳುವ ಸಂರಕ್ಷಣಾ ಅಧಿಕಾರಿಗೆ ಕನಿಷ್ಠ ಮೂರು ವರ್ಷಗಳವರೆಗೆ ಸಾಮಾಜಿಕ ಕ್ಷೇತ್ರದಲ್ಲಿ ಕೆಲಸ ಮಾಡಿದ ಅನುಭವವಿರಬೇಕು.

೩. ಸಂರಕ್ಷಣಾಧಿಕಾರಿಯ ಸೇವಾ ಅವಧಿಯು ಕನಿಷ್ಠ ಮೂರು ವರ್ಷಗಳವರೆಗೆ ಇರತಕ್ಕದ್ದು.

೪. ಸಂರಕ್ಷಣಾ ಅಧಿಕಾರಿಯು ಪರಿಣಾಮಕಾರಿಯಾಗಿ ತನ್ನ ಕಾರ್ಯವನ್ನು ಅಧಿನಿಯಮದ ಅಡಿಯಲ್ಲಿ ಇಲ್ಲವೆ ನಿಯಮಗಳ ಅಡಿಯಲ್ಲಿ ಕಾರ್ಯನಿರ್ವಹಿಸಲು ಅವನಿಗೆ ಅವಕಾಶವಿರುವ ಕಛೇರಿಯ ಸಹಾಯವನ್ನು ಒದಗಿಸತಕ್ಕದ್ದು.

ನಿಯಮ-೪ರಲ್ಲಿರುವಂತೆ ಸಂರಕ್ಷಣಾ ಅಧಿಕಾರಿಯು ಸಂಗ್ರಹಿಸಬೇಕಾದ ಮಾಹಿತಿ

೧. ಯಾವುದೇ ವ್ಯಕ್ತಿಗೆ ಕೌಟುಂಬಿಕ ಹಿಂಸೆಯಾಗಿದೆಯೆಂದು ನಂಬಲು ಯೋಗ್ಯವಾದ ಕಾರಣಗಳಿದ್ದರೆ/ ಈಗ ಸದ್ಯಕ್ಕೆ ಹಿಂಸೆ ನಡೆಯುತ್ತಿದೆ/ಹಿಂಸೆ ನಡೆಯುವ ಸಾಧ್ಯತೆಗಳಿವೆ ಎಂದು ಗೊತ್ತಿದ್ದರೂ, ಅಂತಹ ಮಾಹಿತಿಯನ್ನು ಅಧಿಕಾರ ವ್ಯಾಪ್ತಿಗೆ ಹೊಂದಿದ ಸಂರಕ್ಷಣಾ ಅಧಿಕಾರಿಗೆ ಮೌಖಿಕವಾಗಿ ಇಲ್ಲವೆ ಲಿಖಿತ ರೂಪದಲ್ಲಿ ಕೊಡತಕ್ಕದ್ದು.

೨. ಉಪಕಲಂ-೧ ರ ಅನ್ವಯ ಸಂರಕ್ಷಣಾಧಿಕಾರಿಗೆ ಮೌಖಿಕವಾಗಿ ಅವನು ಅವನು/ಅವಳು ಅದು ಬರವಣಿಗೆಯಲ್ಲಿ ಇರುವಂತೆ ನೋಡಿಕೊಳ್ಳತಕ್ಕದ್ದು ಮತ್ತು ಅದಕ್ಕೆ ಅವನ/ಅವಳ ಸಹಿ ತೆಗೆದು ಕೊಳ್ಳತಕ್ಕದ್ದು. ಒಂದು ವೇಳೆ ಮಾಹಿತಿ ಕೊಟ್ಟವನು ಆ ಮಾಹಿತಿಯನ್ನು ಲಿಖಿತ ರೂಪದಲ್ಲಿ ಪೂರೈಸುವ ಸ್ಥಿತಿಯಲ್ಲಿ ಇರದಿದ್ದರೆ ಸಂರಕ್ಷಣಾ ಅಧಿಕಾರಿಗೆ ಆ ಮಾಹಿತಿ ಕೊಟ್ಟವನ ಬಗೆಗೆ ಬರೆದುಕೊಂಡು ರಿಕಾರ್ಡ್ ಮಾಡಿ, ಆ ಮನುಷ್ಯನ ಚಹರೆ ಪಟ್ಟಿ ಇಟ್ಟುಕೊಳ್ಳತಕ್ಕದ್ದು.

೩. ಸಂರಕ್ಷಣಾ ಅಧಿಕಾರಿಯು ಮಾಹಿತಿ ಬರೆದುಕೊಂಡಿದ್ದರೆ ಅದರ ಪ್ರತಿಯೊಂದನ್ನು ಕೂಡಲೇ ಮಾಹಿತಿ ಕೊಟ್ಟವನಿಗೆ ಉಚಿತವಾಗಿ ಕೊಡತಕ್ಕದ್ದು.

ನಿಯಮ-೫ರಲ್ಲಿರುವಂತೆ ಗೃಹಕೃತ್ಯದ ಘಟನಾ ವರದಿಗಳು

೧. ನಿರ್ದಿಷ್ಟಪಡಿಸಿದ ಕೌಟುಂಬಿಕ ಹಿಂಸೆ ನಡೆದ ಬಗ್ಗೆ ದೂರು ಬಂದ ಕೂಡಲೇ ಸಂರಕ್ಷಣಾಧಿಕಾರಿಯು ನಮೂನೆ ನಂ. ೧ರಲ್ಲಿ ಆ ಕೌಟುಂಬಿಕ ಹಿಂಸೆಯ ವರದಿಯನ್ನು ಸಿದ್ಧಪಡಿಸತಕ್ಕದ್ದು. ಅದನ್ನು ಸಿದ್ಧಪಡಿಸಿ ಮ್ಯಾಜಿಸ್ಟ್ರೇಟರಿಗೆ ಸಲ್ಲಿಸತಕ್ಕದ್ದು ಮತ್ತು ಆ ಘಟನೆ ನಡೆದ ಪೋಲೀಸ್ ಠಾಣೆಯ ಅಧಿಕಾರಿ ಹಾಗೂ ಆ ಕ್ಷೇತ್ರದ ಸೇವೆಗಳನ್ನು ಒದಗಿಸುವವರಿಗೆ ಒಂದು ಪ್ರತಿಯನ್ನು ಕಳುಹಿಸತಕ್ಕದ್ದು.

೨. ಬಾಧಿತ ವ್ಯಕ್ತಿಯ ವಿನಂತಿ ಮೇರೆಗೆ ಸೇವೆಗಳನ್ನು ಒದಗಿಸುವ ಅಧಿಕಾರಿಯು ಗೃಹಕೃತ್ಯ ಹಿಂಸೆಯ ವರದಿಯನ್ನು ನಮೂನೆ ೧ರಲ್ಲಿ ದಾಖಲು ಮಾಡಿ ಅವರ ಒಂದು ಪ್ರತಿಯನ್ನು ಸಂಬಂಧಿಸಿದ ಮ್ಯಾಜಿಸ್ಟ್ರೇರಿಗೆ ಮತ್ತು ಆ ಕ್ಷೇತ್ರದ ಸಂರಕ್ಷಣಾಧಿಕಾರಿಗೆ ಕಳುಹಿಸತಕ್ಕದ್ದು.

ನಿಯಮ-೮ರಲ್ಲಿರುವಂತೆ ಸಂರಕ್ಷಣಾಧಿಕಾರಿಯ ಕರ್ತವ್ಯಗಳು

೧. ಈ ಅಧಿನಿಯಮದ ಕೆಳಗೆ ಬಾಧಿತ ವ್ಯಕ್ತಿಯು ಇಚ್ಛಿಸಿದರೆ ದೂರು ಕೊಡುವ ಕಾಲಕ್ಕೆ ಸಹಾಯ ಮಾಡುವುದು.

೨. ಬಾಧಿತ ವ್ಯಕ್ತಿಯ ಹಕ್ಕುಗಳನ್ನು ಕುರಿತು ನಿಗದಿತ ನಮೂನೆಯಲ್ಲಿ ಅವು ಇಂಗ್ಲೀಷ್‌ನಲ್ಲಿ ಅಥವಾ ಆಯಾ ರಾಜ್ಯದ ರಾಜ್ಯ ಭಾಷೆಯಲ್ಲಿ ಇರುವ ನಮೂನೆಗಳನ್ನು ವಿವರಿಸಿ ಹೇಳತಕ್ಕದ್ದು.

೩. ಯಾವುದೇ ಅರ್ಜಿ ಕಲಂ-೧೨, ಕಲಂ-೨೩ ರ ಉಪಕಲಂ-೨ ಇಲ್ಲವೆ ಅಧಿನಿಮಯದ ಯಾವುದೇ ಕಲಮಿನ ಅನ್ವಯ ಇಲ್ಲವೆ ನಿಯಮಗಳ ಅನ್ವಯ ಅರ್ಜಿದಾರನು ಅರ್ಜಿ ತಯಾರಿಸಲು ಸಹಾಯ ಮಾಡುವುದು.

೪. ಬಾಧಿತ ವ್ಯಕ್ತಿಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಕೌಟುಂಬಿಕ ಹಿಂಸೆಯಾಗದಂತೆ ತಡೆಯಲು ಸಂರಕ್ಷಣಾಧಿಕಾರಿಯು ಯೋಜನೆಯಲ್ಲಿ ಒಳಪಟ್ಟಿರುವ ಸುರಕ್ಷಿತ ಸ್ಥಳ/ಮನೆಯನ್ನು ಒದಗಿಸುವುದು. ತಾಲೂಕಿನ ಕೇಂದ್ರ ಪ್ರದೇಶದಲ್ಲಿ ಸುರಕ್ಷಿತ ಸ್ಥಳಾವಕಾಶ ಇರುತ್ತದೆ.

ಕೌಟುಂಬಿಕ ಹಿಂಸೆಯ ಬಲಪ್ರಯೋಗವನ್ನು ಗಮನಿಸಿ ಕಲಂ-೧೨ರ ಅನ್ವಯ ಅವಳು ಅರ್ಜಿಯನ್ನು ಕೊಡತಕ್ಕದ್ದು.

೫. ಬಾಧಿತ ವ್ಯಕ್ತಿಗೆ ರಾಜ್ಯ ಸರಕಾರದ ಕಾನೂನು ಸೇವೆಗಳ ಪ್ರಾಧಿಕಾರದಿಂದ ಕಾನೂನು ನೆರವು ಕೊಡತಕ್ಕದ್ದು.

೬. ಬಾಧಿತ ವ್ಯಕ್ತಿಗೆ ಹಾಗೂ ಅವಳ ಯಾವುದೇ ಅಲ್ಪವಯಸ್ಸಿನ ಮಗುವಿಗೆ ವೈದ್ಯಕೀಯ ಉಪಚಾರ ಮಾಡಿಸಲು ಸಹಾಯ ಮಾಡುವುದು. ವೈದ್ಯರಲ್ಲಿ ಅವಳು ಹೋಗಲು ವಾಹನಗಳ ಸೌಲಭ್ಯವನ್ನು ಸಹ ಒದಗಿಸತಕ್ಕದ್ದು.

೭. ಬಾಧಿತ ವ್ಯಕ್ತಿಯನ್ನು ಹಾಗೂ ಅವಳ ಅಲ್ಪವಯಸ್ಸಿನ ಶಿಶುಗಳನ್ನು ಆಶ್ರಯ ಮನೆಗೆ ತರಲು ಸಹಾಯ ಮಾಡುವುದು.

೮. ಈ ಅಧಿನಿಯಮದ ಅನ್ವಯ ನೋಂದಣಿ ಮಾಡಿಸಿದ ಸೇವೆ ಒದಗಿಸುವವರಿಗೆ ಈ ವ್ಯವಹಾರಗಳನ್ನು ಕುರಿತು ಅವರಿಗೆ ತಿಳಿಸುವುದು ಮತ್ತು ಅವರ ಸೇವೆಗಳನ್ನು ಒದಗಿಸುವವರ ವತಿಯಿಂದ ಅರ್ಜಿಗಳನ್ನು ಆಹ್ವಾನಿಸಿ, ಅವರಿಂದ ವಿವರ, ವಿಶಿಷ್ಟವಾದ ಮಾಹಿತಿ ಪಡೆಯುವುದು ಹಾಗೂ ಅವರನ್ನು ನೇಮಿಸುವುದು. ಈ ಪ್ರಕರಣದಲ್ಲಿ ಅವರನ್ನು ಸಲಹೆಗಾರರನ್ನಾಗಿ ಕಲಂ-೧೪ರ ಉಪ ಕಲಂ-೧ರ ಅನ್ವಯ ಇಲ್ಲವೆ ಕಲಂ-೧೫ರ ಅನ್ವಯ ಕಲ್ಯಾಣಕಾರಕ ತಜ್ಞರನ್ನು ನೇಮಿಸುವುದು.

೯. ಸಲಹೆಗಾರರೆಂದು ನೇಮಿಸಬೇಕೆಂದು ಕೊಟ್ಟವರ ಅರ್ಜಿಗಳನ್ನು ಪರಿಶೀಲಿಸುವುದು ಮತ್ತು ಲಭ್ಯವಿರುವ ಸಲಹೆಗಾರರ ಪಟ್ಟಿಯನ್ನು ಮಾಡಿ ಮ್ಯಾಜಿಸ್ಟ್ರೇಟರಿಗೆ ಕಳುಹಿಸಿಕೊಡಬೇಕು.

೧೦. ಲಭ್ಯವಿರುವ ಸಲಹೆಗಾರರ ಪಟ್ಟಿಯನ್ನು ಮೂರು ವರ್ಷಕ್ಕೊಮ್ಮೆ ಪರಿಷ್ಕರಿಸಬೇಕು ಮತ್ತು ಹೊಸಬರ ನೇಮಕಾತಿಗೆ ಅರ್ಜಿಗಳನ್ನು ಕರೆಯಬೇಕು. ಪರಿಷ್ಕರಿಸಿದ ಸಲಹೆಗಾರರ ಪಟ್ಟಿಯನ್ನು ಸಂಬಂಧಪಟ್ಟ ಮ್ಯಾಜಿಸ್ಟ್ರೇಟರಿಗೆ ಕಳುಹಿಸಿಕೊಡಬೇಕು.

ನಿಯಮ-೧೧ರಲ್ಲಿರುವಂತೆ ಸೇವೆಗಳನ್ನು ಒದಗಿಸುವವರ ನೋಂದಣಿ ಕಾರ್ಯ

೧. ಯಾವುದೇ ಸ್ವಯಂ ಸಂಸ್ಥೆಯು ನೋಂದಣಿ ಮಾಡಿದ್ದು, ಅಂದರೆ ಸಂಘಗಳ ನೋಂದಣಿ ಅಧಿನಿಯಮ ೧೮೬೦ ಅಡಿಯಲ್ಲಿ ನೋಂದಣಿ ಮಾಡಿರತಕ್ಕದ್ದು, ಇಲ್ಲವೆ ಒಂದು ಕಂಪನಿ, ಕಂಪನಿ ಕಾನೂನಿನ ಅಧಿನಿಯಮ ೧೯೫೬ರ ಅನ್ವಯ ಅಥವಾ ಹೆಣ್ಣುಮಕ್ಕಳ ಹಕ್ಕುಗಳನ್ನು ಮತ್ತು ಅವರ ಹಿತಾಸಕ್ತಿಗಳನ್ನು ಕಾಪಾಡಲು ಯಾವುದೇ ಕಾನೂನುಬದ್ಧವಾಗಿ, ಸದುದ್ದೇಶದಿಂದ ಚಾರಿಯಲ್ಲಿರುವ ಕಾನೂನು ಅನ್ವಯ ಇಲ್ಲವೆ ಸೊಸಾಯಿಟೀಜ್ ರಿಜಿಸ್ಟ್ರೇಷನ್ ಅಧಿನಿಯಮ ೧೮೬೦ ರಂತೆ ನೋಂದಾಯಿಸಿರಬೇಕು.

೨. ರಾಜ್ಯ ಸರಕಾರವು ಆ ಅರ್ಜಿದಾರರ ಬಗೆಗೆ ಯೋಗ್ಯ ವಿಚಾರಣೆ ಮಾಡಿ ತನಗೆ ಯೋಗ್ಯವೆನಿಸಿದಂತೆ ಮತ್ತು ಅರ್ಜಿದಾರರು ಆ ಬಗೆಗೆ ಯೋಗ್ಯವಾಗಿ ಇದ್ದಾರೆಂದು ಅನಿಸಿದರೆ ಅಂತಹವರನ್ನು ಸೇವೆಗಳನ್ನು ಒದಗಿಸುವವರೆಂದು ನೋಂದಣಿ ಮಾಡಿಕೊಳ್ಳುವರು. ಹಾಗೆ ನೋಂದಣಿ ಮಾಡಿದ ಬಗ್ಗೆ ಅವರಿಗೆ

ಒಂದು ಸರ್ಟಿಫಿಕೇಟ್ ಕೊಡತಕ್ಕದ್ದು ಅಥವಾ ಅರ್ಜಿದಾರರ ಅರ್ಜಿ ವಿಚಾರಣೆ ಕಾಲಕ್ಕೆ ಅರ್ಜಿದಾರರಿಗೆ ಯೋಗ್ಯ ಅವಕಾಶ ಕಲ್ಪಿಸಿಕೊಟ್ಟು ಅವರ ಮನೆಗಳು ಯೋಗ್ಯವಿಲ್ಲವೆಂದು ಅವರ ಅರ್ಜಿಗಳನ್ನು ತಿರಸ್ಕರಿಸತಕ್ಕದು.

೩. ರಾಜ್ಯ ಸರಕಾರವು ವಿವಿಧ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಸೇವೆ ಒದಗಿಸುವವರ ಮತ್ತು ಹೆಸರಿನ ಪಟ್ಟಿಯನ್ನು ಪ್ರಕಟಿಸಿ, ಅದನ್ನು ದಿನಪತ್ರಿಕೆಗಳಲ್ಲಿ ಹಾಗೂ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕು.

ನಿಯಮ-೧೨ರಲ್ಲಿರುವಂತೆ ಮ್ಯಾಜಿಸ್ಟ್ರೇಟ ಅವರ ಕಾರ್ಯ

೧. ಯಾವುದೇ ಬಂಧಿತ ವ್ಯಕ್ತಿಯು ಇಲ್ಲವೆ ಪ್ರೊಸಿಕ್ಯುಶನ್ ಅಭಿಯೋಜನಾಧಿಕಾರಿ ಇಲ್ಲವೆ ಬಾಧಿತ ವ್ಯಕ್ತಿಯ ಪತಿಯಿಂದ ಯಾವುದೇ ವ್ಯಕ್ತಿಯು ಪರಿಹಾರವನ್ನು ಕೋರಿ ಒಂದು ಇಲ್ಲವೆ ಹೆಚ್ಚಿನ ಪರಿಹಾರ ಕೋರಿ ಮ್ಯಾಜಿಸ್ಟ್ರೇಟರಿಗೆ ಅರ್ಜಿ ಸಲ್ಲಿಸಬಹುದು ಅಥವಾ ಇಂತಹ ಅರ್ಜಿಯ ಮೇಲೆ ಯಾವುದೇ ಆದೇಶ ಮಾಡುವ ಮೊದಲು ಮ್ಯಾಜಿಸ್ಟ್ರೇಟನು ಯಾವುದೇ ಕೌಟುಂಬಿಕ ಹಿಂಸೆಯ ಬಗ್ಗೆ ಕ್ರಮ ತೆಗೆದುಕೊಂಡ ಬಗ್ಗೆ, ಸಂರಕ್ಷಣಾಧಿಕಾರಿ ಅಥವಾ ಸೇವೆ ಒದಗಿಸುವವರು ಯಾವ ವರದಿ ಕೊಟ್ಟಿದ್ದಾರೆ ಅದನ್ನು ಗಣನೆಗೆ ತೆಗೆದುಕೊಳ್ಳತಕ್ಕದು.

೨. ಉಪಕಲಂ-೧ರ ಅನ್ವಯ ಕೊಡುವ ಅರ್ಜಿಯು ನಿರ್ದಿಷ್ಟಪಡಿಸಲಾದ ನಮೂನೆಯಲ್ಲಿ ಅಥವಾ ಅದರಂತಹ ನಮೂನೆಯಲ್ಲಿ ಅದರಲ್ಲಿ ನಿರ್ದಿಷ್ಟಪಡಿಸಿದ ಸಂಗತಿಗಳನ್ನು ಕಾಣಿಸತಕ್ಕದ್ದು.

೩. ಮ್ಯಾಜಿಸ್ಟ್ರೇಟನು ತನಗೆ ಬಂದ ಅರ್ಜಿಯ ಮೇಲೆ ಆದೇಶ ಮಾಡಲು ಆ ಅರ್ಜಿ ತಲುಪಿದ ದಿನಾಂಕದಿಂದ ಮೂರು ದಿನಗಳಲ್ಲಿ ಅರ್ಜಿ ಹಾಕುವವನಿಗೆ ದಿನಾಂಕ ಗೊತ್ತುಪಡಿಸಬಹುದು.

೪. ಉಪಕಲಂ-೧ರ ಅನ್ವಯ ಮ್ಯಾಜಿಸ್ಟ್ರೇಟರು ತಮಗೆ ಬಂದ ಅರ್ಜಿಯ ಮೇಲೆ ಆದೇಶ ಮಾಡಿದ ದಿನಾಂಕದಿಂದ ಆರು ದಿನಗಳೊಳಗಾಗಿ ಅಂತಹ ಅರ್ಜಿಯನ್ನು ವಿಲೇವಾರಿ ಮಾಡತಕ್ಕದ್ದು.

ನಿಯಮ-೧೨ರಲ್ಲಿರುವಂತೆ ನೋಟೀಸ್ ಜಾರಿಗೊಳಿಸುವುದು

೧. ಕಲಂ-೧೧ರ ಅನ್ವಯ ಗೊತ್ತುಪಡಿಸಿದ ದಿನಾಂಕದ ಸಮನ್ಸು(ನ್ಯಾಯಾಲಯದ ಹಾಜರಿ ಆಜ್ಞೆ)ಗಳನ್ನು ಮ್ಯಾಜಿಸ್ಟ್ರೇಟರು ಸಂರಕ್ಷಣಾಧಿಕಾರಿಗೆ ಕಳುಹಿಸತಕ್ಕದ್ದು. ಅವರು ಸಮನ್ಸುಗಳನ್ನು ಮ್ಯಾಜಿಸ್ಟ್ರೇಟರು ನಿರ್ದೇಶಿಸಿದಂತೆ ಸಂಬಂಧಪಟ್ಟವರ ಮೇಲೆ ಎರಡು ದಿನಗಳಲ್ಲಿ ಇಲ್ಲವೆ ಮ್ಯಾಜಿಸ್ಟ್ರೇಟರ್ ಕೊಟ್ಟ ಯೋಗ್ಯ ಅವಧಿಯಲ್ಲಿ ಜಾರಿ ಮಾಡತಕ್ಕದ್ದು.

೨. ಸಂರಕ್ಷಣಾಧಿಕಾರಿಯು ಆ ಸಮನ್ಸುಗಳನ್ನು ಜಾರಿ ಮಾಡಿದೆ ಎನ್ನುವುದಕ್ಕೆ ಆ ಸಮನ್ಸು ಜಾರಿ ಮಾಡಿದೆನೆಂದು ನಿರ್ದಿಷ್ಟಪಡಿಸಿದ ನಮೂನೆಯಲ್ಲಿ ತನ್ನ ಘೋಷಣೆ ಮಾಡತಕ್ಕದ್ದು. ಹಾಗೆ ಸಮನ್ಸನ್ನು

ಸಂಬಂಧಿಸಿದ ವ್ಯಕ್ತಿಯ ಮೇಲೆ ಇಲ್ಲವೇ ಮ್ಯಾಜಿಸ್ಟ್ರೇಟರ ಆದೇಶದ ಅನ್ವಯ ಉಳಿದ ಯಾವುದೇ ವ್ಯಕ್ತಿಯ ಮೇಲೆ ಜಾರಿ ಮಾಡಬಹುದು. ಹೀಗೆ ಸಂರಕ್ಷಣಾಧಿಕಾರಿ ಮಾಡಿದ ಘೋಷಣೆಯು ಸಮನ್ಸು ಜಾರಿ ಮಾಡಿದ್ದಕ್ಕೆ ಯೋಗ್ಯ ರುಜುವಾತು ಆಗಿರುತ್ತದೆ.

ನಿಯಮ-೧೩ರಲ್ಲಿರುವಂತೆ ಸಲಹೆಗಾರರನ್ನು ನೇಮಿಸುವುದು

೧. ಸಂರಕ್ಷಣಾಧಿಕಾರಿಯು ಲಭ್ಯವಿರುವ ಸಲಹೆಗಾರರ ಪಟ್ಟಿ ಹಾಗೂ ಹೊಸ ಸಲಹೆಗಾರರ ಪಟ್ಟಿಯನ್ನು ತಯಾರಿಸಿ, ಆ ಪಟ್ಟಿಯಲ್ಲಿರುವವರನ್ನು ಸಲಹೆಗಾರರೆಂದು ನೇಮಿಸತಕ್ಕದ್ದು.

೨. ಕೆಳಗೆ ಕಾಣಿಸಿದ ಜನರು ಸಲಹೆಗಾರರೆಂದು ನೇಮಿಸಲು ಅರ್ಹರು ಇರುವುದಿಲ್ಲ ಅವರು ಯಾರೆಂದರೆ.

೩. ಯಾವುದೇ ವ್ಯಕ್ತಿಯು ಪ್ರಕರಣದಲ್ಲಿ ದೂರು ಇಲ್ಲವೆ ಪ್ರತಿವಾದಿಯಲ್ಲಿ ಆಸಕ್ತಿವುಳ್ಳವನಾಗಿದ್ದರೆ ಇಲ್ಲವೆ ಪಕ್ಷಕಾರರಿಗೆ ಆ ಗೃಹಕೃತ್ಯದ ಹಿಂಸೆಯಲ್ಲಿ ವಿವಾದದಲ್ಲಿ ಆಸಕ್ತಿ ಉಳ್ಳವನಾಗಿದ್ದರೆ, ಇಲ್ಲವೆ ಎರಡೂ ಪಕ್ಷದವರಿಗೆ ಅಥವಾ ಒಂದೇ ಪಕ್ಷದವರ ಸಂಬಂಧಿಕನಾಗಿದ್ದರೆ, ಇಲ್ಲವೆ ಯಾವುದೇ ಪಕ್ಷಕಾರರ ವತಿಯಿಂದ ಒಬ್ಬರು ಹಾಜರಾದರೆ ಅದಕ್ಕೆ ತಮ್ಮದು ಯಾವುದೇ ಅಭ್ಯಂತರವಿಲ್ಲವೆಂದು ಅವರ ಒಪ್ಪಿಗೆ ಕೊಡದ ಹೊರತು ಅವರನ್ನು ನೇಮಿಸತಕ್ಕದ್ದಲ್ಲ. ಇಂತಹ ಒಪ್ಪಿಗೆಯು ಲಿಖಿತದಲ್ಲಿ ಇರಬೇಕು.

೪. ಯಾವ ವಕೀಲನು ಪ್ರತಿವಾದಿಯ ಪರವಾಗಿ ಪ್ರಕರಣದಲ್ಲಿ ಹಾಜರಾಗುವನೋ ಇಲ್ಲವೆ ಪ್ರತಿವಾದಿಯೂ ಇತರ ಸಿವಿಲ್ ದಾವೆಗಳಿಗೆ ಸಂಬಂಧಿಸಿದ ವಿವರಣೆಗಳಲ್ಲಿ ಅವನು ಹಾಜರಾಗಿದ್ದರೆ ಅಂತಹ ವಕೀಲನು ಬಂಧಿತ ವ್ಯಕ್ತಿಯ ಪರವಾಗಿ ಹಾಜರಾಗಲು ಬರುವುದಿಲ್ಲ.

೫. ಸಾಧ್ಯವಿದ್ದಷ್ಟರಮಟ್ಟಿಗೆ ಸಲಹೆಗಾರರಾಗಿ ಮಹಿಳೆಯೇ ಇರತಕ್ಕದ್ದು.

ನಿಯಮ-೧೪ರಲ್ಲಿರುವಂತೆ ಸಲಹೆಗಾರರು ಅನುಸರಿಸಬೇಕಾದ ಪ್ರಕ್ರಿಯೆ

೧. ಸಲಹೆಗಾರರು ನ್ಯಾಯಾಲಯದ ಸಾಮಾನ್ಯ ಮೇಲ್ವಿಚಾರಣೆಯಲ್ಲಿ ಮತ್ತು ಸಂರಕ್ಷಣಾಧಿಕಾರಿ ಈ ಇಬ್ಬರ ಮೇಲ್ವಿಚಾರಣೆಯಲ್ಲಿ ಕೆಲಸ ಮಾಡತಕ್ಕದ್ದು.

೨. ಸಲಹೆಗಾರರು ಬಾಧಿತ ವ್ಯಕ್ತಿಗೆ ಇಲ್ಲವೆ ಎರಡೂ ಪಕ್ಷದವರಿಗೆ ಅನುಕೂಲವಾಗುವ ಸ್ಥಳದಲ್ಲಿ ಸಭೆಯನ್ನು ಸಮಾಲೋಚನೆಗಾಗಿ ಕರೆಯತಕ್ಕದ್ದು.

೩. ಸಲಹೆ ಕೊಡುವುದರಲ್ಲಿ ಪ್ರತಿವಾದಿಯು ಲಿಖಿತದಲ್ಲಿ ಫಿರ್ಯಾದಿದಾರಳು. ಅಂದರೆ ಬಾಧಿತಳಿಗೆ ಕೌಟುಂಬಿಕ ಹಿಂಸೆ ಮಾಡುವುದರಿಂದ ದೂರ ಉಳಿಯುತ್ತೇನೆಂದೂ ಫಿರ್ಯಾದಿಗೆ ಹಿಂಸೆ

ಮಾಡುವುದಿಲ್ಲ ಮತ್ತು ಪ್ರತಿವಾದಿಯು ಬಾಧಿತಳೊಂದಿಗೆ ಯಾವುದೇ ರೀತಿಯಲ್ಲಿ ಸಂಬಂಧ ಹಾಗೂ ಸಂಪರ್ಕ ಇಲ್ಲವೆ ಪತ್ರದ ಮುಖೇನ ಇಲ್ಲವೆ ದೂರವಾಣಿ ಅಥವಾ ಇತರ ಎಲೆಕ್ಟ್ರಾನಿಕ್ ಸಂಪರ್ಕದ ಮೂಲಕ ಅವಳೊಂದಿಗೆ ಸಂಪರ್ಕ ಹೊಂದತಕ್ಕದ್ದಲ್ಲ. ಆದರೆ ನ್ಯಾಯಾಲಯದಲ್ಲಿ ಅವನಿಗೆ ಸಲಹೆ ಕೊಡುವ ಕಾಲಕ್ಕೆ ಅಂದರೆ ನ್ಯಾಯಾಲಯದ ವ್ಯವಹಾರದಲ್ಲಿ ಕೇವಲ ಅವನು ಭಾಗವಹಿಸಬೇಕು.

೪. ಸಲಹೆಗಾರರು ಸಲಹೆಯನ್ನು ಕೊಡುವ ಕಾಲಕ್ಕೆ ಪುನಃ ಇಂತಹ ಕೌಟುಂಬಿಕ ಹಿಂಸೆ ಘಟಿಸದಂತೆ ನೋಡಿಕೊಳ್ಳುವುದು ಮತ್ತು ಅವನಿಂದ ಭರವಸೆಯನ್ನು ಪಡೆದುಕೊಳ್ಳತಕ್ಕದ್ದು. ಪುನಃ ಪುನಃ ಇಂತಹ ಗೃಹಕೃತ್ಯದ ಹಿಂಸೆಯು ನಡೆಯದಂತೆ ನೋಡಿಕೊಳ್ಳಬೇಕು.

೫. ಪ್ರತಿವಾದಿಯೂ ಸಲಹೆಗಾರರಿಗೆ ಲಿಖಿತದಲ್ಲಿ ಬಾಧಿತಳಿಗೆ ಹಿಂಸೆ ಮಾಡುವುದಿಲ್ಲವೆಂದು ಯೋಗ್ಯ ಪ್ರಕರಣದಲ್ಲಿ ತಾನೂ ಅವಳನ್ನು ಕಾಣಲು ಬಯಸುವುದಿಲ್ಲ ಹಾಗೂ ಅವಳೊಂದಿಗೆ ಅಂಚೆ-ತಂತಿ ಮೂಲಕ ಈ-ಮೇಲ್ ಇಲ್ಲವೇ ಇನ್ನಾವುದೇ ಮಾಧ್ಯಮದ ಮೂಲಕ ಅವಳೊಂದಿಗೆ ಸಂಪರ್ಕಿಸು ವುದಿಲ್ಲ ಎಂದು ತಿಳಿಸಬೇಕು. ಆದರೆ ಕೌನ್ಸೆಲಿಂಗ್ ವಿವರಣೆಯಲ್ಲಿ ಸಲಹೆಗಾರನ ಸಮ್ಮುಖದಲ್ಲಿ ಅವಳ ವಿವರಣೆಯಲ್ಲಿ ಭಾಗವಹಿಸುವುದಿಲ್ಲವೆಂದು ಬರೆದುಕೊಡತಕ್ಕದ್ದು.

೬. ಬಾಧಿತ ವ್ಯಕ್ತಿಯು ಅಪೇಕ್ಷಿಸಿದ್ದಲ್ಲಿ ಸಲಹೆಗಾರರು ಯಾವುದೊಂದು ರೀತಿಯಲ್ಲಿ ತಂಟೆ ಬಗೆಹರಿಸ ಬಹುದು. ಆ ಬಗೆಗೆ ಪ್ರಯತ್ನಿಸಬಹುದು.

೭. ಸಲಹೆಗಾರನ ಪ್ರಯತ್ನ ಸೀಮಿತವಾದುದು. ಆ ಸೀಮಿತ ಅಧಿಕಾರದಲ್ಲಿಯೇ ಇಬ್ಬರ ಸಮ್ಮುಖ ದಲ್ಲಿಯೇ ಒಂದು ನಿರ್ಣಯಕ್ಕೆ ಬಂದು ಬಾಧಿತ ವ್ಯಕ್ತಿಗೆ ನ್ಯಾಯ ಸಿಗುವಂತೆ ನೋಡಿಕೊಳ್ಳಬೇಕು. ಪ್ರಯತ್ನವು ಅವರನ್ನು ಒಂದುಗೂಡಿಸುವುದು ಇಲ್ಲವೆ ಇದಕ್ಕೆ ಉಪಾಯ ಕಂಡುಹಿಡಿಯುವುದಾಗಿದೆ.

೮. ಸಲಹೆಗಾರರು ಒಂದು ಒಪ್ಪಂದಕ್ಕೆ ಬರುವಂತೆ ಒತ್ತುಕೊಟ್ಟು ಅವರಲ್ಲಿ ತಿಳುವಳಿಕೆ ಬರುವಂತೆ ಮಾಡಿ, ಆ ವಿವಾದಕ್ಕೆ ಯೋಗ್ಯ ಪರಿಹಾರ ಕಂಡು ಹಿಡಿಯತಕ್ಕದ್ದು. ಪಕ್ಷಗಾರರು ಹೇಳಿದ ವಿಷಯವನ್ನು ಗಣನೆಗೆ ತೆಗೆದುಕೊಂಡು ತಮ್ಮ ಸಲಹೆ ಕೊಡಬೇಕು. ಒಪ್ಪಂದಕ್ಕೆ ಹೊಸ ತಿರುವು ಕೊಟ್ಟು ಅವರಲ್ಲಿ ಸಂಧಾನ ಮಾಡಬೇಕು. ಒಪ್ಪಂದಕ್ಕೆ ಬರಬೇಕು.

೯. ಸಲಹೆಗಾರರು ಸಾಧ್ಯವಾದಷ್ಟು ಬೇಗನೇ ತಮ್ಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು. ಸಾಧ್ಯವಾದಷ್ಟು ಬೇಗನೇ ವರದಿ ಒಪ್ಪಿಸಿ ಯೋಗ್ಯ ಕ್ರಮ ಕೈಗೊಳ್ಳುವಂತೆ ವಿನಂತಿಸಿಕೊಳ್ಳಬೇಕು.

೧೦. ಸಲಹೆಗಾರರನು ಒಂದು ಹಂತಕ್ಕೆ ಬಂದು, ಒಂದು ಒಪ್ಪಂದಕ್ಕೆ ಬಂದರೆ ಎರಡೂ ಪಕ್ಷಗಾರರು ಸಹಿ ತೆಗೆದುಕೊಂಡು ಅದನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸತಕ್ಕದ್ದು.

ನಿಯಮ-೧೬ರಲ್ಲಿರುವಂತೆ ಬಾಧಿತ ವ್ಯಕ್ತಿಗೆ ಆಶ್ರಯ ಕೊಡುವುದು

೧. ಬಾಧಿತ ವ್ಯಕ್ತಿಯ ವಿನಂತಿ ಮೇರೆಗೆ ಸಂರಕ್ಷಣಾಧಿಕಾರಿ ಅಥವಾ ಸೇವೆ ಒದಗಿಸುವವನು ಕಲಂ-೬ರ ಅನ್ವಯ ಆಶ್ರಯ ಮನೆಯ ಸ್ಪೆಶಲ್ ಚಾರ್ಜ್ ಇರುವವನಿಗೆ ಈ ಅರ್ಜಿಯನ್ನು ಲಿಖಿತದಲ್ಲಿ ಸ್ಪಷ್ಟವಾಗಿ ನಮೂದಿಸಿ ಸಲ್ಲಿಸಬೇಕು.

೨. ಸಂರಕ್ಷಣಾ ಅಧಿಕಾರಿಯು ಉಪಕಲಂ-೧ರ ಅನ್ವಯ ಅರ್ಜಿಯ ಸಂಗಡ ಕಲಂ-೯, ಇಲ್ಲವೆ ಕಲಂ-೧೦ರ ಅನ್ವಯ ಗೃಹಕೃತ್ಯ ಹಿಂಸೆಯ ಫಿರ್ಯಾದಿಯ ಅಪರಾಧ ನಡೆದ ಬಗ್ಗೆ ನಕಲು ಪ್ರತಿಯನ್ನು ಇಡತಕ್ಕದ್ದು. ಆಶ್ರಯ ಮನೆಗಳನ್ನು ಆಶ್ರಯದ ಸಲುವಾಗಿ ಈ ಅಧಿನಿಯಮದ ಅನ್ವಯ ಉಪಯೋಗಿಸತಕ್ಕದ್ದು. ಬಾಧಿತಳು ಕೌಟುಂಬಿಕ ಹಿಂಸೆಯ ಘಟನೆಯ ವರದಿಯನ್ನು ಕೊಡುವ ಮೊದಲು ಇಂತಹ ಆಶ್ರಯ ಮನೆಗಳನ್ನು ಬಾಧಿತರಿಗೆ ಕೊಡತಕ್ಕದ್ದಲ್ಲ. ದೂರು ಕೊಟ್ಟ ನಂತರ ಆಶ್ರಯ ಮನೆ ಕೊಡತಕ್ಕದ್ದು. ವ್ಯಕ್ತಿಯ ಹೆಸರು ಪರಿಚಯ ಬಹಿರಂಗಗೊಳಿಸತಕ್ಕದ್ದಲ್ಲ ಇಲ್ಲವೆ ಅವಳು ಯಾರ ವಿರುದ್ಧ ದೂರು ಕೊಡಲಾಗಿದೆಯೋ ಆ ವ್ಯಕ್ತಿಗೆ ತಿಳಿಸತಕ್ಕದಲ್ಲ. ಅಂದರೆ ಪ್ರತಿವಾದಿಗೆ ತಿಳಿಸತಕ್ಕದ್ದಲ್ಲ.

ನಿಯಮ-೧೭ರಲ್ಲಿರುವಂತೆ ಬಾಧಿತ ವ್ಯಕ್ತಿಗೆ ವೈದ್ಯಕೀಯ ನೆರವು ಕುರಿತು

೧. ಬಾಧಿತ ವ್ಯಕ್ತಿಯ ಅಥವಾ ಸಂರಕ್ಷಣಾಧಿಕಾರಿಯು ಇಲ್ಲವೆ ಸೌಲಭ್ಯ ಒದಗಿಸುವವರು ಕಲಂ-೭ರ ಅನ್ವಯ ವೈದ್ಯಕೀಯ ಸೇವೆಯ ಸೌಲಭ್ಯವನ್ನು ಹೊಂದಿರುವ ಹಾಗೆ ಇನ್‌ಚಾರ್ಜ್ ಅಧಿಕಾರಿಗೆ ಲಿಖಿತದಲ್ಲಿ ಸ್ಪಷ್ಟವಾಗಿ ಅರ್ಜಿಯನ್ನು ಕೊಡಬೇಕು.

೨. ಸಂರಕ್ಷಣಾ ಅಧಿಕಾರಿ ಇಂತಹ ವಿನಂತಿ ಮಾಡುವಾಗ ಆ ವಿನಂತಿ ಅರ್ಜಿ ಸಂಗಡ ಕೌಟುಂಬಿಕ ಹಿಂಸೆಯ ದೂರಿನ ನಕಲನ್ನು ಲಗತ್ತಿಸಬೇಕು ಅಥವಾ ಈ ಅಧಿನಿಯಮದ ಅನ್ವಯ ಬಾಧಿತ ವ್ಯಕ್ತಿಗೆ ವೈದ್ಯಕೀಯ ಸೌಲಭ್ಯದ ಇನ್‌ಚಾರ್ಜ್ ಅಧಿಕಾರಿ ವೈದ್ಯಕೀಯ ನೆರವನ್ನು ಕೊಡಲು ನಿರಾಕರಿಸತಕ್ಕದ್ದಲ್ಲ. ಅವಳು ಕೌಟುಂಬಿಕ ಹಿಂಸೆಯ ಬಗ್ಗೆ ದೂರು ಕೊಡದಿರುವಾಗ ಅದಕ್ಕೂ ಮೊದಲು ವೈದ್ಯಕೀಯ ಸೌಲಭ್ಯ ಕೇಳಿದರೆ ಅದನ್ನು ಅವಳಿಗೆ ನಿರಾಕರಿಸದಕ್ಕದ್ದಲ್ಲ. ಕೌಟುಂಬಿಕ ಹಿಂಸೆಯ ಬಗ್ಗೆ ವರದಿ ಮಾಡಿದ್ದ ಪಕ್ಷದಲ್ಲಿ ವೈದ್ಯಕೀಯ ಸೌಲಭ್ಯವನ್ನು ಇನ್‌ಚಾರ್ಜ್ ಅಧಿಕಾರಿ ನಮೂನೆ-೧ರಲ್ಲಿ ತುಂಬಿ ಅದನ್ನು ಸ್ಥಾನಿಕ ಸಂರಕ್ಷಣಾ ಅಧಿಕಾರಿಗೆ ಕಳುಹಿಸತಕ್ಕದ್ದು. ವೈದ್ಯಕೀಯ ಸೌಲಭ್ಯದ ಇನ್‌ಚಾರ್ಜ್ ಅಧಿಕಾರಿ ಅವಳನ್ನು ಪರೀಕ್ಷಿಸಿದ ಬಗ್ಗೆ ಉಚಿತವಾಗಿ ವೈದ್ಯಕೀಯ ತಪಾಸಣೆಯ ವರದಿಯನ್ನು ಉಚಿತವಾಗಿ ಬಾಧಿತ ವ್ಯಕ್ತಿಗೆ ಪೂರೈಸತಕ್ಕದ್ದು.”

ಕೌಟುಂಬಿಕ ಹಿಂಸೆಯಿಂದ ನೊಂದ ಮಹಿಳೆಯರಿಗೆ ಈ ಕಾನೂನಿನಲ್ಲಿರುವ ಪರಿಹಾರಗಳು ಈ ಕೆಳಗಿನಂತೆ ವಿವರಿಸಲಾಗಿದೆ.

೧. ¨ಸಂರಕ್ಷಣಾಧಿಕಾರಿಯ ಮತ್ತು ಸೇವೆಯನ್ನು ಒದಗಿಸುವವರು. ಅವರ ಕಾನೂನಿನ ಸೌಲಭ್ಯದ ಬಗ್ಗೆ ವಿವರವನ್ನು ನೀಡುತ್ತಾರೆ ಮತ್ತು ಕಲಂ-೫ರಂತೆ ಬಾಧಿತ ವ್ಯಕ್ತಿಗೆ ಸಿಗಬೇಕಾದ ಪರಿಹಾರವನ್ನು ತಿಳಿಸುತ್ತಾರೆ.

೨. ಸಂರಕ್ಷಣಾಧಿಕಾರಿ ಇಲ್ಲವೇ ಸೇವೆಯನ್ನು ಒದಗಿಸುವವರು ಇನ್‌ಚಾರ್ಜ್ ಅಧಿಕಾರಿಗಳಾಗಿರುತ್ತಾರೆ. ಸಮೀಪದ ಪೋಲೀಸ್ ಠಾಣೆಗೆ ನಿಮ್ಮನ್ನು ಅವರು ಕರೆದುಕೊಂಡು ಹೋಗಿ ಬಾಧಿತ ಮಹಿಳೆ(ಬಾಧಿತ ವ್ಯಕ್ತಿಯನ್ನು)ಯಿಂದ ದೂರನ್ನು ಕೊಡಿಸುವರು ಮತ್ತು ಪರಿಹಾರಕ್ಕಾಗಿ ಕಲಂ-೯ ಹಾಗೂ ೧೦ರ ಅನ್ವಯ ಅರ್ಜಿ ಕೊಡಿಸುವರು.

೩. ಹಿಂಸೆಗೊಳಗಾದ ಮಹಿಳೆ ಹಾಗೂ ಆಕೆಯ ಮಕ್ಕಳಿಗೆ ರಕ್ಷಣೆ ಸಿಗುವಂತೆ ಮಾಡುತ್ತಾರೆ ಮತ್ತು ಕಲಂ-೧೮ರ ಪ್ರಕಾರ ಕೌಟುಂಬಿಕ ಹಿಂಸೆ ನಡೆಯದಂತೆ ನೋಡಿಕೊಳ್ಳುತ್ತಾರೆ.

೪. ಸಂಕೀರ್ಣ ವಿಷಯವಲ್ಲಿ ಮಹಿಳೆಯ ರಕ್ಷಣೆ ಮತ್ತು ಅವಳ ಮಕ್ಕಳ ರಕ್ಷಣೆ ಇಲ್ಲವೆ ನಿರ್ದಿಷ್ಟ ಅಪಾಯದ ಬಗೆಗೆ ಇಲ್ಲವೆ ಮಹಿಳೆಗೆ ಅಸುರಕ್ಷತೆ ಅಂದರೆ ಅವಳ ಮಕ್ಕಳಿಗೆ ಇರುವ ಭಯದ ಬಗೆಗೆ ಅರ್ಜಿ ಕೊಡಬಹುದು.

೫. ಬಾಧಿತ ವ್ಯಕ್ತಿ (ಮಹಿಳೆ) ಯಾವ ಮನೆಯಲ್ಲಿ ಗೃಹಕೃತ್ಯದ ಹಿಂಸೆಗೆ ಒಳಗಾಗಿದ್ದಾರೋ ಆ ಮನೆಯಲ್ಲಿಯೇ ವಾಸಿಸುವ ಮತ್ತು ಉಳಿದ ಜನರ ವಿರುದ್ಧ ಆಕೆಗೆ ತೊಂದರೆ ಕೊಡದಂತೆ ತಾಕೀತು ಅಥವಾ ರಕ್ಷಣೆ ಪಡೆಯಬಹುದು. ಮಹಿಳೆ ಅದೇ ಮನೆಯಲ್ಲಿ ವಾಸಿಸತಕ್ಕದ್ದು. ಆಕೆ ಉಪಯೋಗಿಸುತ್ತಿರುವುದರಲ್ಲಿ ಉಳಿದವರು ಯಾವುದೇ ರೀತಿಯ ಹಸ್ತಕ್ಷೇಪ ಮಾಡುವಂತಿಲ್ಲ. ಆಕೆಗೆ ಇರಬೇಕಾದ ಸೌಲಭ್ಯ, ಆಕೆಯ ಮಕ್ಕಳಿಗೂ ದೊರೆಯತಕ್ಕದ್ದು.

೬. ಬಾಧಿತ ವ್ಯಕ್ತಿಯ ಸ್ತ್ರೀಧನ, ಆಸ್ತಿ, ನಿಮ್ಮ ವಾರಸುದಾರಿಕೆಯಿಂದ ತಪ್ಪಿದ್ದರೆ ವಜ್ರ, ವೈಡೂರ್ಯ, ಅರಿವೆ, ಉಳಿದ ಸಾಮಾನುಗಳ ಅಂದರೆ ಮಹಿಳೆಗೆ ನಿತ್ಯ ಉಪಯೋಗಕ್ಕೆ ಬೇಕಾದ ವಸ್ತುಗಳನ್ನು ಆಕೆ ಬೇಕಾದಂತೆ ಉಪಯೋಗಿಸುವುದಕ್ಕೆ ಹಕ್ಕು ಮುಂತಾದವುಗಳನ್ನು ಕಲಂ-೧೮ರಲ್ಲಿ ನೀಡಲಾಗಿದೆ.

೭. ವೈದ್ಯಕೀಯ ಸೌಲಭ್ಯವನ್ನು ಪಡೆಯತಕ್ಕದ್ದು. ಆಶ್ರಯ ಮನೆಯ ಸೌಲಭ್ಯ, ಸಲಹೆಗಾರರಿಂದ ಸಲಹೆ ಹಾಗೂ ಮತ್ತು ಕಾನೂನಿನ ಸೇವೆಗಳ ಪ್ರಾಧಿಕಾರದಿಂದ ಉಚಿತ ಕಾನೂನು ಪಡೆಯುವುದು, ಈ ಸೌಲಭ್ಯವನ್ನು ಕಲಂ-೬, ೭, ೮, ೯ ಮತ್ತು ೧೪ರಲ್ಲಿ ನೀಡಲಾಗಿದೆ.

೮. ಬಾಧಿತ ವ್ಯಕ್ತಿಯ ವಿರುದ್ಧ ಕೌಟುಂಬಿಕ ಹಿಂಸೆ ಮಾಡುವವರು ಆಕೆಯನ್ನು ಸಂಪರ್ಕಿಸದಂತೆ ಯಾವುದೇ ರೀತಿಯಿಂದ ಮಾತನಾಡದಂತೆ ಮಾಡುವುದು ಕಲಂ-೧೮ರಲ್ಲಿ ತಿಳಿಸಲಾಗಿದೆ.

೯. ದೈಹಿಕ ಇಲ್ಲವೆ ಮಾನಸಿಕ ಹಿಂಸೆಗಾಗಿ ಗಾಯಕ್ಕಾಗಿ, ಹಣದ ರೂಪದಲ್ಲಿ ಪರಿಹಾರ ಪಡೆಯುವುದು. ಅವಳಿಗೆ ಆದ ಬೇರೆ ಯಾವುದೇ ನಷ್ಟಕ್ಕೆ ಹಣದ ಪರಿಹಾರ ಪಡೆಯುವುದು. ಕಲಂ-೨೨ರ ಅನ್ವಯ ಪಡೆಯಬಹುದು.

೧೦. ಕಲಂ-೧೨, ೧೮, ೧೯, ೨೦, ೨೧, ೨೨ ಮತ್ತು ೨೩ರ ಅನ್ವಯ ಈ ದೂರು ಇಲ್ಲವೆ ಅರ್ಜಿ ನೇರವಾಗಿ ನ್ಯಾಯಾಲಯಕ್ಕೆ ಸಲ್ಲಿಸಬಹುದಾಗಿದೆ.

೧೧. ಹಿಂಸೆಗೊಳಗಾದ ಮಹಿಳೆ ಅಥವಾ ವ್ಯಕ್ತಿ ದೂರು ನೀಡಿದ ಅರ್ಜಿಯ ನಕಲು ಪಡೆಯತಕ್ಕದ್ದು. ಹಾಗೆಯೇ ಹಿಂಸೆಯಾದ ವ್ಯಕ್ತಿಯನ್ನು ಪರೀಕ್ಷಿಸಿದ ವೈದ್ಯರಿಂದ ಅದರ ಮೆಡಿಕಲ್ ರಿಪೋರ್ಟ್‌ನ್ನು, ಅದರಂತೆ ಆಕೆಯ ಮಕ್ಕಳನ್ನು ಪರೀಕ್ಷೆ ಮಾಡಿದ್ದರೆ ಅದರ ನಕಲನ್ನು ಸಹ ಪಡೆಯತಕ್ಕದ್ದು.

೧೨. ಸಂರಕ್ಷಣಾಧಿಕಾರಿಯು ಇಲ್ಲವೆ ಪೋಲೀಸ್ ಅಧಿಕಾರಿಯು ನಿಮ್ಮನ್ನು ಅಪಘಾತದಿಂದ ಸಂರಕ್ಷಿಸಲು ಸಹಾಯ ಮಾಡುವುದು."[೧೧]

ಕೌಟುಂಬಿಕ ಹಿಂಸೆ ಪ್ರಕರಣದಲ್ಲಿ ನ್ಯಾಯಾಲಯದಿಂದ ನೀಡಲಾದ ರಕ್ಷಣಾ ಆದೇಶವನ್ನು ಉಲ್ಲಂಘಿಸಿದಲ್ಲಿ ಪತಿ ಅಥವಾ ಸಹವಾಸಿ ಒಂದು ವರ್ಷ ಕಠಿಣ ಕಾರವಾಸ ಅಥವಾ ಸರಳ ಕಾರವಾಸದ ಶಿಕ್ಷೆಗೆ ಒಳಗಾಗುತ್ತಾರೆ ಅಥವಾ ೨೦ ಸಾವಿರ ರೂ.ಗಳು ದಂಡವನ್ನು ತೆರಬೇಕಾಗುತ್ತದೆ.

ಅಪರಾಧವೆನಿಸುವ ಒಂದು ಕೃತ್ಯವನ್ನು ದಂಡನೀಯವನ್ನಾಗಿಸುವ ಕಾನೂನನ್ನು ರಚಿಸುವುದು ಮತ್ತು ಶಿಕ್ಷೆಯನ್ನು ನಿಗದಿಪಡಿಸುವುದು. ಯಾವುದೇ ಸಮಸ್ಯೆಯನ್ನು ಪರಿಹರಿಸುವ ಮೇಲ್ಮೈ ಪ್ರಯತ್ನವಷ್ಟೇ ಆಗುತ್ತದೆ. ಸಮಸ್ಯೆಯ ಆಳಕ್ಕೆ ಇಳಿಯದೇ ಮೂಲವನ್ನು ಶೋಧಿಸಿ ಪರಿಹಾರ ನೀಡದ ಯಾವುದೇ ಪ್ರಯತ್ನವೂ ಮೇಲ್ಮೈ ಪ್ರಯತ್ನವಾಗಿಯಷ್ಟೇ ಉಳಿದು ಬಿಡಬಹುದು.

ಈ ಎಲ್ಲದಕ್ಕೂ ಅಂತಿಮ ಪರದೆ ಎಳೆಯಲು ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ ಒಂದು ಹೆಜ್ಜೆ ಎಂದರೂ ಅದು ಎಷ್ಟರಮಟ್ಟಿಗೆ ಯಶಸ್ವಿಯಾಗುವುದು? ನಮ್ಮ ದೇಶದಲ್ಲಿ ಕಾಯಿದೆಗಳು ಸೃಷ್ಟಿ ಬಹು ಸುಲಭವಾಗಿ ಕಂಡುಬಂದರೂ ಅವುಗಳ ಕಾರ್ಯ ಮಾತ್ರ ಸರಿಯಾಗಿ ನಡೆಯುವುದಿಲ್ಲ. ಇದಕ್ಕೆ ಇದುವರೆಗೆ ಜಾರಿಯಾಗಿ ವಿಫಲಗೊಂಡಿರುವ ಸಮಾಜ ಸುಧಾರಣಾ ಕಾನೂನುಗಳು ಸಾಕ್ಷಿ. ವರದಕ್ಷಿಣೆ ಕಾಯಿದೆ ಬಂದರೂ ಅದು ಎಷ್ಟರಮಟ್ಟಿಗೆ ವರದಕ್ಷಿಣೆ ಪಿಡುಗನ್ನು ನಿವಾರಿಸುವಲ್ಲಿ ಸಫಲಗೊಂಡಿದೆ ಎನ್ನುವುದು ಇದು ಪ್ರಶ್ನಾರ್ಹ? ನಮ್ಮ ದೇಶದಲ್ಲಿ ಕಾಯಿದೆ ರಚಿಸುವುದರ ಜೊತೆಗೆ ಮಹಿಳೆಯರಲ್ಲಿ ಅನಕ್ಷರತೆಯನ್ನು

ಹೋಗಲಾಡಿಸುವಲ್ಲಿ ಪ್ರಮುಖ ಪಾತ್ರವಹಿಸಬೇಕು. ಹಾಗೆಯೇ ಆರ್ಥಿಕ ಸ್ವಾವಲಂಬನೆಯ ಪರಿಸ್ಥಿತಿಯನ್ನು ಸೃಷ್ಟಿ ಮಾಡಬೇಕು ಮತ್ತು ನೊಂದ ಮಹಿಳೆಯರಿಗೆ ನ್ಯಾಯ ಸಿಗುವಲ್ಲಿ ನ್ಯಾಯಾಲಯಗಳು ಹಾಗೂ ಇತರ ಸರ್ಕಾರಿ ಸಂಘ-ಸಂಸ್ಥೆಗಳ ಪಾತ್ರ ಅಷ್ಟೇ ಮುಖ್ಯವಾಗುತ್ತದೆ. ಹೆಣ್ಣುಮಕ್ಕಳಿಗೆ ಕುಳಿತಿರುವ ಅರಿವು ಮೂಡಿಸುವ ಕಾರ್ಯಗಾರಗಳು ನಡೆಯಬೇಕು.

ಇಂಥದೊಂದು ಸಾಮಾಜಿಕ ಸಮಸ್ಯೆಯನ್ನು ಪರಿಹರಿಸಲು ಕಾನೂನಿನ ಕಟ್ಟುನಿಟ್ಟಾದ ಅನುಷ್ಠಾನ ಎಷ್ಟು ಮುಖ್ಯವೋ ಸಮಾಜದ ಸದಸ್ಯರಾದ ಸ್ತ್ರೀ-ಪುರುಷರೆಲ್ಲರೂ ಪಾಲ್ಗೊಳ್ಳುವಿಕೆ, ಗೌರವಿಸುವಿಕೆ ಅಷ್ಟೇ ಮುಖ್ಯವಾದುದು. ಏಕೆಂದರೆ ಇದು ಕೇವಲ ಮಹಿಳೆಯರ ಸಮಸ್ಯೆಯಾಗಿರದೇ ಸಾಮಾಜಿಕ ಸಮಸ್ಯೆಯಾಗಿದೆ.

ಟಿಪ್ಪಣಿಗಳು

೧. ಡಾ. ಗೀತಾ ಕೃಷ್ಣಮೂರ್ತಿ, ೨೦೦೭, **ಮಹಿಳೆ ಸಮಾಜ ಮತ್ತು ಕಾನೂನು**, ಪು. ೪೬-೪೭.

೨. ಅದೇ.....

೩. ಡಾ. ಗೀತಬಾಲಿ ನಾಯಕ್, ೩೧.೩.೨೦೦೭, **ಪ್ರಜಾವಾಣಿ ಪತ್ರಿಕೆ.**

೪. ಅದೇ.....

೫. ಅದೇ.....

೬. Ministry Law and Justice. 2005. **The Gazette of India, Chapter II,** page No. 1.

೭. S.C Hiremath. 2007. **The Protection of Women from Domestic Violence Rules-2005-06,** Page No. 1.

೮. ಅದೇ.....

೯. ಡಾ. ಗೀತಾ ಕೃಷ್ಣಮೂರ್ತಿ, ೨೩ ನವೆಂಬರ್, ೨೦೦೬, **ಕಾನೂನು ಮತ್ತು ಕಾಯಿದೆ,** ತರಂಗ, ಪು. ೫೦.

೧೦. (2 to 17 Rules) Ministry of Law and Justice. **The Gazette of India,** Chapter-5. Page No. 2-11.

೧೧. S.C Hiremath. 2007. **The Protection of Women from Domestic Violence Rules 2005-06,** page No. 63-65.

• • •

ಅಧ್ಯಾಯ ೬

ಅಧ್ಯಯನದಿಂದ ಕಂಡುಕೊಂಡದ್ದು

ಅಧ್ಯಾಯ ೬

ಅಧ್ಯಯನದಿಂದ ಕಂಡುಕೊಂಡದ್ದು

ಮಹಿಳೆಯು ನಾನಾ ಬಗೆಯ ಹಿಂಸೆ, ಕಿರುಕುಳ, ದೌರ್ಜನ್ಯಗಳನ್ನು ಎದುರಿಸುತ್ತಿರುವುದರಲ್ಲಿ ಕೌಟುಂಬಿಕ ಹಿಂಸೆಯೂ ಒಂದು. ಅಂತಹ ಹಿಂಸೆ ಮಹಿಳೆಯನ್ನು ಅತಂತ್ರ ಸ್ಥಿತಿಗೆ ತಂದೊಡ್ಡಿದೆ. ಈ ಅತಂತ್ರ ಸ್ಥಿತಿಯೇ ಮಹಿಳೆಯ ಶೋಷಣೆಯ ನೆಲೆಯಾಗಿ ನಿಂತಿದೆ. ಕೌಟುಂಬಿಕ ಹಿಂಸೆಯ ಅಧ್ಯಯನದಲ್ಲಿ ಕಂಡು ಬರುವುದೇನೆಂದರೆ ಮಹಿಳೆಯನ್ನು ಎರಡನೇ ದರ್ಜೆಯವಳನ್ನಾಗಿ ಕಾಣುವಂತಹ ಸ್ಥಿತಿ ನಿರ್ಮಾಣವಾಗಿ ಈ ಹಿಂಸೆಯು ಮಹಿಳೆಯ ದೈಹಿಕ, ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರಿದೆ.

ಪ್ರಸ್ತುತ ಅಧ್ಯಯನದಲ್ಲಿ ಪ್ರಮುಖವಾಗಿ ಆರು ಅಧ್ಯಾಯಗಳನ್ನು ಮಾಡಿಕೊಂಡಿದ್ದು ಪ್ರತಿಯೊಂದು ಅಧ್ಯಾಯದಲ್ಲಿ ಕೌಟುಂಬಿಕ ಹಿಂಸೆಯ ಕುರಿತಾಗಿ ವಿಷಯವನ್ನು ಚರ್ಚಿಸಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಮಹತ್ವ, ಸ್ವರೂಪ ಮುಂತಾದ ಅಂಶಗಳನ್ನು ಕುರಿತು ಚರ್ಚಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಕ್ಷೇತ್ರಕಾರ್ಯ ಕೈಗೊಂಡು ಮಾಹಿತಿಯನ್ನು ಸಂಗ್ರಹಿಸಿ ಅಧ್ಯಯನಕ್ಕೆ ಒಳಪಡಿಸಿದ್ದೇನೆ.

ಎರಡನೆಯ ಅಧ್ಯಾಯದಲ್ಲಿ ಕೌಟುಂಬಿಕ ಹಿಂಸೆಯ ನಿರ್ವಚನ ಮತ್ತು ಸ್ವರೂಪ, ಕೌಟುಂಬಿಕ ಹಿಂಸೆಗೆ ಕಾರಣವಾದ ಅಂಶಗಳು. ಇದರಿಂದ ಮಹಿಳೆಯ ಮೇಲೆ ಆದ ಪರಿಣಾಮ ತಿಳಿಸುವಲ್ಲಿ ಪ್ರಯತ್ನಿಸಿರುವೆ. ಮಹಿಳೆಗೆ ಹಿಂಸೆ ಎನ್ನುವುದು ನಾನಾ ಬಗೆಯಿಂದ ಕೂಡಿದ್ದು, ಮನೆಯ ಹೊರಗಡೆಯಲ್ಲದೆ ಮನೆಯ ಒಳಗಡೆನೇ, ಮನೆಯ ಸದಸ್ಯರಿಂದಲೇ ಹಿಂಸೆಗೆ ಒಳಪಡುವುದರಿಂದ ಅದರ ನಿವಾರಣೆಗೆ ಕಾನೂನಿನಾತ್ಮಕ ರಕ್ಷಣೆ ಮತ್ತು ಪರಿಹಾರದ ವಿಷಯಗಳನ್ನು ಈ ಅಧ್ಯಯನದಲ್ಲಿ ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ.

ಮೂರನೆಯ ಅಧ್ಯಾಯ 'ಜನಪದ ಸಾಹಿತ್ಯದಲ್ಲಿ ಹಿಂಸೆಯ ಸ್ವರೂಪ' ಕುರಿತಾಗಿದೆ. ಜನಪದ ಸಾಹಿತ್ಯದಲ್ಲಿ ಕೌಟುಂಬಿಕ ಹಿಂಸೆಯನ್ನು, ಹಿಂಸೆಯ ಸ್ವರೂಪವನ್ನು ಜನಪದ ಕಲೆ, ಗಾದೆ, ಒಡಪು ಗೀತೆಗಳಲ್ಲಿ ಮುಖಾಂತರ ತಿಳಿಯಲು ಪ್ರಯತ್ನಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಪ್ರಕರಣಗಳ ಅಧ್ಯಯನ ನಡೆಸಲಾಗಿದೆ. ಅಧ್ಯಯನ ವ್ಯಾಪ್ತಿಯ ಅನುಗುಣವಾಗಿ ಹಲವಾರು ವೈಧಾನಿಕತೆಗಳಿಂದ ಪ್ರಕರಣಗಳಲ್ಲಿನ ವಿಷಯಗಳ ವಿಶ್ಲೇಷಣೆಯನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ.

ಐದನೆಯ ಅಧ್ಯಾಯದಲ್ಲಿ ಕೌಟುಂಬಿಕ ಹಿಂಸೆಯ ಬಗ್ಗೆ ಸಂವಿಧಾನದತ್ತವಾದ ಕಾನೂನುಗಳ ಕುರಿತು ಚರ್ಚಿಸಲಾಗಿದೆ. ಕಾನೂನಿನ ಬದಲಾವಣೆ ಇತಿಮಿತಿಗಳು, ಕಾನೂನಿನ ರೂಪುರೇಷಗಳ ಸ್ವರೂಪವನ್ನು ಕುರಿತಾಗಿ ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ಅಧ್ಯಯನದಿಂದ ಕಂಡುಕೊಂಡ ಅಂಶಗಳನ್ನು ಚರ್ಚಿಸಲಾಗಿದೆ.

ಕೌಟುಂಬಿಕ ದೌರ್ಜನ್ಯವೆನ್ನುವುದು ಕೇವಲ ಗಂಡ ಹೆಂಡತಿಯರಿಗೆ ಸಂಬಂಧಪಟ್ಟದ್ದಾಗಿರದೇ ಒಂದೇ ಮನೆಯಲ್ಲಿ ವಾಸಿಸುತ್ತಿರುವ ಯಾವುದೇ ಪುರುಷ ಸಂಬಂಧಿಯಿಂದ ಸಂಕಷ್ಟಕ್ಕೊಳಗಾಗಿರುವ ವಿಧವೆ, ಮಗಳು, ಮೊಮ್ಮಗಳು, ತಾಯಿ, ಸಹೋದರಿ ಹಾಗೂ ವಿವಾಹದ ಮೂಲಕ ಸಂಬಂಧಿಯಾದ ಮಹಿಳೆ. ರಕ್ತಸಂಬಂಧಿ ಮಹಿಳೆ, ದತ್ತಕದಿಂದ ಸಂಬಂಧಿಯಾದ ಮಹಿಳೆ ಮತ್ತು ಒಂದೇ ಸೂರಿನಡಿ ವಾಸಿಸುತ್ತಿರುವ ಒಂಟಿ ಮಹಿಳೆಯರು ಹೀಗೆ ನಾನಾ ತರಹದ ರೀತಿಯ ವ್ಯಾಪ್ತಿಯನ್ನು ಮೀರಿ ಹಿಂಸೆಯನ್ನು ಸೃಷ್ಟಿ ಮಾಡಿ ಮಹಿಳೆಯ ಅಸ್ಮಿತೆಯನ್ನು ಮರೆಮಾಚಿದೆ. ಉದಾ - ಪ್ರಕರಣ ೮ರಲ್ಲಿ ಹೇಳುವ ಹಾಗೆ ಕೌಟುಂಬಿಕ ಹಿಂಸೆಯಲ್ಲಿ ಮಹಿಳೆಯರಿಗೆ ಸಂಪ್ರದಾಯಿಕ ಮೌಲ್ಯಗಳನ್ನು ಪ್ರತಿಬಿಂಬಿಸಿ ಆಕೆಯನ್ನು ದೈಹಿಕ ಮತ್ತು ಮಾನಸಿಕ ಹಿಂಸೆಗೆ ಒಳಪಡಿಸಿದೆ.

ಮಹಿಳೆಯನ್ನು ಈ ಕೌಟುಂಬಿಕ ಹಿಂಸೆಯು ಸಾಮಾಜಿಕ ಸಂಸ್ಥೆಗಳಿಂದ ದೂರ ಉಳಿಯುವಂತೆ ಮಾಡಿ ಆಕೆಯ ಚಲನಶೀಲತೆ ಹಾಗೂ ಸ್ವಂತ ಶಕ್ತಿಯ ಕುರಿತು ಆಲೋಚಿಸುವ ಅವಕಾಶವನ್ನೇ ಕಸಿದುಕೊಂಡಿದೆ. ಮದುವೆಯಾಗಿ ಹೊಸ ಬದುಕಿನ ಕನಸುಗಳೊಂದಿಗೆ ಗಂಡನ ಮನೆಗೆ ಬರುವ ಮಹಿಳೆಯು ಹಲವು ರೀತಿಯ ಸವಾಲುಗಳನ್ನು ಎದುರಿಸುತ್ತಾಳೆ. ತಾನು ಹುಟ್ಟಿ ಬೆಳೆದ ಪರಿಸರವನ್ನು ಬಿಟ್ಟು ಹೊಸ ಪರಿಸರಕ್ಕೆ ಹೊಂದಿಕೊಂಡು ಅವರ ಅಭಿರುಚಿ ಧೋರಣೆಗಳನ್ನು ಅರ್ಥಮಾಡಿಕೊಳ್ಳುವಾಗ ಏನಾದರೂ ವ್ಯತ್ಯಾಸವಾದರೆ ಹಿಂಸೆಗೊಳಗಾಗುವುದು ಮಹಿಳೆಯೇ. ಈ ಹಿಂಸೆಯ ಒಳಗಡೆ ಪುರುಷಪ್ರಧಾನ ಮೌಲ್ಯಗಳ ವಿಜೃಂಭಣೆಯಿದೆ. ಗಂಡನ ಸಂಶಯ, ಕಪ್ಪಾಗಿದ್ದೀಯಾ, ದುಡಿಯುವುದಿಲ್ಲ. ಗಂಡನ ದುಷ್ಚಟಗಳಿಂದ ಹೀಗೆ ನಾನಾ ರೀತಿಯಲ್ಲಿ ಮಹಿಳೆಗೆ ಹಿಂಸೆಯನ್ನು ಸೃಷ್ಟಿಮಾಡಿ ಆಕೆಯನ್ನೇ ಹೊಣೆಗಾರಳನ್ನಾಗಿ ಮಾಡಿದೆ.

ಕುಟುಂಬದವರ ಹಾಗೂ ಸಮಾಜದವರ ಬೆಂಬಲದ ಕೊರತೆಯಿಂದಾಗಿ ಮಹಿಳೆಯರು ತಮಗಾದ ಅನ್ಯಾಯದ ಬಗ್ಗೆ ನ್ಯಾಯಾಲಯಕ್ಕೆ ಹೋಗುವ ಧೈರ್ಯ ಮಾಡುವುದಿಲ್ಲ ಮತ್ತು ಸಂಸ್ಥೆಗಳ ಸಹಾಯ ಪಡೆಯಲು ಹಿಂಜರಿಯುತ್ತಾರೆ. ಹೆಣ್ಣಿನ ಲೈಂಗಿಕತೆಯನ್ನು ಗುರಿಯಾಗಿಟ್ಟುಕೊಂಡು ‘ವಿವಾಹ ಕುಟುಂಬ

ಸಂಸ್ಥೆಗಳು' ಬೆಳೆದು ಬಂದಿವೆ ಎಂದೆನಿಸುತ್ತದೆ. ಪುರುಷ ಸಮಾಜವು ಹೆಣ್ಣಿಗೆ ಸ್ಥಿರ ಮಾದರಿ ಪಾತ್ರಗಳನ್ನು ಆರೋಪಿಸಿ ಆಕೆಯನ್ನು ಹಿಂಸಿಸತೊಡಗಿದೆ. ಕೌಟುಂಬಿಕ ಹಿಂಸೆಯ ಕುರಿತಿರುವ ಕಾನೂನು ಯಶಸ್ವಿಯಾಗಬೇಕಾದರೆ ಅದು ಜಾರಿಯಾಗುವಂತೆ ನೋಡಿಕೊಳ್ಳಬೇಕು. ತಪ್ಪಿದಲ್ಲಿ ಅಂಥವರಿಗೆ ಕಠಿಣ ಶಿಕ್ಷೆಯನ್ನು ವಿಧಿಸುವಂತಾಗಬೇಕು.

ಕೌಟುಂಬಿಕ ದೌರ್ಜನ್ಯವನ್ನು ತಡೆಗಟ್ಟುವಿಕೆಗೆ, ಕಾನೂನು ಮಹಿಳೆಯರಲ್ಲಿ ಆತ್ಮವಿಶ್ವಾಸವನ್ನು ಮೂಡಿಸಿ ಅವರ ಮೂಲಭೂತ ಘನತೆ ಗೌರವವನ್ನು ಕಾಪಾಡುವ ನಿಟ್ಟಿನಲ್ಲಿ ಕ್ರಿಯಾಶೀಲವಾಗಬೇಕಾಗಿದೆ. ಅಗತ್ಯವಿರುವ ಕಡೆ ಖಾಸಗೀ ನ್ಯಾಯಾಲಯಗಳನ್ನು ಸ್ಥಾಪಿಸಬೇಕು ಮತ್ತು ರಹಸ್ಯ ಪ್ರಕ್ರಿಯೆಗಳಿಗೆ ಒತ್ತು ಕೊಡಬೇಕು. ಸಾಕ್ಷ್ಯಗಳಿಗೆ ಮತ್ತು ದೌರ್ಜನ್ಯಕ್ಕೊಳಗಾದ ಮಹಿಳೆಗೆ ಜೀವ ಭದ್ರತೆ ಕೊಡುವಂತಾಗಬೇಕು. ಕೌಟುಂಬಿಕ ದೌರ್ಜನ್ಯದಂತಹ ಒಂದು ಪಿಡುಗನ್ನು ತೊಡೆದು ಹಾಕುವಲ್ಲಿ ಸಾಮೂಹಿಕ ಸಕ್ರಿಯವಾಗಿ ಪಾಲ್ಗೊಳ್ಳುವಿಕೆ ಮುಖ್ಯವಾದುದು. ಹೀಗಾದಾಗ ಮಾತ್ರ ನೊಂದ ಮಹಿಳೆಗೆ ಬದುಕು ಎದುರಿಸುವ ಕೆಚ್ಚು ಮೂಡಲು ಸಾಧ್ಯ.

ಕುಟುಂಬದಲ್ಲಿ ಮಕ್ಕಳನ್ನು ಸಾಮಾಜೀಕರಣಕ್ಕೊಳಪಡಿಸುವಾಗ ಲಿಂಗತಾರತಮ್ಯತೆಯ ಭಾವನೆಗಳನ್ನು ಬೆಳೆಸದೇ ಶಿಕ್ಷಣ, ಆಸ್ತಿಹಕ್ಕು, ಆರೋಗ್ಯ ಸೇವೆಗಳು, ಸಾಂಸ್ಕೃತಿಕ ಪ್ರವೇಶ, ರಾಜಕೀಯದಲ್ಲಿ ಸಮಾನ ರೀತಿಯ ಪ್ರಾತಿನಿಧ್ಯ ಕಲ್ಪಿಸಿಕೊಡುವುದರ ಜೊತೆ ಗೌರವ ಭಾವನೆ ಮೂಡಿಸಬೇಕು. ದೇವರು, ಧರ್ಮ, ಸಂಪ್ರದಾಯ ಆಚರಣೆಗಳ ಹೆಸರಿನಲ್ಲಿ ಕುಟುಂಬದ ಒಳಗಡೆ ನಡೆಯುವ ಹಿಂಸೆಗಳ ಬಗ್ಗೆ ಹೆಣ್ಣು ಮಕ್ಕಳಲ್ಲಿ ಜಾಗೃತಿ ಮೂಡಿಸಬೇಕು. ಇದಕ್ಕೆ ಸಂಬಂಧಿಸಿದಂತೆ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಬೇಕು. ಲಿಂಗ ಅಸಮಾನತೆಯ ಹಿನ್ನೆಲೆಯಲ್ಲಿ ಹುಟ್ಟಿದ ಕೌಟುಂಬಿಕ ಹಿಂಸೆ, ಕಿರುಕುಳ, ದೌರ್ಜನ್ಯಗಳನ್ನು ಮಹಿಳೆಯರು ಪ್ರತಿಭಟಿಸುವ, ಪ್ರಶ್ನಿಸುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಪುರುಷತ್ವ ಮತ್ತು ಸ್ತ್ರೀತ್ವದ ಪರಿಕಲ್ಪನೆಗಳು ಬದಲಾಗಬೇಕು. ಈ ನಿಟ್ಟಿನಲ್ಲಿ ಲಿಂಗ ಸೂಕ್ಷ್ಮತೆಯ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಹೆಣ್ಣುಮಕ್ಕಳಿಗೆ ಮದುವೆ ಅಂತಿಮ ಗುರಿ ಅಲ್ಲ, ಅವರು ವ್ಯಕ್ತಿಯಾಗಿ ವಿಕಾಸಗೊಳ್ಳಲು ಪೂರಕವಾದ ಶಿಕ್ಷಣದ ಅವಕಾಶಗಳನ್ನು ನೀಡಬೇಕು.

• • •

ಅನುಬಂಧ

ಆಧಾರ ಗ್ರಂಥಗಳು

ಪತ್ರವಿವರ

ಆಧಾರ ಗ್ರಂಥಗಳು

೧. ಬಿ.ಪಿ. ಆಶಾಮುಮ್ಮಾರಿ, ಮಹಿಳಾ ಕಾವ್ಯದಲ್ಲಿ ಹೆಣ್ಣಿನ ಪರಿಕಲ್ಪನೆ.

೨. ಇಂದಿರಾ ಆರ್., ೨೦೦೨, ಮಹಿಳೆ ಸಮಾಜ ಮತ್ತು ಸಂಸ್ಕೃತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೫೮೩ ೨೭೬.

೩. ಇಂದಿರಾ ಆರ್., ೨೦೦೦, ಮಹಿಳೆ ಮತ್ತು ಕೌಟುಂಬಿಕ ಹಿಂಸೆ, ಶ್ರೀಮತಿ ಯೋಧ ರಾಘವ ಟ್ರಸ್ಟ್, ಮೈಸೂರು.

೪. ಉಷಾ ಎಂ., ೨೦೦೪, ಮಹಿಳಾ ಚಳುವಳಿ ಮತ್ತು ಮಹಿಳಾ ವಿಷಯಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೫೮೩ ೨೭೬.

೫. ಒಡೆಯರ್ ಡಿ. ಹೆಗ್ಗಡೆ, ಮಹಿಳಾ ಅಧ್ಯಯನಗಳು, ಆರ್ಥಿಕ ನೆಲೆಗಳು ಮತ್ತು ಆಯಾಮಗಳು, ಮಾನವ ಅಭಿವೃದ್ಧಿ ಅಧ್ಯಯನಗಳ ಕೇಂದ್ರ, ರಾಮಕೃಷ್ಣನಗರ, ಮೈಸೂರು-೨೨.

೫. ಕೋದಂಡರಾಮ ಎನ್.ಕೆ., ೨೦೦೫, ಮಹಿಳೆ ಮತ್ತು ಸಾಮಾಜಿಕತೆ, ಶ್ರೀಮತಿ ಯಶೋಧ ರಾಘವ ಟ್ರಸ್ಟ್, ಮೈಸೂರು.

೬. ಕಮಲ ಹಂಪನಾ, ೨೦೦೩, ಬೊಗಸೆ (ಮಹಿಳಾ ಸುತ್ತಮುತ್ತ), ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು.

೭. ಕಿಶೋರಿ ನಾಯಕ್ ಕೆ., ೨೦೦೭, ಲಿಂಗತ್ವ ಸಮನ್ವಾಯ, ಮಹಿಳಾ ಅಧ್ಯಯನ ಕೇಂದ್ರ, ಮಂಗಳೂರು ವಿಶ್ವವಿದ್ಯಾಲಯ, ಮಂಗಳ ಗಂಗೋತ್ರಿ, ಮಂಗಳೂರು ೫೭೪ ೧೯೯.

೮. ಗಾಯಿತ್ರಿ ಎನ್., ೧೯೯೮, ಮಹಿಳಾ ಚಳುವಳಿಗಳು ಮತ್ತು ಮಜಲುಗಳು, ನವಕರ್ನಾಟಕ, ಬೆಂಗಳೂರು.

೯. ಗಾಯಿತ್ರೀ ನಾವಡ, ೧೯೯೯, ಕರಾವಳಿ ಜಾನಪದ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಸಂಸ್ಥೆ, ಉಡುಪಿ.

೧೦. ಗಾಯಿತ್ರೀ ನಾವಡ, ೨೦೦೩, **ಮಹಿಳಾ ಸಂಕಥನ**, ಕನ್ನಡ ಪುಸ್ತಕ ಪ್ರಾಧಿಕಾರ, ಚಾಮರಾಜಪೇಟೆ, ಬೆಂಗಳೂರು ೫೬೦ ೦೧೮.

೧೧. ಗೀತಾ ಕೃಷ್ಣಮೂರ್ತಿ, ೨೦೦೬, **ಮಹಿಳೆ ಸಮಾಜ ಕಾನೂನು**, ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು.

೧೨. ಚಂದ್ರಶೇಖರ್ ಬಿ.ಎಸ್., **ಸಮಾಜ ವಿಜ್ಞಾನಗಳಲ್ಲಿ ಸಂಶೋಧನಾ ವಿಧಾನಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೫೮೩ ೨೭೬.

೧೩. ನೇಮಿಚಂದ್ರ, ೨೦೦೫, **ಮಹಿಳಾ ಲೋಕ**, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೧೪. ಪೂರ್ವಚಾರ್ ಎಂ., ೨೦೦೪, **ಭಾರತೀಯ ಸಮಾಜ ಪರಿಚಯ**, ಚೇತನ ಬುಕ್‌ಹೌಸ್, ಅಂಜನಾದ್ರಿ ರೇಣುಕಾಚಾರ್ಯ ದೇವಸ್ಥಾನ ರಸ್ತೆ, ಲಕ್ಷ್ಮೀ ಟಾಕೀಸ್ ಹಿಂಭಾಗ, ಮೈಸೂರು ೫೭೦ ೦೨೪.

೧೫. ಪ್ರೀತಿ ಶುಭಚಂದ್ರ, ೨೦೦೨, **ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳುವಳಿಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೫೮೩ ೨೭೬.

೧೬. ಮೀರಾ ಎಲ್.ಜಿ., ೨೦೦೪, **ಸ್ತ್ರೀಸಂವೇದನೆಯಲ್ಲಿ ಕನ್ನಡ ಕಥನ**, ಶಕ್ತಿ ಪ್ರಿಂಟರ್ಸ್ ಮತ್ತು ಪಬ್ಲಿಷರ್ಸ್, ಬೆಂಗಳೂರು.

೧೭. ಮೀರಾ ಈ.ಜಿ., ಅನು ನಾಗರಾಜ, ೧೯೯೬, **ಮಾಸಿಹಿಯ ಮಾತು**, ಹೆಗ್ಗೋಡು ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.

೧೮. ಮೂರ್ತಿ ಕೆ.ಆರ್.ಕೆ., ೨೦೦೬, **ಹೆಣ್ಣು ಸರ್ವಜ್ಞನ ದೃಷ್ಟಿಯಲ್ಲಿ**, ಜನಪದ ಪ್ರಕಾಶನ, ಬೆಂಗಳೂರು ೨೨.

೧೯. ಮೈಲಹಳ್ಳಿ ರೇವಣ್ಣ, ಸಂ., ೧೯೮೫, **ಅಡವಿ ಗಮಾರ ಮತ್ತು ಇತರ ಜನಪದ ಕಥೆಗಳು**, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

೨೦. ಮೂರ್ತೇಶ್ವರಯ್ಯ ಬಿ.ಕೆ., ೨೦೦೦, **ಮಹಿಳೆ ಸಮಾಜ ಮತ್ತು ಕಾನೂನು**, ಸ್ವಪ್ನ ಬುಕ್ ಹೌಸ್, ಬೆಂಗಳೂರು.

೨೧. ರಾಜಶೇಖರ್ ಎಸ್., ೨೦೦೧, **ಭಾರತೀಯ ಸಮಾಜ**, ಭ್ರಮರ ಪ್ರಕಾಶನ, ಶಿವಮೊಗ್ಗ.

೨೨. ರಾಮಚಂದ್ರೇಗೌಡ ಹಿ.ಶಿ., ೨೦೦೩, **ತನ್ನ ತಾವು**, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು.

೨೪. ರಾಮಾನುಜನ್ ಎ.ಕೆ., ಸಂ., ಅನು: ಮಹಾಬಲೇಶ್ವರರಾವ್, ೨೦೦೪, **ಭಾರತೀಯ ಜನಪದ ಕಥೆಗಳು**, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ಎ-೫ ಗ್ರೀನ್ ಪಾರ್ಕ್, ಹೊಸದೆಹಲಿ.

೨೫. ರುದ್ರಮೂರ್ತಿಶಾಸ್ತ್ರಿ ಸಂ., **ಭಾರತದ ಜನಪದ ಕಥೆಗಳು**, ಎಸ್.ಬಿ.ಎಸ್. ಪಬ್ಲಿಕೇಷನ್ಸ್ ಡಿಸ್ಟ್ರಿಬ್ಯೂಟರ್ಸ್, ರೈಲ್ವೆ ಪ್ಯಾರಲ್ ರೋಡ್, ಕುಮಾರ್ ಪಾರ್ಕ್ ಈಸ್ಟ್, ಬೆಂಗಳೂರು ೫೬೦ ೦೦೧.

೨೬. ವಿಜಯಶ್ರೀ ಸಬರದ, ೨೦೦೫, **ಮಹಿಳೆಯ ಶೋಷಣೆಯ ಸವಾಲುಗಳು**, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗ.

೨೭. ವೀರಣ್ಣ ದಂಡೆ, ೨೦೦೩, **ಕಲ್ಬುರ್ಗಿ ಜಿಲ್ಲೆಯ ಜಾನಪದ ಕಥೆಗಳ ಆಶ ಮತ್ತು ಮಾದರಿಗಳು**, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು.

೨೩. ವಿವಿಧ ಲೇಖಕರು, ೧೯೯೩, **ಕನ್ನಡ ಸಾಹಿತ್ಯದಲ್ಲಿ ಸ್ತ್ರೀಸಂವೇದನೆಯ ಸ್ವರೂಪ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು.

೨೮. Vivekananda Institute for Leadership Development Training Research Advocacy and Consultancy wing of Swami Vivekananda Youth Movement. 2005, **Gender and Law**, Mysore.

೨೯. ವಿಜಯಾ ದಬ್ಬೆ, ೧೯೯೬, **ನಾರಿ ದಾರಿ ದಿಗಂತ**, ರೂಪನ್ನ ಪ್ರಕಾಶನ, ಮೈಸೂರು.

೩೦. ವೆಂಕಟರಮಣಯ್ಯ ಟಿ.ವಿ., ಸಂ., ೧೯೮೭, **ಅವರಿವರ ಕಣ್ಣಲ್ಲಿ ಹೆಣ್ಣು ಗಂಡು**, ತೊಣ್ಣೂರು ಪ್ರಕಾಶನ, ಪದ್ಮಶ್ರೀ-೯, ರಾಜಾಜಿನಗರ, ೪ನೇ ಬ್ಲಾಕ್, ಇ-ವಿಭಾಗ, ಬೆಂಗಳೂರು ೫೬೦ ೦೧೦.

೩೧. ವೆಂಕಟರಾಯಪ್ಪ ಕೆ.ಎಸ್., ೧೯೭೧, **ಸ್ತ್ರೀ ಮತ್ತು ಸಮಾಜ**, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೩೨. ವೆಂಕೋಬರಾವ್ ಡಿ., ೨೦೦೦, **ನ್ಯಾಯಕ್ಕಾಗಿ ಮಹಿಳೆಯರ ಹೋರಾಟ**, ದಿವ್ಯಚಂದ್ರ ಪ್ರಕಾಶನ, ನಂ. ೬೧೭, ಕಾಳಿಕಾ ಸೌಧ, ಪೂರ್ಣಯ್ಯ ಛದ್ರ ರಸ್ತೆ, ಬಳೇಪೇಟೆ ಕ್ರಾಸ್, ಬೆಂಗಳೂರು ೫೬೦ ೦೫೩.

೩೩. ಶಂಕರ ಖಂಡೇರಿ, ೧೯೯೯, **ನೀವು ಮತ್ತು ಕಾನೂನು ವಿವಾಹ ವಿಚ್ಛೇದನ**, ಕನ್ನಡ ಪ್ರಪಂಚ ಪ್ರಕಾಶನ, ಪುತ್ತೂರು ೫೭೪ ೦೦೨, ದಕ್ಷಿಣ ಕನ್ನಡ ಜಿಲ್ಲೆ.

೩೪. ಶಶಿಕಲಾ ಎಸ್.ಡಿ., ಕೆ.ಎಸ್. ರತ್ನಮ್ಮ, ಮಂಜುಳ ಉಲ್ಲಳ್ಳಿ, ಸಂ., ೨೦೦೪, **ವಿಜಯನ್ವೇಷಣೆ**, (ವಿಜಯಾ ದಬ್ಬೆ ಸಾಧನ ಪಥದ ಮಹಿಳಾ ಅಧ್ಯಯನ ಆಯಾಮಗಳು), ವಿಜಯಾ ದಬ್ಬೆ ಅಭಿನಂದನಾ ಗ್ರಂಥ ಸಮಿತಿ, ಶ್ರೀಭೈರವೇಶ್ವರ ಕೃಪ, ಸರಸ್ವತಿಪುರಂ, ಮೈಸೂರು ೫೭೦ ೦೦೯.

೩೫. ಶ್ರೀಮತಿ ಎಚ್.ಎಸ್., ೨೦೦೦, **ಮಹಿಳಾ ಅಧ್ಯಯನ**, ದಕ್ಷಿಣಾಯನ ಜುಲೈ ಸಂಚಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೫೮೩ ೨೭೬.

೩೬. ಶ್ರೀಮತಿ ಎಚ್.ಎಸ್., ೨೦೦೩, **ಸ್ತ್ರೀವಾದ ಚಿಂತನಮಾಲೆ-೩**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೫೮೩ ೨೭೬.

೩೭. ಶೈಲಜ ಹಿರೇಮಠ, ೧೯೯೯, **ಪಾತರದವಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೫೮೩ ೨೭೬.

೩೮. ಶೈಲಜ ಹಿರೇಮಠ, ೨೦೦೬, **ಮಹಿಳಾ ಅಧ್ಯಯನ**, ಜುಲೈ ಸಂಚಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೫೮೩ ೨೭೬.

೩೯. ಸದಾಶಿವಯ್ಯ ಎಚ್.ಎಂ., ೧೯೭೯, **ಸಮಾಜಶಾಸ್ತ್ರ**, ಭಾಗ-೧, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೪೦. ಸಂಧ್ಯಾರೆಡ್ಡಿ, ೨೦೦೩, **ಮಹಿಳಾ ಜಾನಪದ**, ಕರ್ನಾಟಕದ ಜಾನಪದ ಅಕಾಡೆಮಿ, ಬೆಂಗಳೂರು.

೪೧. ಸೊಂದ ಚಂದ್ರಮತಿ, ೨೦೦೫, **ನಾರಿ ಮಿಡಿತ**, ದಾಮಿನಿ ಸಾಹಿತ್ಯ, ಬೆಂಗಳೂರು.

೪೨. ಸರಸ್ವತಿ ರುಷಿಬುದ್ಧ, **ಸ್ತ್ರೀ ಪುರುಷ**, ಇಳಾ ಪ್ರಕಾಶನ, ಬೆಂಗಳೂರು.

೪೩. ಸರಸ್ವತಿ ದೇವಿಗೌಡರ್, **ಮಹಿಳಾ ಜೀವನದ ಸಮಸ್ಯೆಗಳು ಮತ್ತು ಪರಿಹಾರ**, ಎಂ.ಜಿ. ತಾರಮನಿ.

೪೪. ಸೀತಾರಾಮಯ್ಯ ಪಿ., ೧೯೯೨, **ಸಂವಿಧಾನ ಮತ್ತು ಕಾನೂನು**, ಜಿ.ಎಂ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು.

೪೫. ಸಮತಾ ಬಿ. ದೇಶಮಾನೆ, ೨೦೦೩, **ಸಮಾಜಶಾಸ್ತ್ರ ಮತ್ತು ಮಹಿಳೆ**, ಚೇತನಾ ಬುಕ್‌ಹೌಸ್, ಮೈಸೂರು.

೪೬. ಸಂಗೊಳ್ಳಿ ಎಸ್.ಎಸ್., ೨೦೦೬, **ಶ್ರೀಸಾಮಾನ್ಯರಿಗಾಗಿ ಕಾನೂನು, ಮಾನವ ಹಕ್ಕುಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೫೮೩ ೨೭೬.

೪೭. ಹಿರೇಮಠ ಎಸ್.ಸಿ., ೨೦೦೭, **ಹೆಣ್ಣು ಮಕ್ಕಳ ಗೃಹಕೃತ್ಯದ ಹಿಂಸೆಯಿಂದ ಸಂರಕ್ಷಿಸುವ ಅಧಿನಿಯಮ-೨೦೦೫**, ವಿದ್ಯಾನಿಧಿ ಪ್ರಕಾಶನ, ಗದಗ.

೪೮. S.C. Hiremath, 2007. **The Protection of Women From Domestic Voilence Rules - 2006**, Viddynidhi Prakashana, Gadaga.

೪೯. ಹೇಮಲತ ಮಹಿಷಿ, ೧೯೯೫, ಮಹಿಳೆ ಮತ್ತು ಕಾನೂನು, ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು.

೫೦. S.C. Hiremath, 2007. **The Protection of Women From Domestic Voilence Rules - 2006,** Viddynidhi Prakashana, Gadaga.

೫೧. ಭಾರತ ಸರ್ಕಾರ ಕಾನೂನು ಮತ್ತು ನ್ಯಾಯ ಮಂತ್ರಾಲಯ, ೧೯೮೮, **ಭಾರತ ದಂಡ ಸಂಹಿತೆ** (೧೮೬೦ರ ಅಧಿನಿಯಮ ಸಂಖ್ಯೆ ೪೫) ಆಗಸ್ಟ್-೧.

೫೨. Website - W.W.W. gogal.com.

ಪತ್ರಿಕೆಗಳು

೧. ಅಂಜಲಿ ರಾಮಣ್ಣ, ೩೦.೧೧.೨೦೦೬, ಸುಧಾ.

೨. ಗೀತಾಜಾಲಿ ನಾಯಕ್, ೩೧.೩.೨೦೦೨, **ಮಹಿಳೆಯ ಮೇಲೆ ದೌರ್ಜನ್ಯ, ಹೊಸ ಮಸೂದೆಯಿಂದ ತಡೆ ಸಾಧ್ಯವೇ?,** ಪ್ರಜಾವಾಣಿ.

೩. ಗೀತಾ ಕೃಷ್ಣಮೂರ್ತಿ, ೨೬.೧೧.೨೦೦೬, **ಕೌಟುಂಬಿಕ ಕ್ರೌರ್ಯಕ್ಕೆ ಕಡಿವಾಣ ಮಹಿಳೆಯನ್ನು ಹಿಂಸಿಸುವಂತಿಲ್ಲ,** ತರಂಗ.

೪. ಟಿ.ಟಿ.ಕೆ., ೪.೧೧.೨೦೦೬, **ನೊಂದ ಮಹಿಳೆಯರಿಗೆ ನ್ಯಾಯಾಂಗದ ನೆರವು,** ಪ್ರಿಯಾಂಕ.

೫. ಪ್ರತಿಭಾನಂದ ಕುಮಾರ್, ೨೫.೧೧.೨೦೦೬, **ಮಡದಿಯ ಬಡಿದಾನ,** ಪ್ರಜಾವಾಣಿ, ಭೂಮಿಕ ಪುರವಣಿ.

೬. ರೇಖಾ ಕಿಲಾರಿ, ೧೪.೧೧.೨೦೦೬, **ಅಂಗಳಗೆ ಕಾಯ್ದೆಯ ಅಭಯ,** ಪ್ರಜಾವಾಣಿ, ಭೂಮಿಕ ಪುರವಣಿ.

೭. ಸಂಪಾದಕರು, ೨೮.೧೦.೨೦೦೬, **೨೦೦೫ರ ಕೌಟುಂಬಿಕ ಹಿಂಸೆ ಕಾಯ್ದೆಗೆ ಮೊದಲ ಬಲಿ,** ಪ್ರಜಾವಾಣಿ.

೮. ಸಂಪಾದಕರು, ೨೧.೦೨.೨೦೦೭, **ಕೌಟುಂಬಿಕ ಹಿಂಸೆ ತಡೆಕಾಯ್ದೆ ಅನುಷ್ಠಾನಕ್ಕೆ ರಾಜ್ಯದ ಹಿಂದೇಟು?** ಪ್ರಜಾವಾಣಿ.

೯. ಸಂಪಾದಕರು, ೨೭.೧೦.೨೦೦೬, **ಮಹಿಳೆಯ ಮಾರಾಟ ನಾಚಿಕೆಗೇಡು,** ಸಂಯುಕ್ತ ಕರ್ನಾಟಕ.

೧೦. ಸಂಪಾದಕರು, ೨೮.೧೦.೨೦೦೬, **ಮಹಿಳೆಯರಿಗೆ ರಕ್ಷಣೆ,** ಸಂಯುಕ್ತ ಕರ್ನಾಟಕ.

• • •

ವಕ್ತೃ ವಿವರ

೧.	ಹೆಸರು :	ಜಯಲಕ್ಷ್ಮೀ, ಗಂಡ ವೀರಭದ್ರಯ್ಯ
	ವಯಸ್ಸು	೩೦ ವರ್ಷ
	ಮಕ್ಕಳು :	೧ ಗಂಡು, ೧ ಹೆಣ್ಣು
	ಉದ್ಯೋಗ	ವ್ಯವಸಾಯ
	ಶಿಕ್ಷಣ :	ಎಸ್.ಎಸ್.ಎಲ್.ಸಿ.
	ಸ್ಥಳ	ಹಿರೇಮಲ್ಲಿನಕೇರಿ
		ತಾಲ್ಲೂಕು ಹೂವಿನ ಹಡಗಲಿ.
೨.	ಹೆಸರು	ರಾಗೀಬಾಯಿ, ಗಂಡ ಪಾಂಡುನಾಯ್ಕ
	ವಯಸ್ಸು	೨೩ ವರ್ಷ
	ಮಕ್ಕಳು	ಇಲ್ಲ
	ಉದ್ಯೋಗ :	ಕೂಲಿ
	ಶಿಕ್ಷಣ :	ಎಸ್.ಎಸ್.ಎಲ್.ಸಿ.
	ಸ್ಥಳ	ಕುಮಾರನಹಳ್ಳಿ ತಾಂಡ
		ತಾಲ್ಲೂಕು ಹೂವಿನ ಹಡಗಲಿ.
೩.	ಹೆಸರು :	ಉಮಾ, ಗಂಡ ಪಕ್ಕೀರಪ್ಪ
	ವಯಸ್ಸು	೨೦ ವರ್ಷ
	ಮಕ್ಕಳು :	ಇಲ್ಲ
	ಉದ್ಯೋಗ :	ಕೂಲಿ

ಶಿಕ್ಷಣ : ಇಲ್ಲ

ಸ್ಥಳ : ಇಟ್ಟಿಗಿ

ಹೂವಿನ ಹಡಗಲಿ.

೪. ಹೆಸರು : ಯಶಸ್ವಿನಿ ಗಂಡ ರಾಜಪ್ಪ

ವಯಸ್ಸು : ೨೮ ವರ್ಷ

ಮಕ್ಕಳು : ಇಲ್ಲ

ಉದ್ಯೋಗ ಆಯಾ (ಅಂಗನವಾಡಿ)

ಶಿಕ್ಷಣ ಎಸ್.ಎಸ್.ಎಲ್.ಸಿ.

ಸ್ಥಳ ಹೂವಿನ ಹಡಗಲಿ.

೫. ಹೆಸರು ಮಂಗಳಮ್ಮ, ಗಂಡ ರಾಮಣ್ಣ

ವಯಸ್ಸು ೩೦ ವರ್ಷ

ಮಕ್ಕಳು ೨ ಹೆಣ್ಣು

ಉದ್ಯೋಗ ಮನೆ ಕೆಲಸ

ಶಿಕ್ಷಣ ೫ನೇ ತರಗತಿ

ಸ್ಥಳ ಹೂವಿನ ಹಡಗಲಿ.

೬. ಹೆಸರು ಚಂದ್ರಮ್ಮ, ಗಂಡ ಲೋಕೇಶ

ವಯಸ್ಸು ೨೬ ವರ್ಷ

ಮಕ್ಕಳು ೧ ಹೆಣ್ಣು ಮಗು

ಉದ್ಯೋಗ : ಮನೆ ಕೆಲಸ

ಶಿಕ್ಷಣ : ಇಲ್ಲ

ಸ್ಥಳ : ಹೂವಿನ ಹಡಗಲಿ.

೭. ಹೆಸರು : ಬೊಮ್ಮಕ್ಕ, ಗಂಡ ಹನುಮಂತಪ್ಪ

ವಯಸ್ಸು : ೩೫ ವರ್ಷ

ಮಕ್ಕಳು : ೧ ಗಂಡು, ೩ ಹೆಣ್ಣು

ಉದ್ಯೋಗ : ಮನೆ ಕೆಲಸ

ಶಿಕ್ಷಣ : ೬ನೇ ತರಗತಿ

ಸ್ಥಳ : ಕೂಡ್ಲಿಗಿ.

೮. ಹೆಸರು : ಸಾವಿತ್ರಮ್ಮ, ಗಂಡ ಬಸವರಾಜ

ವಯಸ್ಸು : ೨೮ ವರ್ಷ

ಮಕ್ಕಳು : ಇಲ್ಲ

ಉದ್ಯೋಗ : ಕೂಲಿ

ಶಿಕ್ಷಣ : ಇಲ್ಲ

ಸ್ಥಳ : ಕೂಡ್ಲಿಗಿ.

೯. ಹೆಸರು : ಲಲಿತ, ಗಂಡ ಮಲ್ಲಣ್ಣ

ವಯಸ್ಸು : ೩೦ ವರ್ಷ

ಮಕ್ಕಳು : ೧ ಗಂಡು, ೧ ಹೆಣ್ಣು

ಉದ್ಯೋಗ : ಮನೆ ಕೆಲಸ

ಶಿಕ್ಷಣ : ೫ನೇ ತರಗತಿ

ಸ್ಥಳ : ಕೂಡ್ಲಿಗಿ.

೧೦. ಹೆಸರು : ಸವಿತ, ಗಂಡ ನಾಗರಾಜ

ವಯಸ್ಸು : ೨೩ ವರ್ಷ

ಮಕ್ಕಳು : ಇಲ್ಲ

ಉದ್ಯೋಗ : ಮನೆ ಕೆಲಸ

ಶಿಕ್ಷಣ : ಎಸ್.ಎಸ್.ಎಲ್.ಸಿ.

ಸ್ಥಳ : ಕೂಡ್ಲಿಗಿ.

೧೧. ಹೆಸರು : ಗಂಗಮ್ಮ, ಗಂಡ ಚನ್ನಪ್ಪ

ವಯಸ್ಸು : ೨೩ ವರ್ಷ

ಮಕ್ಕಳು : ಇಲ್ಲ

ಉದ್ಯೋಗ : ಮನೆ ಕೆಲಸ

ಶಿಕ್ಷಣ : ೮ನೇ ತರಗತಿ

ಸ್ಥಳ : ಹೂವಿನ ಹಡಗಲಿ.

೧೨. ಹೆಸರು : ಕೋಮಲೆ

ವಯಸ್ಸು : ೧೮ ವರ್ಷ

ಮಕ್ಕಳು : ಇಲ್ಲ

ಉದ್ಯೋಗ : ಮನೆ ಕೆಲಸ

ಶಿಕ್ಷಣ : ಇಲ್ಲ

ಸ್ಥಳ : ಬೆಂಗಳೂರು

೧೩. ಹೆಸರು : ರಮ್ಯ

ವಯಸ್ಸು : ೨೦ ವರ್ಷ

ಮಕ್ಕಳು : ಇಲ್ಲ

ಉದ್ಯೋಗ : ಇಲ್ಲ

ಶಿಕ್ಷಣ : ಪದವಿ

ಸ್ಥಳ : ಬೆಂಗಳೂರು

೧೪. ಹೆಸರು : ಸೋಮಕ್ಕ, ಗಂಡ ಕೊಟೇಶಿ

ವಯಸ್ಸು : ೩೦ ವರ್ಷ

ಮಕ್ಕಳು : ೧ ಗಂಡು, ೧ ಹೆಣ್ಣು

ಉದ್ಯೋಗ : ಮನೆ ಕೆಲಸ

ಶಿಕ್ಷಣ : ೯ನೇ ತರಗತಿ

ಸ್ಥಳ : ಹೂವಿನ ಹಡಗಲಿ

೧೫. ಹೆಸರು : ಜಯಬಾಯಿ, ಗಂಡ ರಾಜಪ್ಪ

ವಯಸ್ಸು : ೩೫ ವರ್ಷ

ಮಕ್ಕಳು : ೨ ಗಂಡು

ಉದ್ಯೋಗ : ಮನೆ ಕೆಲಸ

ಶಿಕ್ಷಣ : ಇಲ್ಲ

ಸ್ಥಳ : ಇಟಗಿ, ಹೂವಿನ ಹಡಗಲಿ.

೧೬. ಹೆಸರು : ಭಾಗ್ಯಮ್ಮ, ಗಂಡ ಶಿವಣ್ಣ

ವಯಸ್ಸು : ೩೨ ವರ್ಷ

ಮಕ್ಕಳು : ೨ ಗಂಡು

ಉದ್ಯೋಗ : ಮನೆ ಕೆಲಸ

ಶಿಕ್ಷಣ : ೪ನೇ ತರಗತಿ

ಸ್ಥಳ : ಹೂವಿನ ಹಡಗಲಿ.

೧೭. ಹೆಸರು : ಮಂಜಕ್ಕ, ಗಂಡ ದೇವೇಂದ್ರಪ್ಪ

ವಯಸ್ಸು : ೩೫ ವರ್ಷ

ಮಕ್ಕಳು : ೧ ಗಂಡು, ೩ ಹೆಣ್ಣು

ಉದ್ಯೋಗ : ಕೂಲಿ

ಶಿಕ್ಷಣ : ಇಲ್ಲ

ಸ್ಥಳ : ಹೂವಿನ ಹಡಗಲಿ.

೧೮. ಹೆಸರು : ಸುಶೀಲಮ್ಮ, ಗಂಡ ವೀರಭದ್ರಪ್ಪ

ವಯಸ್ಸು : ೩೦ ವರ್ಷ

ಮಕ್ಕಳು : ೨ ಗಂಡು, ೪ ಹೆಣ್ಣು

ಉದ್ಯೋಗ : ವ್ಯಾಪಾರ

ಶಿಕ್ಷಣ : ೮ನೇ ತರಗತಿ

ಸ್ಥಳ : ಹೂವಿನ ಹಡಗಲಿ.

೧೯. ಹೆಸರು : ಶಕುಂತಲಮ್ಮ, ಗಂಡ ಗಂಗಪ್ಪ

ವಯಸ್ಸು : ೩೬ ವರ್ಷ

ಮಕ್ಕಳು : ೨ ಗಂಡು, ೧ ಹೆಣ್ಣು

ಉದ್ಯೋಗ : ಹೋಟೆಲ್ ಕೆಲಸ

ಶಿಕ್ಷಣ : ೫ನೇ ತರಗತಿ

ಸ್ಥಳ : ಹೂವಿನ ಹಡಗಲಿ.

೨೦. ಹೆಸರು : ಶ್ಯಾಮಲ, ಗಂಡ ಜಗದೀಶ

ವಯಸ್ಸು : ೨೮ ವರ್ಷ

ಮಕ್ಕಳು : ೧ ಗಂಡು, ೩ ಹೆಣ್ಣು

ಉದ್ಯೋಗ : ವ್ಯಾಪಾರ

ಶಿಕ್ಷಣ : ಎಸ್.ಎಸ್.ಎಲ್.ಸಿ.

ಸ್ಥಳ : ಹೂವಿನ ಹಡಗಲಿ.

೨೧. ಹೆಸರು : ಹನುಮಕ್ಕ, ಗಂಡ ತಿಪ್ಪಣ್ಣ

ವಯಸ್ಸು : ೩೨ ವರ್ಷ

ಮಕ್ಕಳು : ೨ ಗಂಡು, ೧ ಹೆಣ್ಣು

ಉದ್ಯೋಗ : ಕೂಲಿ

ಶಿಕ್ಷಣ : ಇಲ್ಲ

ಸ್ಥಳ : ಹೂವಿನ ಹಡಗಲಿ.

೨೨. ಹೆಸರು : ದೇವಕ್ಕ, ಗಂಡ ತಿಪ್ಪಣ್ಣ

ವಯಸ್ಸು : ೩೦ ವರ್ಷ

ಮಕ್ಕಳು : ೪ ಗಂಡು

ಉದ್ಯೋಗ : ಮನೆ ಕೆಲಸ

ಶಿಕ್ಷಣ : ೫ನೇ ತರಗತಿ

ಸ್ಥಳ : ಹೂವಿನ ಹಡಗಲಿ.

೨೩. ಹೆಸರು : ಮೀನಾಕ್ಷಿ, ಗಂಡ ಈಶಣ್ಣ

ವಯಸ್ಸು : ೩೪ ವರ್ಷ

ಮಕ್ಕಳು : ಇಲ್ಲ

ಉದ್ಯೋಗ : ಮನೆ ಕೆಲಸ

ಶಿಕ್ಷಣ : ೫ನೇ ತರಗತಿ

ಸ್ಥಳ : ಕೂಡ್ಲಿಗಿ.

೨೪. ಹೆಸರು : ಅಕ್ಕಮ್ಮ, ಗಂಡ ರಮೇಶ

ವಯಸ್ಸು : ೨೮ ವರ್ಷ

ಮಕ್ಕಳು : ೨ ಗಂಡು, ೧ ಹೆಣ್ಣು

ಉದ್ಯೋಗ : ಮನೆ ಕೆಲಸ

ಶಿಕ್ಷಣ : ೭ನೇ ತರಗತಿ

ಸ್ಥಳ : ಕೂಡ್ಲಿಗಿ.

೨೫. ಹೆಸರು : ಅನ್ನಪೂರ್ಣ, ಗಂಡ ಶಿವಶಂಕರಪ್ಪ

ವಯಸ್ಸು : ೩೩ ವರ್ಷ

ಮಕ್ಕಳು : ೩ ಗಂಡು, ೧ ಹೆಣ್ಣು

ಉದ್ಯೋಗ : ಮನೆ ಕೆಲಸ

ಶಿಕ್ಷಣ : ೫ನೇ ತರಗತಿ

ಸ್ಥಳ : ಕೂಡ್ಲಿಗಿ.

೨೬. ಹೆಸರು : ಕೊತ್ಲಮ್ಮ, ಗಂಡ ಭೀಮೇಶ್

ವಯಸ್ಸು : ೨೯ ವರ್ಷ

ಮಕ್ಕಳು : ೧ ಗಂಡು, ೨ ಹೆಣ್ಣು

ಉದ್ಯೋಗ : ಮನೆ ಕೆಲಸ

ಶಿಕ್ಷಣ : ಎಸ್.ಎಸ್.ಎಲ್.ಸಿ.

ಸ್ಥಳ : ಕೂಡ್ಲಿಗಿ.

೨೭. ಹೆಸರು : ನಾಗರತ್ನಮ್ಮ, ಗಂಡ ಈರಣ್ಣ

ವಯಸ್ಸು : ೨೬ ವರ್ಷ

ಮಕ್ಕಳು : ಇಲ್ಲ

ಉದ್ಯೋಗ : ಕೂಲಿ

ಶಿಕ್ಷಣ : ಇಲ್ಲ

ಸ್ಥಳ : ಕೂಡ್ಲಿಗಿ.

೨೮. ಹೆಸರು : ಉಮಾದೇವಿ, ಗಂಡ ಕೊಟ್ರೇಶ

ವಯಸ್ಸು : ೩೨ ವರ್ಷ

ಮಕ್ಕಳು : ೩ ಹೆಣ್ಣು

ಉದ್ಯೋಗ : ಮನೆ ಕೆಲಸ

ಶಿಕ್ಷಣ : ಬಿ.ಎ.

ಸ್ಥಳ : ಕೂಡ್ಲಿಗಿ.

೨೯. ಹೆಸರು : ಶ್ರೀದೇವಿ, ಗಂಡ ಮಂಜುನಾಥ

ವಯಸ್ಸು : ೨೮ ವರ್ಷ

ಮಕ್ಕಳು : ೩ ಹೆಣ್ಣು

ಉದ್ಯೋಗ : ಮನೆ ಕೆಲಸ

ಶಿಕ್ಷಣ : ಪಿ.ಯು.ಸಿ.

ಸ್ಥಳ : ಕೂಡ್ಲಿಗಿ.

೩೦. ಹೆಸರು : ರಜೀಯಾಬಾನು, ಗಂಡ ಬುಡೇನ್‌ಸಾಬ್

ವಯಸ್ಸು : ೨೭ ವರ್ಷ

ಮಕ್ಕಳು : ಇಲ್ಲ

ಉದ್ಯೋಗ : ಮನೆ ಕೆಲಸ

ಶಿಕ್ಷಣ : ಪಿ.ಯು.ಸಿ.

ಸ್ಥಳ : ಕೂಡ್ಲಿಗಿ.

• • •